ಭರತೇಶವೈಭವ : ಛಂದಸ್ಸು ಮತ್ತು ಶೈಲಿ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್. ಸಂಪ್ರಬಂಧ)

ಸಂಶೋಧಕಿ

ದೀಪಾ ಕೆ.ಎಸ್.

ಮಾರ್ಗದರ್ಶಕರು

ಡಾ. ಎಸ್.ಎಸ್. ಅಂಗಡಿ

ಭಾಷಾ ನಿಕಾಯ

ಹಸ್ತಪ್ರತಿ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೭

451

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

Creator
Xerox & Book Binding
Dam Road, Hospet
Cell: 9343077795

451

AKSHARA GRANTHALAYA

ACC.NO. 130087

457



ಭರತೇಶವೈಭವ : ಛಂದಸ್ಸು ಮತ್ತು ಶೈಲಿ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್. ಸಂಪ್ರಬಂಧ)

ಸಂಶೋಧಕಿ
ದೀಪಾ .ಕೆ.ಎಸ್.

ಡಾ.ಗನ್ನಡ ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಾರ್ಗದರ್ಶಕರು
ಡಾ.ಎಸ್.ಎಸ್. ಅಂಗಡಿ

ಭಾಷಾ ನಿಕಾಯ
ಹಸ್ತಪ್ರತಿ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೦೭

ಭರತೇಶವೈಭವ : ಛಂದಸ್ಸು ಮತ್ತು ಶೈಲಿ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್. ಸಂಪ್ರಬಂಧ)

ಸಂಶೋಧಕಿ

ದೀಪಾ .ಕೆ.ಎನ್.

ಹಂಗನ್ನಡ ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರು

ಡಾ.ಎಸ್.ಎಸ್. ಅಂಗಡಿ

ಭಾಷಾ ನಿಕಾಯ

ಹಸ್ತಪ್ರತಿ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೭

8K0.91
DEE
130087

ಪ್ರಮಾಣ ಪತ್ರ

ಭರತೇಶವೈಭವ : ಛಂದಸ್ಸು ಮತ್ತು ಶೈಲಿ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ. ಎಸ್.ಎಸ್. ಅಂಗಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 1/8/07

Deepa. K. N

ದೀಪಾ .ಕೆ.ಎನ್

ಸಂಶೋಧಕರು

ಹಸ್ತಪ್ರತಿ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

ದೀಪಾ .ಕೆ.ಎನ್ ಇವರು **ಭರತೇಶವೈಭವ : ಛಂದಸ್ಸು ಮತ್ತು ಶೈಲಿ** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಳಿಗೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 1-8-07

ಡಾ. ಎಸ್.ಎಸ್. ಅಂಗಡಿ

ಮಾರ್ಗದರ್ಶಕರು

ಹಸ್ತಪ್ರತಿ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

[illegible]

[illegible]

[illegible]

[illegible]

[illegible]

[illegible]

ಕೃತಜ್ಞತೆಗಳು

ನಿಬಂಧವನ್ನು ಸಿದ್ಧಪಡಿಸಲು ಸೂಕ್ತ ಸಲಹೆ ಸೂಚನೆಗಳೊಂದಿಗೆ ತಾಳ್ಮೆಯಿಂದ ಮಾರ್ಗದರ್ಶನ ಮಾಡಿದ ಡಾ.ಎಸ್.ಎಸ್. ಅಂಗಡಿ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ನಿಬಂಧದ ಅಧ್ಯಯನಕ್ಕೆ ಎಲ್ಲಾ ರೀತಿಯ ನೆರವು ನೀಡಿದ ವಿವಿಧ ಆಯಾಮಗಳನ್ನು ಬೋಧಿಸಿದ ಹಸ್ತಪ್ರತಿ ವಿಭಾಗದ ಪ್ರೊ. ವಿರೇಶ ಬಡಿಗೇರ, ಪ್ರೊ.ಎಫ್.ಟಿ. ಹಳ್ಳಿಕೇರಿ, ಡಾ.ಕೆ. ರವೀಂದ್ರನಾಥ, ಡಾ. ಚನ್ನವೀರಪ್ಪ ಅವರ ಸಹಕಾರವನ್ನು ನೆನೆಯುತ್ತೇನೆ. ವಿಭಾಗದ ಬೋಧಕೇತರ ಸಿಬ್ಬಂದಿಗಳಿಗೂ ನನ್ನ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನ ಸಂಶೋಧನೆಯನ್ನು ನಡೆಸಲು ಸೂಕ್ತ ವಾತಾವರಣವನ್ನು ಕಲ್ಪಿಸಿದ ಹಿಂದಿನ ಕುಲಪತಿಗಳಾದ ಮಾನ್ಯ ಡಾ.ಬಿ.ಎ. ವಿವೇಕ ರೈ ಮತ್ತು ಇಂದಿನ ಪ್ರಭಾರಿ ಕುಲಪತಿಗಳಾದ ಡಾ.ಕೆ.ವಿ. ನಾರಾಯಣ ಅವರಿಗೆ, ಕುಲಸಚಿವರಿಗೆ, ಅಧ್ಯಯನಾಂಗದ ನಿರ್ದೇಶಕರಿಗೆ, ಗ್ರಂಥಪಾಲಕರಿಗೆ ಅಭಾರಿಯಾಗಿದ್ದೇನೆ.

ಸದಾ ಮಗಳ ಏಳ್ಗೆಯನ್ನು ಬಯಸುವ ತಂದೆ ತಾಯಿಯರಾದ ಅನಂತರಾವ್ ನಾಡಿಗೇರ್ ಮತ್ತು ಜಯಶ್ರೀ ಅವರಿಗೆ ನಾನು ಚಿರಋಣಿಯಾಗಿದ್ದೇನೆ. ಅಕ್ಕರೆಯ ಅಕ್ಕ ಅನುಪಮ (ರೂಪ), ಪ್ರೀತಿಯ ತಂಗಿ ವಿದ್ಯಾರ ಪ್ರೋತ್ಸಾಹವನ್ನು ಹಾಗೂ ನಾನು ಉನ್ನತ ವಿದ್ಯಾಭ್ಯಾಸಕ್ಕೆ ಬರಲು ಕಾರಣರಾದ ಮಾಮಂದಿರಾದ ಅರುಣ್‌ಕುಮಾರ ದೀಕ್ಷಿತ್, ಶಶಿಧರ ದೀಕ್ಷಿತ್ ಮತ್ತು ಚಿಕ್ಕಪ್ಪ, ಚಿಕ್ಕಮ್ಮಂದಿರನ್ನು, ಅಣ್ಣಂದಿರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ. ಈ ಅಧ್ಯಯನಕ್ಕೆ ಎಲ್ಲ ರೀತಿಯಿಂದಲೂ ಸಹಾಯ ಮಾಡಿದ ಗೆಳೆಯ ಮೃತ್ಯುಂಜಯ ಮತ್ತು ಅಧ್ಯಯನದ ಆರಂಭದಿಂದ ಅಂತ್ಯದವರೆಗೂ ಜೊತೆಯಲ್ಲಿದ್ದು ಸಲಹೆ ಸೂಚನೆಗಳನ್ನು ನೀಡಿದ ಶರಣಬಸವ, ಶೇಖರಾಚಾರಿ, ಅನ್ನಪೂರ್ಣ, ಗೌರಿ, ಅನು, ಮೇಘಾ, ಸುಮನ, ವಿಷ್ಣವಿ, ವಿಮಲಾ, ಸುಕನ್ಯಾ, ಸುರೇಶಗೌಡ, ಶಿವಾನಂದಚಾರಿ, ಬೇಬಿ, ಎ. ಭಾರತಿ ಮೇಡಂ ಇವರೆಲ್ಲರಿಗೂ ನನ್ನ ಕೃತಜ್ಞತೆಗಳು. ಅಲ್ಪಾವಧಿಯಲ್ಲೇ ಅಂದವಾಗಿ ಡಿ.ಟಿ.ಪಿ. ಮಾಡಿಕೊಟ್ಟ ಶ್ರೀಮತಿ ಎ. ನಾಗವೇಣಿಯವರನ್ನು ನಾನು ನೆನೆಯುತ್ತೇನೆ.

ದೀಪಾ ಕೆ.ಎನ್.

[illegible]

[illegible]

[illegible]

ಪರಿವಿಡಿ

ಗ್ರಂಥಾಲಯ,
ವಿಶ್ವವಿದ್ಯಾಲಯ,

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಕನ್ನಡ ಸಾಹಿತ್ಯವನ್ನು ವಿವಿಧ ಕಾಲಘಟ್ಟದ ದೃಷ್ಟಿಯಿಂದ ಪ್ರಾಚೀನ ಸಾಹಿತ್ಯ, ಮಧ್ಯಕಾಲೀನ ಸಾಹಿತ್ಯ, ಆಧುನಿಕ ಸಾಹಿತ್ಯ ಎಂದು ವಿದ್ವಾಂಸರು ವರ್ಗೀಕರಿಸಿದ್ದಾರೆ. ಮಧ್ಯಕಾಲೀನ ಕನ್ನಡ ಸಾಹಿತ್ಯವನ್ನು ಸು. ೧೩ನೇ ಶತಮಾನದಿಂದ ೧೮ನೇ ಶತಮಾನದ ವರೆಗಿನ ಅವಧಿ ಎಂದು ಸ್ಥೂಲವಾಗಿ ಗುರುತಿಸಬಹುದು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಧ್ಯಕಾಲೀನ ಸಾಹಿತ್ಯದ ಕಾಲಾವಧಿ ದೀರ್ಘವಾದದ್ದು. ಹಿಂದೆ ಇದ್ದ ಚಂಪೂ ಶೈಲಿಯ ಪ್ರಾಧಾನ್ಯತೆ ಕಡಿಮೆಯಾಗಿ ದೇಸೀ ಶೈಲಿಯತ್ತ ನಡೆಯುತ್ತಿರುವ ಕಾಲಾವಧಿ ಇದಾಗಿದೆ. ದೇಸೀ ಮಟ್ಟುಗಳು ಎನಿಸಿದ ತ್ರಿಪದಿ, ಷಟ್ಪದಿ, ಸಾಂಗತ್ಯ ಮುಂತಾದ ಅಚ್ಚಗನ್ನಡ ಮಟ್ಟುಗಳು ಈ ಕಾಲದಲ್ಲಿ ಬಳಕೆಗೆ ಬಂದವು. ಈ ಪ್ರಕಾರಗಳಲ್ಲಿ ಬರೆದ ಕೃತಿಗಳು ಜನಮನ್ನಣೆ ಪಡೆದವು. ತ್ರಿಪದಿಯನ್ನು ಸರ್ವಜ್ಞ ಪ್ರಸಿದ್ಧಿಗೆ ತಂದನು. ಷಟ್ಪದಿಯನ್ನು ಕುಮಾರವ್ಯಾಸ, ರಾಘವಾಂಕರು ಬಳಸಿ ಪ್ರಸಿದ್ಧಿಯನ್ನು ಪಡೆದರು.

ಪ್ರಸ್ತುತ ಈ ಅಧ್ಯಯನ ದೇಸೀ ಮಟ್ಟುನಲ್ಲೇ ಜನಪ್ರಿಯತೆಯನ್ನು ಪಡೆದ ಸಾಂಗತ್ಯದಂತಹ ಕಿರುಗಾತ್ರದ ಛಂದಸ್ಸಿನಲ್ಲಿ ಮಹಾಕಾವ್ಯವನ್ನು ಬರೆದು ಪ್ರಸಿದ್ಧಿಯ ಶಿಖರವೇರಿದವನು ಕವಿ ರತ್ನಾಕರವರ್ಣಿ. ಇವನು ಸಾಂಗತ್ಯದಲ್ಲಿ ರಚಿಸಿದ ಕಾವ್ಯ 'ಭರತೇಶವೈಭವ'ದ ಛಂದಸ್ಸು ಮತ್ತು ಶೈಲಿಯನ್ನು ಕುರಿತದ್ದಾಗಿದೆ. ಕವಿಯು 'ತ್ರಿಲೋಕ ಶತಕ', 'ರತ್ನಾಕರಾಧೀಶ್ವರ ಶತಕ', 'ಆಧ್ಯಾತ್ಮ ಗೀತೆಗಳು' ಎಂಬ ಕೃತಿಗಳನ್ನು ರಚಿಸಿದರೂ ಕವಿಗೆ ಕೀರ್ತಿಯನ್ನು ತಂದುಕೊಟ್ಟ ಕೃತಿ 'ಭರತೇಶವೈಭವ'. ಅಚ್ಚಗನ್ನಡ ದೇಸಿ ಮಟ್ಟಾದ ಸಾಂಗತ್ಯದಲ್ಲಿ ಈ ಕೃತಿ ರಚಿಸಿದ್ದರಿಂದಲೇ ಇದು ಹೆಚ್ಚು ಜನಪ್ರಿಯವಾದಂತೆಯೇ, ವಿದ್ವಾಂಸರಲ್ಲಿಯೂ ಚರ್ಚೆಗೊಂಡ ಕೃತಿಯಾಯಿತು.

'ಭರತೇಶವೈಭವ'ವನ್ನು ಕುರಿತು ಅನೇಕ ಬಿಡಿ ಬಿಡಿ ಲೇಖನಗಳು, ಕವಿಯನ್ನು ಅವನ ಕಾಲ, ಕೃತಿಗಳನ್ನು ಕುರಿತಂತೆ ಕೆಲವು ಪುಸ್ತಕಗಳು ಬಂದಿವೆ. ಶಾಸ್ತ್ರೀಯ ಸಂಪುಟ ೪ ರಲ್ಲಿ ಟಿ.ವಿ. ವೆಂಕಟಾಚಲಶಾಸ್ತ್ರಿಯವರು 'ರತ್ನಾಕರವರ್ಣಿ ಮತ್ತು ಸಾಂಗತ್ಯ ಛಂದಸ್ಸು' (೧೯೮೪), 'ಸಾಂಗತ್ಯ ಗ್ರಂಥಗಳಲ್ಲಿ ಭರತೇಶವೈಭವದ ಸ್ಥಾನ' (೧೯೮೪) ಎಂಬ ಲೇಖನವನ್ನು ಬರೆದಿದ್ದಾರೆ. ಈ ವಿದ್ವಾಂಸರೇ 'ಕವಿಕಾವ್ಯ ಪರಂಪರೆ-೧೯ ರತ್ನಾಕರವರ್ಣಿ' ಎಂಬ ಕವಿಗೆ ಸಂಬಂಧಿಸಿದ ಪುಸ್ತಕದಲ್ಲಿ ಇದೇ ಲೇಖನವನ್ನು 'ಸಾಂಗತ್ಯ

[illegible]

[illegible]

[illegible]

[illegible]

[illegible]

ಗ್ರಂಥಗಳಲ್ಲಿ ರತ್ನಾಕರನ ಭರತೇಶವೈಭವದ ಸ್ಥಾನ'ವೆಂದು ಬರೆದಿದ್ದಾರೆ. ಡಾ. ವಿಠಲರಾವ್ ಗಾಯಕ್‌ವಾಡ್ ಅವರು 'ರೂಪ-ಸ್ವರೂಪ' ಎಂಬ ಕೃತಿಯಲ್ಲಿ 'ರತ್ನಾಕರವರ್ಣಿಯ ಭರತೇಶವೈಭವ ಹೊಸ ದೃಷ್ಟಿ ಧೋರಣೆ' ಎಂಬ ಲೇಖನವನ್ನು ಹೊಸ ದೃಷ್ಟಿಕೋನದಿಂದ ನೋಡಿದ್ದಾರೆ. 'ಶತಮಾನದ ಸಾಹಿತ್ಯ ವಿಮರ್ಶೆ'ಯಲ್ಲಿ ಜಿ.ಎಸ್. ಶಿವರುದ್ರಪ್ಪನವರು 'ರತ್ನಾಕರನ ಭೋಗ-ಯೋಗದ ತೊಡಕು' ಎಂಬ ಲೇಖನ ಕಾವ್ಯದಲ್ಲಿ ಕವಿ ತಂದಿರುವ ಭೋಗ ಮತ್ತು ಯೋಗ ಸಮನ್ವಯವನ್ನು ತಿಳಿಸಿದ್ದಾರೆ. 'ಸಾಹಿತ್ಯ ವಿಮರ್ಶೆ ೧೯೯೩' ರಲ್ಲಿ 'ರತ್ನಾಕರವರ್ಣಿಯ ಧಾರ್ಮಿಕ ಸಮನ್ವಯ ದೃಷ್ಟಿ' ಎಂಬ ಲೇಖನವನ್ನು ಶಿವರಾಮಯ್ಯನವರು ಬರೆದಿದ್ದಾರೆ. ಇದರಲ್ಲಿ ಕವಿಗೆ ಪ್ರಭಾವ ಬೀರಿದ ಧರ್ಮಗಳು ಮತ್ತು ಅವುಗಳ ಮುಖ್ಯ ಅಂಶಗಳನ್ನು ತನ್ನ ಕಾವ್ಯದಲ್ಲಿ ಅಳವಡಿಸಿಕೊಂಡು ತನ್ನ ಧರ್ಮದಲ್ಲಿರುವ ಮೂಢನಂಬಿಕೆಯನ್ನು ಬದಿಗೊತ್ತಿ ಜೈನ ಧರ್ಮಕ್ಕೆ ಹೊಸ ಮಾರ್ಗವನ್ನು ಸೂಚಿಸಿ ಧಾರ್ಮಿಕ ಸಮನ್ವಯತೆಯನ್ನು ಮಾಡಿದ ಬಗೆಯನ್ನು ಹೇಳಲಾಗಿದೆ.

'ವಿಮರ್ಶೆ ಸಂಪುಟ-೩ ಕವಿಕಾವ್ಯ ಪರಂಪರೆ' ವಿ. ಸೀತಾರಾಮಯ್ಯ ಇದರಲ್ಲಿ 'ರತ್ನಾಕರವರ್ಣಿ' ಎಂಬ ಲೇಖನ ಕವಿಗೆ ಸಂಬಂಧಿಸಿದ್ದಾಗಿದೆ. 'ಸಾಹಿತ್ಯ ಯೋಗ' ಸಂ. ವಾಮನಬೇಂದ್ರೆ ಇದರಲ್ಲಿ 'ರತ್ನಾಕರನ ಭರತ' ಎಂಬ ಲೇಖನವನ್ನು ನೋಡಬಹುದು. ಹೀಗೆ ಇನ್ನು ಹೆಚ್ಚು ಬಿಡಿ ಬಿಡಿಯಾದ ಲೇಖನಗಳು ಕವಿ ಮತ್ತು ಕೃತಿಯನ್ನು ಕುರಿತಾಗಿ ಬಂದಿವೆ. ಅಲ್ಲದೆ ಹಂಪನಾ, ಜಿ. ಬ್ರಹ್ಮಪ್ಪ, ತ.ಸು. ಶಾಮರಾಯ, ಟಿ.ವಿ. ವೆಂಕಟಾಚಲಶಾಸ್ತ್ರೀ ಮುಂತಾದ ವಿದ್ವಾಂಸರು ಕವಿ, ಕೃತಿಗಳ ಬಗ್ಗೆ ಹೆಚ್ಚು ಕೆಲಸ ಮಾಡಿದ್ದಾರೆ.

ಪ್ರಸ್ತುತ ಈ ಅಧ್ಯಯನವು 'ಭರತೇಶವೈಭವ : ಛಂದಸ್ಸು ಮತ್ತು ಶೈಲಿ' ಕುರಿತದ್ದಾಗಿದೆ. ಕವಿಯು ಕನ್ನಡ ಜಾಯಮಾನಕ್ಕೆ ಒಗ್ಗುವ ಕಿರಿದಾದ ದೇಸೀ ಛಂದ ಪ್ರಕಾರ ಸಾಂಗತ್ಯದಲ್ಲಿ ಕಾವ್ಯವನ್ನು ಹೇಗೆ ಅಭಿವ್ಯಕ್ತಿಸಿದ್ದಾನೆ, ಆ ಛಂದಸ್ಸನ್ನು ಹೇಗೆ ವಿನ್ಯಾಸಗೊಳಿಸಿದ್ದಾನೆ ಎಂದು ಅಧ್ಯಯನ ಮಾಡಲಾಗಿದೆ. ಸಾಂಗತ್ಯದ ಹುಟ್ಟು, ಬೆಳವಣಿಗೆ, ಇತಿಹಾಸ, ಲಕ್ಷಣವನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ರತ್ನಾಕರವರ್ಣಿ ಕಾವ್ಯದಲ್ಲಿ ಬಳಸಿದ ಹೊಸ ನುಡಿಗಟ್ಟುಗಳು, ಪುನರುಕ್ತಿಗಳು, ಜೋಡಿಪದಗಳು, ಅಲಂಕಾರಗಳು ಈ ಎಲ್ಲವೂ ಅವನ ಭಾಷಾಶೈಲಿಯ ವೈಶಿಷ್ಟ್ಯತೆಯನ್ನು ಎತ್ತಿಹಿಡಿದಿವೆ. ಇವುಗಳನ್ನು ಶೈಲಿಗೆ ಸಂಬಂಧಿಸಿದ ಅಧ್ಯಾಯದಲ್ಲಿ ಹೇಳಲಾಗಿದೆ. ಈತನ ಶೈಲಿ ಎಷ್ಟು ಸಹಜವೂ ಅಷ್ಟೇ ಸರಳವಾಗಿದೆ. ಯಾವುದೇ ಸನ್ನಿವೇಶವನ್ನಾದರೂ ಸರಳಗೊಳಿಸಿ ಬಿಡುತ್ತಾನೆ. ಹೀಗೆ ಇನ್ನು ಕೆಲವು ಅಂಶಗಳನ್ನು ಉದಾಹರಣೆ ಸಹಿತವಾಗಿ ಹೇಳಲಾಗುತ್ತದೆ.

ಇದಕ್ಕೆ ಸಂಬಂಧಿಸಿದಂತೆ ಅಲ್ಪಪ್ರಮಾಣದಲ್ಲಿ ಲೇಖನಗಳ ರೂಪದಲ್ಲಿ ಬಂದಿವೆ. ಆದರೆ ಇದನ್ನು ಸಂಶೋಧನೆಗೆ ಅಧ್ಯಯನವಾಗಿ ಯಾರೂ ತೆಗೆದುಕೊಂಡಿಲ್ಲ. ಪಂಪ, ರನ್ನ ಹೀಗೆ ಮುಂತಾದ ಪ್ರಸಿದ್ಧ ಕವಿಗಳ ಬಗ್ಗೆ ಅನೇಕ ಅಧ್ಯಯನಗಳು ನಡದಿವೆ. ಆದರೆ ರತ್ನಾಕರನ ಬಗ್ಗೆ ಅವನ ಸಮಗ್ರ ಕಾವ್ಯಗಳ ಬಗ್ಗೆ ಛಂದಸ್ಸು ಮತ್ತು ಶೈಲಿಯ ದೃಷ್ಟಿಯಿಂದ ಅಧ್ಯಯನ ನಡೆದಿಲ್ಲ. ಹೊಸಗನ್ನಡದ ಕಥೆ, ಕಾದಂಬರಿ, ಕಾವ್ಯಗಳ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ ಇಂದಿನ ವಿದ್ಯಾರ್ಥಿಗಳು ನಮ್ಮ ಪ್ರಾಚೀನ ಕವಿಗಳು ಅವರ

[illegible]

ಕಾವ್ಯಗಳನ್ನು ಮರೆತಿದ್ದಾರೆ. ನಮ್ಮ ಪ್ರಾಚೀನ ಕನ್ನಡ ಸಾಹಿತ್ಯದ ಬಗ್ಗೆ ಹೆಚ್ಚು ಗಮನಹರಿಸುವುದು ಅಗತ್ಯವಾಗಿದೆ. ಕನ್ನಡ ಕವಿಗಳಲ್ಲಿ ಅತಿಮುಖ್ಯನಾದ ರತ್ನಾಕರ ಮತ್ತು ಅವನ ಕೃತಿಗಳ ಬಗ್ಗೆ ಹೆಚ್ಚಿನ ಸಂಶೋಧನೆಗಳು ಆಗಬೇಕಾಗಿದೆ. ಇದರಲ್ಲಿ ನನ್ನದೂ ಒಂದು ಚಿಕ್ಕ ಪ್ರಯತ್ನವಾಗಿದೆ.

ರತ್ನಾಕರವರ್ಣಿಯ `ಭರತೇಶವೈಭವ`ವನ್ನು ಮುಖ್ಯ ಕೇಂದ್ರವಾಗಿಟ್ಟುಕೊಂಡು ಚರ್ಚಿಸುವುದಾಗಿದೆ. ಈ ಅಧ್ಯಯನದ ಸ್ವರೂಪವನ್ನು ಹೀಗೆ ವರ್ಗೀಕರಿಸಲಾಗಿದೆ. ೧. ಭರತೇಶವೈಭವದ ವಸ್ತುವಿನ್ಯಾಸ, ೨. ಭರತೇಶವೈಭವ ಛಂದಸ್ಸಿನ ವಿನ್ಯಾಸ ಮತ್ತು ಅಭಿವ್ಯಕ್ತಿ ಧೋರಣೆ, ೩. ಭರತೇಶವೈಭವ ಶೈಲಿ ನಿರೂಪಣೆಯ ದನಿ. ಈ ಸ್ವರೂಪದಲ್ಲಿ ಅಧ್ಯಯನ ಮಾಡಲಾಗಿದೆ.

ರತ್ನಾಕರವರ್ಣಿಯು ತ್ರಿಲೋಕ ಶತಕ, ರತ್ನಾಕರ ಶತಕ, ಅಪರಾಜಿತೇಶ್ವರ ಶತಕ, ಆಧ್ಯಾತ್ಮ ಗೀತೆಗಳು, ಭರತೇಶವೈಭವ ಎಂಬ ಕೃತಿಗಳನ್ನು ರಚಿಸಿದ್ದಾನೆ. ಸಾಹಿತ್ಯದಲ್ಲಿ ಇವೆಲ್ಲ ಕೃತಿಗಳ ಬಗ್ಗೆ ಸ್ವಲ್ಪಮಟ್ಟಿಗೆ ಚರ್ಚೆಯಾಗಿವೆ. ಒಟ್ಟಾರೆ ಈ ಅಧ್ಯಯನದ ವ್ಯಾಪ್ತಿ ಭರತೇಶವೈಭವದ ಛಂದಸ್ಸು ಮತ್ತು ಶೈಲಿಯನ್ನು ಕುರಿತು ಹೇಳುವುದಾಗಿದೆ.

*****

ಅಧ್ಯಾಯ ೨

ಭರತೇಶವೈಭವ : ವಸ್ತುವಿನ್ಯಾಸ

ಅಧ್ಯಾಯ ೨

ಭರತೇಶವೈಭವ : ವಸ್ತುವಿನ್ಯಾಸ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮತಧರ್ಮವೇ ಪ್ರಧಾನವಾದದ್ದು. ಬೌದ್ಧ, ಜೈನ, ವೀರಶೈವ, ವೈದಿಕ ಮುಂತಾದ ಮತಧರ್ಮಗಳಿಂದ ಕಾವ್ಯಗಳು ರಚನೆಗೊಂಡವು. ಕಾಲದಿಂದ ಕಾಲಕ್ಕೆ ಸಂಪ್ರದಾಯದಿಂದ ಸ್ಥಗಿತಗೊಂಡ ಜನಜೀವನಕ್ಕೆ ಈ ಕಾವ್ಯಗಳು ಹೊಸ ಚಾಲನೆಯನ್ನು ನೀಡಿದವು. ಒಂದಕ್ಕಿಂತ ಒಂದು ಮತಧರ್ಮಗಳು ಒಂದಕ್ಕಿಂತ ಒಂದು ಮಿಗಿಲಾಗಿ ಆಚರಣೆಗೆ ಬಂದವು. ಒಂದರ ಉನ್ನತಿ ಮತ್ತೊಂದರ ಅವನತಿಗೆ ಕಾರಣವಾಯಿತು. ಪ್ರಾಚೀನ ಕಾಲದ ಕವಿಗಳು ಹೆಚ್ಚಾಗಿ ಸಂಸ್ಕೃತ ಭೂಯಿಷ್ಠ ಚಂಪೂ ಶೈಲಿಯಲ್ಲೇ ಕಾವ್ಯ ಬರೆದರು. ರಾಜರು ಪಂಡಿತರ ಮನ್ನಣೆ ಪಡೆಯಲು ಈ ರೀತಿಯ ಕಾವ್ಯಗಳು ರಚನೆಗೊಂಡವು. ಜನಸಾಮಾನ್ಯರಿಗೆ ಈ ಕಾವ್ಯಗಳು ಅರ್ಥವಾಗದೆ ಇದರಿಂದ ದೂರ ಉಳಿದವು. ಈ ರೀತಿ ವೈದಿಕ ಧರ್ಮದ ಸಂಪ್ರದಾಯದ ಜಡತ್ವದಿಂದ ಸ್ಥಗಿತಗೊಂಡ ಜನಸಮುದಾಯದ ಪರವಾಗಿ ಕೆಲವು ಧರ್ಮಗಳ ಮೂಲಕ ಕಾವ್ಯಗಳು ಹುಟ್ಟಿಕೊಂಡವು. ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗಲೆಂದೇ ದೇಸೀ ಮಟ್ಟುಗಳ ಕಾವ್ಯಗಳು ಹೊರಬಂದವು. ವಚನ, ತ್ರಿಪದಿ, ಷಟ್ಪದಿ, ಸಾಂಗತ್ಯ ಹೀಗೆ ಮುಂತಾದ ದೇಸೀ ರೂಪಗಳು ಬಳಕೆಗೆ ಬಂದವು.

೧೨ನೇ ಶತಮಾನದಲ್ಲಿ ವಚನವೆಂಬ ಅಭಿವ್ಯಕ್ತಿ ರೂಪವನ್ನು ವೀರಶೈವ ಅನುಭಾವಿ ಚಿಂತಕರು ಬಳಸಿಕೊಂಡರು. ಇವರು ಅಷ್ಟಾದಶ ವರ್ಣನೆಗಳನ್ನು ಸಂಸ್ಕೃತ ಭೂಯಿಷ್ಠ ಸಿದ್ಧ ಮಾದರಿಯ ಭಾಷೆಯನ್ನು ಕೈಬಿಟ್ಟು ಸರಳವಾದ, ಆಡುಮಾತಿನ, ಜನಸಾಮಾನ್ಯರನ್ನು ಸ್ಪಂದಿಸುವ ಒಂದು ಹೊಸ ಬಗೆಯನ್ನು ಕನ್ನಡ ಸಾಹಿತ್ಯಕ್ಕೆ ಹೊಸ ತಿರುವನ್ನು ತಂದುಕೊಟ್ಟಿತು. ನಂತರ ಷಟ್ಪದಿಯನ್ನು ರಾಘವಾಂಕ ಬಳಸಿದ ಚಂಪೂವಿನ ವಿಶೇಷ ಗುಣಲಕ್ಷಣಗಳೆಲ್ಲಾ ಇದರಲ್ಲೇ ತರುವ ಪ್ರಯತ್ನವನ್ನು ಷಟ್ಪದಿ ಕವಿಗಳು ಮಾಡಿದರು. ಶಿವಶರಣರ ಚರಿತ್ರೆಯನ್ನು ಹರಿಹರ ರಗಳೆಯಲ್ಲಿ ರಚಿಸಿದನು. ಹೀಗೆ ಒಂದೊಂದು ಸಾಹಿತ್ಯದ ರೂಪವನ್ನು ಕವಿಗಳು ಆಯ್ದುಕೊಂಡು ಅದರಲ್ಲೇ ಕೃತಿಯನ್ನು ಬರೆದು ಪ್ರಸಿದ್ಧಿ ಪಡೆದರು.

ಚಂಪೂ, ವಚನ, ರಗಳೆ, ಷಟ್ಪದಿ ಇವುಗಳು ಒಂದಾದ ಮೇಲೆ ಒಂದರಂತೆ ವಿಶೇಷವಾಗಿ ಬೆಳೆದು ಬಂದು ಕನ್ನಡ ಸಾಹಿತ್ಯವನ್ನು ೧೫ನೇ ಶತಮಾನದವರೆಗೆ ಬೆಳೆಸಿದವು. ೧೬, ೧೭ನೇ ಶತಮಾನದಲ್ಲಿ ಸಾಂಗತ್ಯವೆಂಬ ದೇಸೀ ಮಟ್ಟು ವಿಶೇಷವಾಗಿ ಬೆಳೆದು ಬಂದಿತು. ಸಾಂಗತ್ಯವನ್ನು ಬಳಸಿಕೊಂಡು ಅನೇಕ

[illegible]

[illegible]

[illegible]

[illegible]

[illegible]

ಕವಿಗಳು ಕಾವ್ಯಗಳನ್ನು ರಚಿಸಿದರು. ಆ ಪ್ರಕಾರದಲ್ಲಿ ಪ್ರಸಿದ್ಧಿ ಪಡೆದವನು ರತ್ನಾಕರವರ್ಣಿ. ಇವನು `ಭರತೇಶವೈಭವ` ಎಂಬ ಸಾಂಗತ್ಯದ ಮೇರು ಕೃತಿಯನ್ನು ರಚಿಸಿದನು. ಸಾಂಗತ್ಯ ಗ್ರಂಥಗಳಲ್ಲೇ ಇದರ ಸ್ಥಾನ ಮೇಲಿನದು. ಸಾಂಗತ್ಯ ಕವಿಗಳಲ್ಲೆಲ್ಲಾ ರತ್ನಾಕರನು ಸಮರ್ಥನೂ, ಪ್ರಭಾವಶಾಲಿಯೂ ಆದ ಕವಿ. ಅವನು ಜೈನ ಕವಿ. ಕನ್ನಡ ಕಾವ್ಯಕ್ಕೆ ಕಿರೀಟಪ್ರಾಯರಾದ ಹತ್ತೆಂಟು ಕವಿಗಳಲ್ಲಿ ರತ್ನಾಕರವರ್ಣಿಯೂ ಒಬ್ಬನು. "ಚಂಪೂವಿಗೆ ಪಂಪ, ಕಂದಕ್ಕೆ ಜನ್ನ, ರಗಳೆಗೆ ಹರಿಹರ, ವಾರ್ಧಕಕ್ಕೆ ರಾಘವಾಂಕ, ಭಾಮಿನಿಗೆ ಕುಮಾರವ್ಯಾಸ, ಗೀತೆಗಳಿಗೆ ನಿಜಗುಣ, ಕೀರ್ತನೆಗಳಿಗೆ ಪುರಂದರದಾಸ, ತ್ರಿಪದಿಗೆ ಸರ್ವಜ್ಞ ಕೈ ಎತ್ತಿದಂತೆ ರತ್ನಾಕರವರ್ಣಿಯು ಸಾಂಗತ್ಯದಲ್ಲಿ ಮಹಾಕಾವ್ಯವನ್ನು ಬರೆದು ಅಮರನಾಗಿದ್ದಾನೆ" (ಸಂ.ವಾಮನಬೇಂದ್ರೆ, ೧೯೬೫, ಪು.೬೭).

ಕವಿಯು ೧೫ನೇ ಶತಮಾನದ ಅಂತ್ಯ ಮತ್ತು ೧೬ನೇ ಶತಮಾನದ ಆದಿಯಲ್ಲಿ ಜೀವಿಸಿದ್ದ. ವಿಜಯನಗರ ಸಾಮ್ರಾಜ್ಯವು ವೈಭವ ಶಿಖರಕ್ಕೆ ಏರಿ ಮತ್ತೇ ಅದು ಅವನತಿಯತ್ತ ಸಾಗುತ್ತಿದ್ದ ಕಾಲದಲ್ಲಿ ಕವಿಯು ದಕ್ಷಿಣಕನ್ನಡದ ವೇಣುಪುರ ಎನಿಸಿಕೊಂಡ ಸಾವಿರಕಂಬದ ಬಸದಿಗೆ ಪ್ರಖ್ಯಾತವಾದ ಮೂಡಬಿದಿರಿಯಲ್ಲಿ ಹುಟ್ಟಿದನು. ಸೂರ್ಯವಂಶಕ್ಕೆ ಸೇರಿದ ರಾಜಮನೆತನದಲ್ಲಿ ಹುಟ್ಟಿದ ಕವಿಯು ವಿಜಯನಗರದ ಸಾಮಂತ ರಾಜರಾದ ಭೈರಸ ಒಡೆಯರ ಆಶ್ರಯ ಪಡೆದನು. ರಾಜಮನೆತನದಲ್ಲಿ ಹುಟ್ಟಿದ ಇವನು ಇನ್ನೊಬ್ಬ ರಾಜರ ಆಶ್ರಯ ಏಕೆ ಪಡೆದನು ಎಂಬುದು ಚರ್ಚಾಸ್ಪದವಾಗಿದೆ.

ರತ್ನಾಕರವರ್ಣಿಗೆ `ರತ್ನಾಕರಸಿದ್ಧ` `ರತ್ನಾಕರ ಅಣ್ಣ` ಎಂದು ಪರ್ಯಾಯ ನಾಮಗಳಿದ್ದವು. ಅದರಲ್ಲಿ ಕವಿಗೆ ರತ್ನಾಕರಸಿದ್ಧ ಎಂಬುದು ಪ್ರಿಯವಾದ ಹೆಸರು "ಸಿದ್ಧಪದಕೆ ಸೋತೆನಾಗಿ ರತ್ನಾಕರಸಿದ್ಧನೆಂದನಲೊಲ್ದೆ" ಎಂದು ಹೇಳಿಕೊಂಡಿದ್ದಾನೆ. ಇವನು ಭರತೇಶವೈಭವವಲ್ಲದೆ `ಅಪರಾಜಿತೇಶ್ವರ ಶತಕ`, `ತ್ರಿಲೋಕ ಶತಕ`, `ರತ್ನಾಕರದೀಶ್ವರ ಶತಕ` ಎಂಬ ಶತಕತ್ರಯವನ್ನು ಮತ್ತು ೨೦೦೦ ಆಧ್ಯಾತ್ಮ ಗೀತೆಗಳನ್ನು ರಚಿಸಿದ್ದಾನೆ. ಈ ಎಲ್ಲ ಕೃತಿಗಳಲ್ಲಿ ಎಲ್ಲಿಯೂ ಕವಿ ತನ್ನ ಸ್ವಂತ ವಿಚಾರವನ್ನು, ತಂದೆ ತಾಯಿ ಹೆಸರನ್ನು ಹೇಳಿಕೊಂಡಿಲ್ಲ. `ಮಂದರಸ್ವಾಮಿ ನನ್ನಯ್ಯ` ಎಂದು ಹೇಳಿದ್ದಾನೆ. ಅಲ್ಲದೆ "ದೇಶ ಗಣಾಗ್ರಣಿ ಚಾರುಕೀರ್ತ್ಯಾಚಾರ್ಯ" "ಮೋಕ್ಷಾಗ್ರಗುರು ಹಂಸನಾಥ" ಎಂದು ತನ್ನ ಗುರುಗಳ ವಿಷಯವಾಗಿ ಹೇಳಿಕೊಂಡಿದ್ದಾನೆ. ಮೋಕ್ಷಾಗ್ರ ಗುರು ಹಂಸನಾಥನಿಗೆ ತಲೆಬಾಗಿ ತಾನು ಈ ಭರತೇಶ ವೈಭವವನ್ನು ರಚಿಸಿದೆನು ಎಂದು ಹೇಳಿದ್ದಾನೆ.

ಕನ್ನಡದ ಅನೇಕ ಪ್ರಾಚೀನ ಕವಿಗಳ ವಿಷಯದಲ್ಲಿ ಆದಂತೆ ಇವನ ಕಾಲದ ಬಗೆಗೂ ವಿಸ್ತಾರವಾದ ಚರ್ಚೆಯಿದೆ. ರತ್ನಾಕರನ ಜೀವನದ ಮೇಲೆ ಬೆಳಕು ಬೀರುವ ಆಕರಗಳಲ್ಲಿ ದೇವಚಂದ್ರನ ರಾಜಾವಳಿ ಕಥೆ (ಕ್ರಿ.ಶ. ೧೭೭೦-೧೮೪೧) ಈ ಕೃತಿಯಲ್ಲಿ ರತ್ನಾಕರನ ಬಗ್ಗೆ ಉಲ್ಲೇಖವನ್ನು ನೋಡಬಹುದು. "ತುಳುವ ದೇಶದ ಮೂಡಬಿದರೆಯೊಳ್ ಸೂರ್ಯವಂಶದರಸುಗಳನ್ವಯದೊಳ್ ದೇವರಾಜನ ಪುತ್ರಂಗೆ ಕಡಲಾದಿ ಪರಮೇಶನ ಪೆಸರಿಡೆ ಬಾಲಕಾಲದೊಳೆ ಕಾವ್ಯಾಲಂಕಾರ ಲಕ್ಷಣಶಾಸ್ತ್ರದೊಳತಿ ನಿಪುಣನಾಗಿ ಸಾರತ್ರಯಕ್ಕೆ ಕೇಶವವರ್ಯರು ರಚಿಸಿದ ವ್ಯಾಖ್ಯಾನಂಗಳಂ ಕುಂದಕುಂದಾರ್ಯೋಕ್ತ ಆಧ್ಯಾತ್ಮ ಸಿದ್ಧಾಂತಕ್ಕೆ ಪ್ರಭೇಂದುಗಳು

[illegible]

[illegible]

[illegible]

ಮಾಡಿದ ಟೀಕಂ ಸಮಾಧಿಶತಕ ಏಕಸಪ್ತತಿ ಸ್ವರೂಪ ಸಂಭೋದನೆ ಮೊದಲಾದನೇಕ ಪರಮಾಗಮಂಗಳಂ ಹೃದ್ಗತಮಾಗೆ ತಿಳಿದು ಕವೀಶ್ವರನಾಗಿ ಆ ದೇಶದರಸು ಸೋಮವಂಶದ ಭೈರಸ ಒಡೆಯರ ಸಭೆಯೊಳ್ ಶೃಂಗಾರ ಕವಿಯೆಂಬ ಪೆಸರಾಂತು ವಿದ್ವಾಂಸರ್ಗಧಿಕನಾಗಿ ಯೋಗಿರತ್ನಾಕರ ಶಾಸ್ತ್ರಾಭ್ಯಾಸದಿಂ ದಶವಾಯುಗಳಂ ಸಾಧಿಸಿರ್ದು ರತ್ನಾಕರನೆಂಬಭಿಧಾನದಿಂ ಪೂರ್ವ ವಯಸ್ಸಿನೊಳೆ ಭೈರಸ ಒಡೆಯರ ಪುತ್ರಿ ಮೋಹಿಸೆ ಸೌಧಾಗ್ರಮನೇಱೆ ವಾಯುಧಾರಣೆಯಂ ಮಾಡಿ ದಶವಾಯುಗಳಂ ಸಾಧಿಸಿ ಯೋಗಾಭ್ಯಾಸದೊಳೆ ಪ್ರೌಢನಾಗಿರ್ದುವಱೆಂದಾಕೆ - ಯೊಳತ್ಯಾಸಕ್ತನಾಗಿ ಆಕೆಯಂ ಕೂಡಲು ಸೌಧಾಗ್ರದ ಮೇಖಲೆಯನೇಱೆ ವಾಯುಧಾರಣೆಯಿಂ ಗವಾಕ್ಷಿವಿಂದ್ಯೈದುತ್ತೆ ಅವಳೊಳೆ ನೇಹಂ ಮಾಟುತ್ತಿರಲ್ ಅರಸ ನಱೆದು ಪಿಡಿಯಲು ದ್ಯೋಗಿಸಲ್ ಆ ರಾತ್ರಿಯೊಳೆ ಪೋಗಿ ನಿಜಗುರುವಪ್ಪ ಮಹೇಂದ್ರ ಕೀರ್ತಿಗಳಿಂದ ಅಣುವ್ರತ ದೀಕ್ಷೆಗೊಂಡು ಆಗಮಂಗಳೊಳತೆ ನಿಪುಣನಾಗಿ ಆಧ್ಯಾತ್ಮದೊಳಹರ್ನಿಶಂ ಕೂಡಿರೆ ವಿಜಯ ಕೀರ್ತಿಗಳೆಂಬ ಪಟ್ಟಾಚಾರ್ಯರ ಶಿಷ್ಯರಾದ ವಿಜಯಣ್ಣಗಳು ದ್ವಾದಶಾನುಪ್ರೇಕ್ಷೆಗಳಂ ಕನ್ನಡದಿಂ ಸಂಗೀತಮಾಗಿ ವೃತ್ತ, ವಚನದಿಂ ಮಾಡಿ ಆನೆಯ ಮೇಲೆ ಪ್ರಭಾವನೆಯಂ ಮಾಡಿಸಲೀ ರತ್ನಾಕರಾರ್ಯಂ ಭರತೇಶ್ವರ ಚರಿತಮಂ ೮೪ ಸಂಧಿಯಂ ಮಾಡಿ ಮಾತಂಗ ಮನೇಱೆಸಿ ಮೆಱೆಯಿಸವೇೞ್ಕೆಂಬುದುಂ ಪಟ್ಟಾಚಾರ್ಯರು ಇದಱೊಳೆರಡು ಮೂಱು ವಾಕ್ಯಂ ಪುರಾಣಕ್ಕೆ ವಿರೊಧಮಿರ್ಪುದದಱೆಂದಾಗದೆಂಬುದುಂ ಅದೆ ಸಂವಾದವಾಗಿ ಚರ್ಚಿಸಿದೊಡೆ ತನ್ನ ತಿರಸ್ಕರಿಸಿ ೨೦೦ ಶ್ರಾವಕರ ಗೃಹದೊಳ್ ಚರಿಗೆಯಂ ಮಾಡದಿರಲು ನಿಜಾನುಚೆಯಿಂದಾಹಾರಮಂ ಕೊಳ್ಳುತ್ತೆ ಕೋಪಮುದಯಿಸಿ ಆತ್ಮಜ್ಞಾನಿಗೆ ಜಾತಿಕುಲಮಾವುದಾದೊಡಂ ಸಮವೆಂದು ಲಿಂಗಮಂ ಕಟ್ಟಿಕೊಂಡು ವೀರಶೈವ ಶಾಸ್ತ್ರಂಗಳಂ ಬಸವಪುರಾಣಂ ಮೊದಲಾಗಿ ಮಾಡಿ ಕೆಲವು ದಿನದಿಂ ಮೇಲೆ ಉಪಶಮಮಂ ತಾಳ್ದು ಸನ್ಮಾರ್ಗದೊಳ್ ನಂಬಿ ನಡೆದಂ, ರತ್ನಾಕರ ಶತಕಂ, ಅಪರಾಜಿತ ಶತಕಂ, ತ್ರಿಲೋಕ ಶತಕಂ, ಆಧ್ಯಾತ್ಮ ಗೀತಂಗಳ್ ೨೦೦೦ ಗ್ರಂಥದಷ್ಟು ಪೇಱೆದಂ, ಶಕ ವರುಷ ೧೪೭೯ ಸಂದಿರ್ದುದು. ರಾಜ ಒಡೆಯರ ಕಾಲವಾದ ಮೇಲೆ ಚಾಮರಾಜನ ಕಾಲದಲ್ಲಿ ರತ್ನಾಕರಾರ್ಯ ವಿರಚಿತ ಭರತೇಶ್ವರ ಚರಿತ ೮೪ ಸಂಧಿಯ ನೋಡಿದರು" (ಸಂ.ವಿ.ಸೀತಾರಾಮಯ್ಯ, ೧೯೬೪, ಪು.೪-೫).

ತುಳುನಾಡಿನ ಮೂಡಬಿದಿರೆಯಲ್ಲಿ ಸೂರ್ಯವಂಶದ ಅರಸು ದೇವರಾಜನಿಗೆ ಮಗನಾಗಿ ಹುಟ್ಟಿದನು. ಬಾಲ್ಯದಲ್ಲಿಯೇ ಕಾವ್ಯಾಲಂಕಾರ ಲಕ್ಷಣ ಶಾಸ್ತ್ರಗಳಲ್ಲಿ ನಿಪುಣನಾಗಿದ್ದನು. ಭೈರಸ ಒಡೆಯರ ಆಸ್ಥಾನದಲ್ಲಿ ಆಶ್ರಯದಲ್ಲಿ ಶೃಂಗಾರ ಕವಿಯಾಗಿದ್ದನು. ಅವನ ಮಾತಿನ ಪ್ರತಿಭೆಗೆ, ರೂಪಕ್ಕೆ ರಾಜಕುಮಾರಿ ಮರುಳಾಗಿ ಅವನನ್ನು ಒಲಿಸಿಕೊಂಡಳು. ಇದು ರಾಜನಿಗೆ ಗೊತ್ತಾಗಿ ಅವನನ್ನು ಶಿಕ್ಷಿಸಲೆಂದು ನಿರ್ಧರಿಸಿದಾಗ ಅಲ್ಲಿಂದ ಓಡಿಹೋಗಿ ಮಹೇಂದ್ರಕೀರ್ತಿ ಎಂಬ ಗುರುಗಳಲ್ಲಿ ಅಣುವ್ರತ ದೀಕ್ಷೆಯನ್ನು ಪಡೆದು ಆಧ್ಯಾತ್ಮ ವಿಷಯದಲ್ಲಿ ಪರಿಣಿತನಾದನು. ಅಲ್ಲಿ ವಿಜಯಕೀರ್ತಿ ಎಂಬ ಗುರುಗಳು ತಮ್ಮ ಶಿಷ್ಯ ವಿಜಯಣ್ಣನು ರಚಿಸಿದ 'ದ್ವಾದಶಾನುಪ್ರೇಕ್ಷೆ' ಎಂಬ ಕೃತಿಗೆ ಆನೆಯ ಮೇಲೆ ಪ್ರಭಾವನೆ ಮಾಡಿದ್ದನ್ನು ನೋಡಿ ೮೪ ಸಂದಿಗಳುಳ್ಳ ಭರತೇಶ ವೈಭವವನ್ನು ಬರೆದು ಗುರುಗಳಿಗೆ ತೋರಿಸಿ ಅದಕ್ಕೂ ಆನೆಯ ಮೇಲಿನ ಪ್ರಭಾವನೆ

ದೊರೆಯಬೇಕೆಂದು ಬೇಡಿದ. ಆದರೆ ಅದರಲ್ಲಿ ಎರಡು ಮೂರು ಆಗಮ ವಿರುದ್ಧವಾದ ಸಂಗತಿಗಳು ಇರುವುದರಿಂದ ಅದು ಸಾಧ್ಯವಿಲ್ಲವೆಂದು ಗುರುಗಳು ಹೇಳಿದಾಗ ಅವರಿಬ್ಬರಿಗೂ ವಾದ-ವಿವಾದ ಉಂಟಾಗಿ, ಸಿಟ್ಟಾದ ಗುರುಗಳು ಅಲ್ಲಿನ ಏಳುನೂರು ಶ್ರಾವಕರಲ್ಲಿ ಭಿಕ್ಷೆ ದೊರೆಯದಂತೆ ಮಾಡಿದರು. ಕವಿ ಕೆಲವು ದಿನ ತನ್ನ ತಂಗಿಯ ಮನೆಯಲ್ಲಿದ್ದು, ಬಳಿಕ ಜೈನ ಮತದಲ್ಲೇ ಜುಗುಪ್ಸೆ ಹುಟ್ಟಿ ವೀರಶೈವ ಮತವನ್ನು ಸೇರಿದನು. ಸ್ವಲ್ಪ ದಿನದ ಬಳಿಕ ಮತ್ತೆ ಜೈನ ಧರ್ಮಕ್ಕೆ ಮರಳಿ, `ರತ್ನಾಕರ ಶತಕ', `ಅಪಾರಾಜಿತ ಶತಕ', `ತ್ರಿಲೋಕ ಶತಕ' ಮುಂತಾದ ಆಧ್ಯಾತ್ಮ ಗೀತೆಗಳನ್ನು ರಚಿಸಿದನು. ಅಲ್ಲಿಗೆ ಶಕ ವರ್ಷ ೧೪೭೯ ಸಂದಿತ್ತು.

ಕವಿಯ ಬಗ್ಗೆ ಇರುವ ಇನ್ನೊಂದು ದಂತಕತೆ ``ಚಾರುಕೀರ್ತಿ ಯೋಗಿಯಿಂದ ಎಳೆವರೆಯಲ್ಲಿಯೇ ದೀಕ್ಷೆ ಪಡೆದ ರತ್ನಾಕರನು ದಿನದಿನಕ್ಕೂ ಉದಿತೋದಿತನಾಗಿ ಕೀರ್ತಿಶಾಲಿಯಾಗುತ್ತಾ ತನ್ನ ಶಿಷ್ಯ ಸಮುದಾಯದಿಂದ ಪರಿವೇಷ್ಟಿತನಾಗಿರಲು ಕೆಲವು ಕುಹಕಿಗಳು ಮಾತ್ಸರ್ಯದಿಂದ ಆತನು ಮಲಗುವ ಮಂಚದ ಕೆಳಗೆ ಒಬ್ಬ ವೇಶ್ಯೆಯನ್ನು ಬಚ್ಚಿಟ್ಟು ಈತನ ಹೆಸರಿಗೆ ಕಳಂಕವನ್ನು ತಂದೊಡ್ಡಲು ಪ್ರಯತ್ನಿಸಿದನು. ಅವಮಾನಿತನಾದ ರತ್ನಾಕರನು ಶಿಷ್ಯರ ಬೇಡಿಕೆಗಳೆಲ್ಲವನ್ನೂ ನಿರಾಕರಿಸಿ ನೆಟ್ಟನೆ ನಡೆದು ಹೊಳೆಯನ್ನು ಸೇರಿ ಜಿನಧರ್ಮಕ್ಕೆ ಜಲಾಂಜಲಿಯಿತ್ತೆನೆಂದು ಘೋಷಿಸಿ ನೀರಿನಲ್ಲಿ ಮುಳುಗು ಹಾಕಿ ಮೇಲೆದ್ದು ಘಟ್ಟದ ಮೇಲಕ್ಕೆ ಹೋದನು. ಅಲ್ಲಿ ಶೈವ ಗ್ರಂಥವೊಂದನ್ನು ಆನೆಯ ಮೇಲಿರಿಸಿ ಮೆರೆಸುತ್ತಿದ್ದುದನ್ನು ಕಂಡು, ಆ ಗ್ರಂಥವು ಕೇವಲ ನೀರಸವಾದುದೆಂದು ಎಲ್ಲರ ಮುಂದೆ ಮುಚ್ಚುಮರೆಯಿಲ್ಲದೆ ತನ್ನ ಅಭಿಪ್ರಾಯವನ್ನು ಸಾರಿದನು. ಕುಪಿತರಾದ ಜನರು ರಾಜನಲ್ಲಿ ದೂರಿದರು. ರಾಜನು ರತ್ನಾಕರನನ್ನು ಕರೆಸಿ ಈ ವಿಚಾರದಲ್ಲಿ ಪ್ರಶ್ನಿಸಲು, ಆತನು ನಿರ್ಭಯನಾಗಿ, ೯ ತಿಂಗಳ ಅವಧಿಯೊಳಗಾಗಿ ಭರತೇಶ ವೈಭವವೆಂಬ ಹತ್ತು ಸಹಸ್ರ ಪದ್ಯಗಳನ್ನೊಳಗೊಂಡ ಮಹಾಗ್ರಂಥವನ್ನು ಬರೆದು ರಾಜನನ್ನು ಆತನ ಸಭಾಸದರನ್ನು ಮೆಚ್ಚಿಸಿದನು. ಅನಂತರ ರಾಜನ ಬೇಡಿಕೆಯಂತೆ ವೀರಶೈವ ಮತವನ್ನು ಅವಲಂಬಿಸಿದನು. ಆದರೂ ತನ್ನ ಮರಣಾನಂತರ, ಸಾಯುವ ಮುನ್ನ ತಾನೂ ಮನಸಾ ಜೈನನಾಗಿಯೇ ಇದ್ದನೆಂಬುದನ್ನು ತಾನು ಕೊರಳಲ್ಲಿ ಕಟ್ಟಿಕೊಂಡಿದ್ದ ಕೇವಲ ಒಂದು ಗೋಟಡಿಕೆಯೇ ಹೊರತು ಲಿಂಗವಲ್ಲವೆಂಬುದನ್ನು ಎಲ್ಲರಿಗೂ ಪ್ರತ್ಯಕ್ಷ ಪ್ರಮಾಣ ಮಾಡಿಕೊಟ್ಟನು" (ಸಂ.ತ.ಸು. ಶಾಮರಾವ್, ೧೯೮೬, ಪು.೨-೩).

ಈ ಮೇಲಿರುವ ದಂತಕಥೆಯೂ ರತ್ನಾಕರನ ಜೀವನ ಮತ್ತು ಭರತೇಶವೈಭವದ ರಚನೆಗೆ ಕಾರಣವಾದ ಸಂಗತಿಯನ್ನು ಹೇಳುತ್ತವೆ. ದೇವಚಂದ್ರನ ಕಥೆಯಲ್ಲಿ ಅರಸನ ಮಗಳು ಕಾರಣವಾದರೆ, ಜನ ಹೇಳಿಕೆಯ ದಂತಕಥೆಯಲ್ಲಿ ವೇಶ್ಯೆ ಒಬ್ಬಳು ಬರುತ್ತಾಳೆ. ಅರಸನ ಮಗಳ ಸ್ನೇಹ ಮಾಡಿ ಶೃಂಗಾರ ರತ್ನಾಕರನನ್ನು ಕಂಡರೆ, ವೇಶ್ಯೆಯೊಬ್ಬಳನ್ನು ದೂರ ಮಾಡಿದ ಯೋಗಿ ರತ್ನಾಕರನನ್ನು ನೋಡಬಹುದು.

[illegible]

[illegible]

[illegible]

ಯಾವುದೇ ಕವಿಯ ಕಾವ್ಯವನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಅವನು ಬದುಕಿದ್ದ ಕಾಲ, ಅವನ ಪರಿಸರ, ವ್ಯಕ್ತಿತ್ವ ಇತ್ಯಾದಿಗಳನ್ನು ತಿಳಿದುಕೊಳ್ಳುವುದು ಅವಶ್ಯಕ. ಏಕೆಂದರೆ ಪ್ರತಿಯೊಬ್ಬ ಕವಿಯೂ ಅವನು ಬದುಕಿದ್ದ ಕಾಲದ ಮನೋಧರ್ಮವನ್ನು ಪ್ರತಿಬಿಂಬಿಸುತ್ತಾನೆ. ಅಂದಿನ ಸಮಾಜದ ಪ್ರತಿನಿಧಿಯಾಗಿರುತ್ತಾನೆ. ಕವಿಯ ಕಾಲವನ್ನು ಕುರಿತು ವಿದ್ವಾಂಸರು ಚರ್ಚಿಸಿದ್ದಾರೆ.

ಜಿ. ಬ್ರಹ್ಮಪ್ಪನವರು "ರತ್ನಾಕರನ ಕೃತಿಗಳಲ್ಲೇ ಎದ್ದುಕಾಣುವ ಆತನ ಆಧ್ಯಾತ್ಮಿಕ ಹಾಗು ಮಾನಸಿಕ ವಿಕಾಸವನ್ನು, ಪ್ರತಿಭಾ ಸಂಪದದ ಉಜ್ವಲತೆಯನ್ನೂ, ಕಲ್ಪನೆಯ ಕಮನೀಯತೆಯನ್ನು ಎಲ್ಲಕ್ಕಿಂತ ಹೆಚ್ಚಾಗಿ ಆತನ ಅಪೂರ್ವ ದರ್ಶನವನ್ನು ಗಮನಿಸಿ ಊಹೆಯ ಬುನಾದಿಯ ಮೇಲೆ ವಿಶ್ವಕವಿಯ ಜಾತಕದ ರೂಪರೇಖೆಯನ್ನು ಬಿಡಿಸಲು ಪ್ರಯತ್ನಿಸಿರುವೆನು ಎಂದು ಹೇಳಿ ರತ್ನಾಕರನ ಜಾತಕವನ್ನು ಈ ರೀತಿ ಬಿಡಿಸಿದ್ದಾರೆ.

ರತ್ನಾಕರನ ಜನನ ಸುಮಾರು	೧೫೩೭
ತ್ರಿಲೋಕ ಶತಕದ ರಚನೆ ಸುಮಾರು	೧೫೫೭
ಭರತೇಶ ವೈಭವದ ರಚನೆ ಸುಮಾರು	೧೫೬೭
ರತ್ನಾಕರ ವೀರಶೈವನಾದುದು ಸುಮಾರು೧೫೭೨	
ರತ್ನಾಕರ ಮತ್ತೆ ಜೈನನಾದುದು ಸುಮಾರು	೧೫೭೫
ರತ್ನಾಕರ ಶತಕದ ರಚನೆ ಸುಮಾರು	೧೫೭೭
ಅಪರಾಜಿತ ಶತಕದ ರಚನೆ ಸುಮಾರು	೧೫೮೨
ಆಧ್ಯಾತ್ಮಿಕ ಗೀತದ ರಚನೆ ಸುಮಾರು	೧೫೮೭
ರತ್ನಾಕರನ ಮರಣ	ಕ್ರಿ.ಶ. ೧೬೦೦ರ ನಂತರ

ಎಂದು ಈ ರೀತಿ ಹೇಳಿದ್ದಾರೆ (ಅದೇ, ಪು.೨೮-೨೯).

ರತ್ನಾಕರವರ್ಣಿ ತ್ರಿಲೋಕ ಶತಕ, ರತ್ನಾಕರ ಶತಕ, ಅಪರಾಜಿತ ಶತಕ, ೨೦೦೦ ಆಧ್ಯಾತ್ಮಗೀತೆಗಳನ್ನು ರಚಿಸಿದರೂ ಅವನು ಪ್ರಖ್ಯಾತಿ ಮತ್ತು ಅವನ ಪ್ರತಿಭೆ, ಕವಿತ್ವವನ್ನು ಗುರುತಿಸುವುದು `ಭರತೇಶವೈಭವ`ದಿಂದ. ಅಚ್ಚಕನ್ನಡ ದೇಸಿ ಮಟ್ಟಾದ ಸಾಂಗತ್ಯವನ್ನು ಸಂಪೂರ್ಣವಾಗಿ ದುಡಿಸಿಕೊಂಡು ಸಾಂಗತ್ಯದ ಸೀಮಾ ಪುರುಷನಾಗಿದ್ದಾನೆ. ಭರತೇಶವೈಭವವು ೮೪ ಸಂಧಿಗಳಲ್ಲಿ ೧೦,೦೦೦ ಪದ್ಯಗಳನ್ನು ಒಳಗೊಂಡಿದೆ. ಇದರಲ್ಲಿ ಸಾಂಗತ್ಯವನ್ನು ಸಂಪೂರ್ಣವಾಗಿ ದುಡಿಸಿಕೊಂಡಿದ್ದಾನೆ. "ವೃಷಭಮಾಸದಿ ತೊಡಗಿತು ಕುಂಭಮಾಸದ್ವಿಷಯದಿ ಕೃತಿ ಪೂರ್ಣವಾಯ್ತು" ಎಂದು ಕಾವ್ಯದ ಕೊನೆಯಲ್ಲಿ ಹೇಳಿಕೊಂಡಿದ್ದಾನೆ.

[illegible]

[illegible]

[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

[illegible]

[illegible]

ಭರತೇಶವೈಭವದ ಕಥಾವಸ್ತು ಜೈನ ಪುರಾಣ ಕೃತಿಗಳಲ್ಲಿ ಮೊದಲಿಗೆ ಪರಿಚಿತವಾದುದ್ದೇ. ೬೩ ಶಲಾಕ ಪುರುಷರಲ್ಲಿ ಒಬ್ಬನಾಗಿರುವ, ಪ್ರಥಮ ಚಕ್ರಿ ಎನಿಸಿಕೊಂಡ, ಪ್ರಥಮ ತೀರ್ಥಂಕರನಾದ ವೃಷಭನಾಥ (ಆದಿದೇವ)ನ ಹಿರಿಯ ಮಗನೂ ಆದ ಭರತನ ಚರಿತ್ರೆ. ಆದಿದೇವನ ಹಿರಿಯ ಮಗನಾದ ಭರತನ ಕತೆಯು ಆದಿ ತೀರ್ಥಂಕರ ಚರಿತ್ರೆಯ ಒಂದು ಭಾಗವಾಗಿ ಜೈನ ಪುರಾಣ ಕೃತಿಗಳಲ್ಲಿ ಮೂಡಿಬಂದಿದೆ. ಜೈನ ಪುರಾಣಗಳನ್ನು ಬರೆದವರಲ್ಲಿ ೮ನೇ ಶತಮಾನದ ಜಿನಸೇನಾಚಾರ್ಯನೇ ಮೊದಲಿಗ. ಅವನು ತನ್ನ 'ಪೂರ್ವ ಪುರಾಣ' ಕೃತಿಯಲ್ಲಿ ಆದಿದೇವನ ಚರಿತ್ರೆಯ ಒಂದು ಅಂಗವಾಗಿ ಭರತನ ಕಥೆ. ವಿಸ್ತಾರವಾಗಿಯೇ ಬಂದಿದೆ. ಆದಿಕವಿ ಪಂಪನು ತನ್ನ 'ಆದಿಪುರಾಣ'ದಲ್ಲಿ ಜಿನಸೇನಮುನಿಯನ್ನೇ ಅನುಸರಿಸಿದ್ದಾನೆ. ಚಾವುಂಡರಾಯನ 'ಚಾವುಂಡರಾಯ ಪುರಾಣ'ದಲ್ಲಿ ಇದೇ ಹಾದಿಯನ್ನು ಹಿಡಿದಿದ್ದಾನೆ. ಇವುಗಳಲ್ಲಿ ಭರತನ ಬಾಲ್ಯ ಜೀವನ ಮತ್ತು ದಿಗ್ವಿಜಯ ಇತ್ಯಾದಿಗಳನ್ನು ವಿಸ್ತಾರವಾಗಿ ಚಿತ್ರಿಸಿದ್ದಾರೆ. ಪಂಪನು ಎಷ್ಟೇ ಪ್ರಭಾವಶಾಲಿಯಾದ ಕವಿಯಾದರೂ ಸಹ ಧರ್ಮದ ವಿಷಯದಲ್ಲಿ ಸ್ವತಂತ್ರ್ಯತೆಯನ್ನು ಪಡೆಯಲಿಲ್ಲ. ಇದು ಪುರಾಣ ಕೃತಿಯಾದುದರಿಂದ ಬದಲಾವಣೆಯನ್ನೇನೂ ಮಾಡದೆ ಜಿನಸೇನ ಕವಿಯ ಪೂರ್ವ ಪುರಾಣವನ್ನೇ ಅನುಸರಿಸಿ ಕೇವಲ ಸಂಗ್ರಹಕಾರನೆನಿಸಿದ್ದಾನೆ. ಯಥಾವತ್ತಾಗಿ ಕನ್ನಡಕ್ಕೂ ಭಾಷಾಂತರಗಾರ ನಾಗಿದ್ದಾನೆ.

ಜೈನ ಪುರಾಣಗಳಲ್ಲಿ ಭರತನ ಕಥೆ ಇಷ್ಟು. ನೀಲಾಂಜನೆಯ ನೃತ್ಯದಿಂದ ನಿರ್ವೇಗಗೊಂಡ ವೃಷಭನಾಥನು ತನ್ನ ಮಕ್ಕಳಿಗೆ ರಾಜ್ಯವನ್ನು ಹಂಚಿಕೊಟ್ಟು ತಪಸ್ಸಿಗೆ ಹೋಗುತ್ತಾನೆ. ಹಿರಿಯ ಮಗನಾದ ಭರತನು ಅಯೋಧ್ಯೆಯಲ್ಲಿಯೂ ಬಾಹುಬಲಿ ಪೌದನಾಪುರದಲ್ಲಿಯೂ ರಾಜ್ಯವಾಳುತ್ತಿರುತ್ತಾರೆ. ಕೆಲವು ಕಾಲದ ನಂತರ ಭರತನ ಆಯುಧಾಗಾರದಲ್ಲಿ ದಿಗ್ವಿಜಯ ಸೂಚಕವಾಗಿ ಚಕ್ರರತ್ನವೊಂದು ಉದಯಿಸುತ್ತದೆ. ಅದನ್ನು ಮುಂದಿಟ್ಟುಕೊಂಡು ಆರುಖಂಡಗಳ ಮೇಲೆ ದಿಗ್ವಿಜಯಕ್ಕೆ ಹೊರಡುತ್ತಾನೆ. ಎಲ್ಲ ರಾಜರನ್ನು ಜಯಿಸಿ ಅವನಿಗೆ ಎದುರು ನಿಲ್ಲುವ ಶಕ್ತಿವಂತ ರಾಜರೇ ಇಲ್ಲ ಎಂದು ಇನ್ನೇನು ಅಯೋಧ್ಯೆಗೆ ಪ್ರವೇಶಿಸಿದೊಡನೆ ಚಕ್ರವರ್ತಿ ಪಟ್ಟ ವಹಿಸಬೇಕು. ಅಷ್ಟರಲ್ಲಿ ಮುಂದೆ ಹೋಗುತ್ತಿದ್ದ ಚಕ್ರರತ್ನ ಪೌದನಾಪುರದ ಬಳಿ ಹಠಾತ್ತಾಗಿ ನಿಲ್ಲುತ್ತದೆ. ಆ ರಾಜ್ಯವನ್ನು ಆಳುತ್ತಿದ್ದ ಭರತನ ತಮ್ಮ ಬಾಹುಬಲಿ ಎದುರು ನಿಲ್ಲುತ್ತಾನೆ. ಈ ಇಬ್ಬರ ಘೋರ ಸಂಗ್ರಾಮದಿಂದ ಜಗತ್‌ಪ್ರಳಯವಾಗುವುದನ್ನು ತಪ್ಪಿಸಲು ದೇವತೆಗಳು ಮಧ್ಯೆ ಪ್ರವೇಶಿಸಿ ಅವರನ್ನು ಬಾಹುಯುದ್ಧ, ಜಲಯುದ್ಧ, ದೃಷ್ಟಿಯುದ್ಧಗಳಿಗೆ ಒಪ್ಪಿಸುತ್ತಾರೆ. ಇಟ್ಟ ಎಲ್ಲಾ ಸ್ಪರ್ಧೆಗಳಲ್ಲೆಲ್ಲಾ ಸೋತು ಅವಮಾನಿತನಾದ ಭರತನು ಅವಿವೇಕದಿಂದ ಅಧರ್ಮಕ್ಕೆ ಕೈಹಾಕುತ್ತಾನೆ. ನಿರಾಯುಧನಾದ ಬಾಹುಬಲಿಯ ಮೇಲೆ ಚಕ್ರರತ್ನವನ್ನುಪಯೋಗಿಸುತ್ತಾನೆ. ಅದು ಅವನ ಬಲಭುಜದ ಮೇಲೆ ಬಂದು ನಿಲ್ಲುತ್ತದೆ. ಕೋಪದಿಂದ ದುರ್ಗತಿಗಿಳಿದ ಅಣ್ಣನ ನೀಚ ವರ್ತನೆಯನ್ನು ಕಂಡು ಹೇಸಿ ಬಾಹುಬಲಿ ಯುದ್ಧದಲ್ಲಿ ಗೆದ್ದರೂ ನಿರ್ವೇಗಗೊಳ್ಳುತ್ತಾನೆ. ಭರತನು ನಿಷ್ಕಂಟಕವಾದ ರಾಜ್ಯವನ್ನು ಹಲವು ಕಾಲ ಸುಖವಾಗಿ ಆಳುತ್ತಿದ್ದು, ಒಮ್ಮೆ ಕನ್ನಡಿಯಲ್ಲಿ ನೆರೆಕೂದಲು ಕಂಡು ವೈರಾಗ್ಯಗೊಂಡು, ತಪಸ್ಸಿನಿಂದ ಮೋಕ್ಷವನ್ನು ಪಡೆಯುತ್ತಾನೆ.

ಈ ಕಥೆ ಪುರಾಣಕೃತಿ ಮತ್ತು ಅದನ್ನು ಅನುಸರಿಸಿದ ಕೃತಿಗಳಲ್ಲಿ ಬರುವ ಭರತನ ಚಿತ್ರಣವಾಗಿದೆ. ಇದರಲ್ಲಿ ಭರತನದು ನೀಚಪಾತ್ರವಾಗಿಯೂ, ರಾಜ್ಯದ ದಾಹಕ್ಕೋಸ್ಕರ ಏನೂ ಬೇಕಾದರೂ ಮಾಡಬಲ್ಲವನಾಗಿದ್ದಾನೆ. ಬಾಹುಬಲಿಯನ್ನು ಉನ್ನತ ಮಟ್ಟದಲ್ಲಿ ತೋರಿಸಿದ್ದಾನೆ.

"ಶ್ವೇತಾಂಬರ ಪಂಗಡಕ್ಕೆ ಸೇರಿದವನು ಕಥೆಯ ಸ್ಥೂಲರೇಖೆ ಜಿನಸೇನಾಚಾರ್ಯನದೇ ಆದರೂ ವಿವರಣೆಗಳಲ್ಲಿ ಬೇಕಾದಷ್ಟು ಬದಲಾವಣೆಗಳು ಕಂಡುಬರುತ್ತವೆ.

ಅಮರಸೂರಿ - ಕೃತಿ - ಮಹಾಪುರಿಸಚರಿಯ - ಪ್ರಾಕೃತದಲ್ಲಿ

ಮೇರುತುಂಗ - ಮಹಾಪುರುಷಚರಿತ್ರೆ - ಸಂಸ್ಕೃತದಲ್ಲಿ

ಪುಷ್ಪದಂತ - ಮಹಾಪುರುಣ - ಪ್ರಾಕೃತದಲ್ಲಿ

ಹೇಮಚಂದ್ರ - ತಿಷಷ್ಟಿಶಲಾಕಾಪುರುಷ ಚರಿತ

ಶೀಲಾಚಾಯರ್ನ 'ಚೌಪನ್ನ ಮಹಾಪುರಿಸಚರಿಯ' ಅನುಸರಿಸಿ ಬರೆದ ಗ್ರಂಥ. ಕಥೆಯ ವಿಸ್ತಾರ, ವಿವರಗಳಲ್ಲಿ ಈತನು ಜಿನಸೇನನಿಂದ ಸ್ವಲ್ಪಮಟ್ಟಿಗೆ ಭಿನ್ನನಾಗಿದ್ದರೂ, ಕಥೆಯ ಮೂಲರೇಖೆಗಳು ಜಿನಸೇನನದೇ" (ಲೇ. ಹೇಮಲತಾ ಪದಕಿ, ಪು.೨೭).

ಈ ಸಾಲಿನಲ್ಲೇ ಮೂಲರೇಖೆಗಳನ್ನು ರತ್ನಾಕರ ಬಳಸಿಕೊಂಡಿರುವನಾದರೂ ಅಲ್ಲಲ್ಲಿ ತನ್ನದೇ ಆದ ಸ್ವತಂತ್ರ್ಯ ರೀತಿಯಲ್ಲಿ ಮಾರ್ಪಾಡು ಮಾಡಿಕೊಂಡಿದ್ದಾನೆ. ಜಿನಸೇನ ಆದಿಯಾಗಿ ಎಲ್ಲ ಪುರಾಣ ಕರ್ತೃಗಳೂ ಆದಿಜಿನನ ಜೀವನದ ಅಂಗವಾಗಿ ಭರತೇಶನ ಕಥೆಯನ್ನು ಪುರಾಣದಲ್ಲಿ ಅಳವಡಿಸಿದರೇ ಹೊರತು ಭರತನನ್ನೇ ಕೃತಿ ನಾಯಕನಾಗಿ ಮಾಡಲಿಲ್ಲ. ಇದು ರತ್ನಾಕರನಿಂದ ಸಾಧ್ಯವಾಯಿತು. ಪ್ರಾಚೀನ ಕೃತಿಗಳಲ್ಲಿ ಅಲಕ್ಷಿತನಾದ ಭರತನ ಕಥೆಯನ್ನು ತೆಗೆದುಕೊಂಡು ಅವನನ್ನು ನಾಯಕನನ್ನಾಗಿಸಿ ಶೃಂಗಾರ ಭರಿತನಾಗಿ ಅವನ ವೈಭವವನ್ನು 'ಭರತೇಶವೈಭವ'ವಾಗಿ ವರ್ಣಿಸಿದ್ದಾನೆ. ಹಿಂದಿನವರು ಹೇಳದೇ ಬಿಟ್ಟ ಅವನ ಗೃಹಜೀವನವನ್ನು 'ಭೋಗ ಜೀವನ'ದಲ್ಲಿ ತಂದು ಅದನ್ನು ರಸಮಯವಾಗಿ ಚಿತ್ರಿಸಿದ್ದಾನೆ. ಭರತನ ಒಡ್ಡೋಲಗವನ್ನು ಹೇಳುತ್ತಾ ಕೃತಿಯನ್ನು ಆರಂಭಿಸಿದ್ದಾನೆ.

"ಕವಿಯು ಮೂಲದಿಂದ ಮಾಡಿಕೊಂಡಿರುವ ಬದಲಾವಣೆಗಳು ಮುಖ್ಯವಾಗಿ ಎರಡು ತೆರನಾದವು. ಗ್ರಂಥದಲ್ಲಿ ಇದ್ದ ಭಾಗಗಳ ವಿವರಣೆಗಳಲ್ಲಿಯೇ ಮಾಡಿಕೊಂಡಿರುವ ಬದಲಾವಣೆಗಳು ಹೊಸದಾಗಿ ಸೃಷ್ಟಿಸಿ ಗ್ರಂಥಕ್ಕೆ ಸೇರಿಸಿರುವ ಭಾಗಗಳು. ಮೊದಲ ಜಾತಿಗೆ ಸೇರಿದ ಬದಲಾವಣೆಗಳು ಉಪಯುಕ್ತವಾಗಿವೆ. ಗ್ರಂಥ ವಿಭಾಗದಲ್ಲಿಯೇ ಕವಿ ತನ್ನ ಕಥಾನಾಯಕನಿಗೆ ಹಿರಿದೊಂದು ಸ್ಥಾನವನ್ನು ಗಳಿಸಿಕೊಡಲು ಹೊರಟಿರುವಂತೆ ತೋರುತ್ತದೆ. ಜೈನ ಕವಿಗಳು ಸಾಮಾನ್ಯವಾಗಿ ತೀರ್ಥಂಕರ ಜೀವನ ಚರಿತ್ರೆಯನ್ನು 'ಗರ್ಭಾವತರಣ' ಇತ್ಯಾದಿ ಪಂಚಕಲ್ಯಾಣಗಳಾಗಿ ವಿಭಾಗಿಸಿಕೊಂಡು ಬರೆವ ಪದ್ಧತಿ. ಭರತನು ಜಿನನಲ್ಲ, ಸಂಪ್ರದಾಯದ ಪಂಚಕಲ್ಯಾಣಗಳನ್ನು ಇಲ್ಲಿ ತರುವಂತಿಲ್ಲ. ಭರತನು ಸಿದ್ಧಜೀವಿ, ಮೋಕ್ಷವನ್ನು ಸೂರೆಗೊಂಡವನು.

ಪಂಚಕಲ್ಯಾಣಗಳಿಗೆ ಅರ್ಹ. ಆದ್ದರಿಂದ ತನ್ನ ಕಥಾನಾಯಕನಿಗೆ ಪ್ರತ್ಯೇಕವಾದ ಪಂಚಕಲ್ಯಾಣಗಳನ್ನು ಸಾಧಿಸಿಕೊಂಡು ಹೊರಟಿದ್ದಾನೆ. ಇದಕ್ಕಾಗಿ ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಅರ್ಕಕೀರ್ತಿ ವಿಜಯ, ಮೋಕ್ಷ ವಿಜಯ ಎಂದು ೫ ವಿಜಯಗಳಲ್ಲಿ ಭರತನ ಕಥೆಯನ್ನು ಬೆಳೆಸಿದ್ದಾನೆ" (ಸಂ.ತ.ಸು. ಶಾಮರಾಯ, ೧೯೮೬, ಪು.೪೩).

ದಿಗ್ವಿಜಯ ಸಂದರ್ಭದಲ್ಲಿ ಮಾಡಿಕೊಂಡಿರುವ ಬದಲಾವಣೆ ಪ್ರಮುಖವಾದದ್ದು. ಭರತ-ಬಾಹುಬಲಿ ಕಾಳಗ ಪ್ರಸಂಗವನ್ನು ವಿಶಿಷ್ಟ ರೀತಿಯಲ್ಲಿ ಚಿತ್ರಿಸಿದ್ದಾನೆ. ರತ್ನಾಕರನ ಕೈಯಲ್ಲಿ ಭರತನ ಪಾತ್ರ ಮುಗಿಲು ಮುಟ್ಟಿದೆ. ಪುರಾಣ ಕೃತಿಯಲ್ಲಿ ತನ್ನ ನಾಯಕರ ಉದ್ಧಟತನ, ಹೇಡಿಯಂತೆ ವರ್ತಿಸುವುದು ಕವಿಗೆ ಸರಿ ಎನಿಸಲಿಲ್ಲ. ಇಡೀ ತನ್ನ ಕಾವ್ಯದಲ್ಲಿ ಭರತನವೈಭವವನ್ನು ಶಿಖರಕ್ಕೆ ಏರಿಸಿದ್ದಾನೆ.

ರತ್ನಾಕರನು ಭರತನವೈಭವವನ್ನು ಆರಂಭಿಸುವುದು ಹೀಗೆ :

- ಗಣನೆಯಿಲ್ಲದ ರಾಜ್ಯ ಸುಖದೊಳಾಡಿ ಧಾ
  ರಿಣಿ ಮೆಚ್ಚೆ ಜಿನಯೋಗಿಯಾಗಿ
  ಕ್ಷಣಕೆ ಕರ್ಮವ ಸುಟ್ಟು ಜಿನನಾದ ಭೂಭುಜಾ
  ಗ್ರಣಿಯ ವೈಭವ ಲಾಲಿಸಿರೊ. (ಆಸ್ಥಾನ ಸಂಧಿ)

- ಆಗಮವಧ್ಯಾತ್ಮವಳವಟ್ಟು ಶೃಂಗಾರ
  ತ್ಯಾಗ ಭೋಗದ ಮೋಡಿ ಮೆರೆಯೆ
  ಭೋಗಿ ಯೋಗಿಗಳೆದೆ ಜುಮ್ಮು ಜುಮ್ಮನೆ ನೇಮ
  ವಾಗಿ ಸೊಲ್ಲಿಸುವೆನಾಲಿಸಿರೊ. (ಆಸ್ಥಾನ ಸಂಧಿ)

- ಭರತಭೂತಳಕೆ ಸಿಂಗಾರವಾದಯೋಧ್ಯಾ
  ಪುರದೊಳು ಮುಲೋಕ ಪೊಗಳೆ
  ಭರತಚಕ್ರೇಶ್ವರ ಸುಖಬುಳುತಿರ್ದನಾ
  ಸಿರಿಯನಿನ್ನೇನ ಬಣ್ಣಿಪೆನು. (ಆಸ್ಥಾನ ಸಂಧಿ)

ಎಂದು ಕವಿ ತನ್ನ ಕಥೆಯನ್ನು ಹೇಳ ಹೊರಡುತ್ತಾನೆ. ಭರತನ ಜೀವನ, ರಾಜ್ಯಭಾರ, ಅವನ ವೈಭವ, ದಿಗ್ವಿಜಯ, ಮೋಕ್ಷ ಹೀಗೆ ಎಲ್ಲವನ್ನು ವಿಸ್ತಾರವಾಗಿ ಹೇಳಿದ್ದಾನೆ. ತನ್ನ ಕಥಾನಾಯಕನ ವ್ಯಕ್ತಿತ್ವಕ್ಕೆ ಎಲ್ಲಿಯೂ ಬಾಧೆ ಬರದಂತೆ ಪುರಾಣ ವಸ್ತುವನ್ನು ಬದಲಾಯಿಸಿದ್ದಾನೆ. ಭರತೇಶ ವೈಭವ ಪ್ರಾರಂಭವಾಗುವುದು 'ಆಸ್ಥಾನ ಸಂಧಿ'ಯಿಂದ ಅಲ್ಲದೆ ಇದು ಕಾವ್ಯದ ಪೀಠಿಕಾ ಸಂದಿಯೂ ಆಗಿದೆ. ಸಾಮಾನ್ಯವಾಗಿ ಎಲ್ಲಾ ಕವಿಗಳಂತೆ ಈತನೂ ತನ್ನ ಇಷ್ಟದೇವರ ಸ್ತುತಿ ಮಾಡಿ ತನ್ನ ಕಾವ್ಯ ಧೋರಣೆಯನ್ನು ಸ್ಪಷ್ಟಪಡಿಸುತ್ತಾನೆ. ಆಸ್ಥಾನದಲ್ಲಿ ಭರತನು ಕುಳಿತ ರೀವಿ, ಅವನ ಉಡುಗೆ-ತೊಡುಗೆ, ಅಲಂಕಾರಗಳನ್ನು

ರಂಗುರಂಗಾಗಿ ಚಿತ್ರಿಸಿದ್ದಾನೆ. ಒಡ್ಡೋಲಗದಲ್ಲಿ ಕವಿಯ ಕಾವ್ಯವಾಚನವನ್ನು ಕೇಳಲು ಚಕ್ರಿಯ ಮುಂದೆ ಅರಸರೂ, ಗಣಿಕೆಯರೂ, ಕವಿಗಳು, ಆಪ್ತ ಪರಿವಾರದವರೂ, ಮಂತ್ರಿಗಳು ಅಧಿಕಾರಿಗಳು ಕುಳಿತಿದ್ದಾರೆ. ಅಲ್ಲಿ ಸಂಗೀತ ಸುಧೆ ಹರಿಯುತ್ತದೆ.

ಮುನಿಗಳಿಗೆ ಊಟ ಕೊಟ್ಟ ನಂತರವೇ ಅವನ ಊಟವಾಗುವುದು. ಮುನಿಗಳಿಗೆ ಭಿಕ್ಷೆ ನೀಡುವ ಕಾಲವಾಯಿತೆಂದು ತಿಳಿದು ಅರಮನೆ ಬಾಗಿಲಿಗೆ ಬಂದು ಒಬ್ಬ ಸಾಮಾನ್ಯ ಸೇವಕನ ಹಾಗೆ ಅವರನ್ನು ಕಾಯುತ್ತಾನೆ. ಛತ್ರ, ಛಾಮರ, ಖಡ್ಗ ಎಲ್ಲವೂ ಅವನಿಂದ ದೂರ.

- ಲೋಕವೆಲ್ಲನ್ನನೋಲೈಸುತಿರ್ದರು ನಾನು
  ಲೋಕವ ಬೆರಸೆನೆಂಬುದನು
  ಲೋಕವರಿಕೆ ಮಾಡಲೆಂದು ನಿಂದಂತೆ ತಾ
  ನೇಕಾಕಿಯಾಗಿರ್ದನಾಗ. (ಮುನಿಭಕ್ತಿ ಸಂಧಿ)

ಎಲ್ಲಾ ಸಮಸ್ತ ಪರಿವಾರ, ಜನರು ಅವನ ಸುತ್ತಲಿದ್ದರೂ ಯಾವ ಕಡೆಗೂ ಅವನ ಗಮನವಿಲ್ಲ. ಎಷ್ಟೋ ಹೊತ್ತಿನ ನಂತರ ಬಂದ ಇಬ್ಬರು ಮುನಿಗಳಿಗೆ ಗಂಧಾಕ್ಷತೆ ಪುಷ್ಪಗಳನ್ನು ಅರ್ಪಿಸಿ, ಗಿಂಡಿಯಿಂದ ನೀರೆರೆದು ಜಲಶುದ್ಧಿ ಮಾಡಿ ಅವರಿಗೆ ನಮಸ್ಕರಿಸಿ ದಿವ್ಯಾನ್ನವನ್ನಿಟ್ಟ ಮೇಲೆಯೇ ಭರತನ ಮನಸ್ಸಿಗೆ ಸಮಾಧಾನ. ಭರತನಲ್ಲಿದ್ದ ಮುನಿಭಕ್ತಿಯನ್ನು ನೋಡಬಹುದು.

ಭರತನ ೯೬,೦೦೦ ಹೆಂಡತಿಯರಲ್ಲಿ ಯಾವುದೇ ಸವತಿ ಮತ್ಸರವಾಗಲಿ, ಅಸೂಯೆಯಾಗಲಿ ಇರಲಿಲ್ಲ. ಅವರು ಗಂಡನನ್ನು ಬಿಟ್ಟು ಎಂದಿಗೂ ಊಟ ಮಾಡಿಲ್ಲ. ಆರೋಹಣ ಸಂಧಿಯಲ್ಲಿ ಗಂಡ-ಹೆಂಡತಿಯರ ಪ್ರೀತಿ ಜಗಳ ಮತ್ತು ಪತ್ನಿಯರಲ್ಲಿರುವ ಪತಿಭಕ್ತಿಯನ್ನು ಬಿಂಬಿಸುತ್ತದೆ.

ಬೆಳಗಿನ ಉದಯ ಕಾಲದಲ್ಲೇ ಎದ್ದು ಭರತನು ಜಿನ ಪೂಜೆ ಅರ್ಚನೆಯನ್ನು ಮಾಡಿ ಉಪ್ಪರಿಗೆಯಲ್ಲಿ ಓಲಗವನ್ನು ಇತ್ತನು. ಬಂಗಾರದಿಂದ ಮಾಡಿದ ಉಪ್ಪರಿಗೆಯ ಮೇಲೆ ನವರತ್ನದಿಂದ ಮಾಡಿದ ಮಂಟಪದಲ್ಲಿ ಹೊಂದಾವರೆಯಂತೆ ಹೊಳೆಯುವ ಗದ್ದುಗೆ ಏರಿ ಕುಳಿತ ರಾಜನನ್ನು ನೋಡಲು ಅವನ ಹೆಂಡತಿಯರು ತಾ ಮುಂದು ನಾ ಮುಂದು ಎಂದು ತವಕದಿಂದ ಏರತೊಡಗಿದರು. ಒಬ್ಬರು ಇನ್ನೊಬ್ಬರಿಗೆ ಹಾಸ್ಯ ಮಾಡುತ್ತಾ ಚೆಲುವೆಯರು ಹೋಗುತ್ತಿದ್ದರು. ಒಬ್ಬರಿಗೊಬ್ಬರು ಎಷ್ಟು ಅನ್ಯೋನ್ಯವಾಗಿ ಪ್ರೀತಿಯಿಂದ ವ್ಯವಹರಿಸುತ್ತಿದ್ದರು.

- ನೋಡಿ ಬಾ ತಂಗಿ ಯೆಚ್ಚರಿಕೆಯಕ್ಕಾಜಿ ಕೈ
  ನೀಡಕ್ಕ ಕೋ ಹಿಡಿ ತಾಯಿ
  ಓಡದಿರಕ್ಕಾ ಬಾ ಬಾ ತಂಗಿಯೆಂದು ಮಾ
  ತಾಡುತೇರಿದರೋಲವಿನೊಳು (ಉಪ್ಪರಿಗೆ ಸಂಧಿ)

[illegible]

[illegible]

[illegible]

[illegible]

[illegible]

[illegible]

[illegible]

[illegible]

ಇದರಿಂದ ಅಕ್ಕ-ತಂಗಿಯರ ಮಧ್ಯ ಸಹಾಯ ಸಹಕಾರವನ್ನು ನೋಡಬಹುದು.

- ನಡೆವಾಗ ಸವತಿಯ ಕಾಲಮೇಲೊಂದು ಕ
  ಪ್ಪಿಡಿದರೆ ಕಂಡೂರ್ವಳದನು
  ತೊಡೆದಳು ಕೈ ಮುಟ್ಟೆ ತಂಗಿ ಹಾ ಹಾಯೆಂದು
  ಒಡನಾಕೆ ಝುಂಕಿಸಿ ಹೋಗೆ. (ಉಪ್ಪರಿಗೆ ಸಂಧಿ)

- ಕಾಲಮೇಲದೆ ಕಪ್ಪು ತೊಡೆದುಕೊಳ್ಳೆಂದೊಲ್ಲು
  ಹೇಳೆದೆ ತೊಡೆವರೆ ತಂಗಿ
  ಓಲಗ ಮುಟ್ಟಲಾನುದು ಸುಮ್ಮನೈದಕ್ಕ
  ಕೇಳಬಹುದು ನಮ್ಮ ಮಾತು. (ಉಪ್ಪರಿಗೆ ಸಂಧಿ)

ರತ್ನಾಕರನು ಸೃಷ್ಟಿಸಿದ ಭರತನ ಹೆಂಡತಿಯರಲ್ಲಿ ಕಾಣುವುದು ಸವತಿಯರ ಮಧ್ಯೆ ಮಾತ್ಸರ್ಯವಲ್ಲ ಪರಸ್ಪರ ಸಹಾಯ-ಸಹಕಾರ, ಪ್ರೀತಿ, ಗೆಳತಿಯರ ಸಂಬಂಧ.

- ಪತಿ ಹೊಲ್ಲ ಸತಿ ಲೇಸು ಸತಿ ಹೊಲ್ಲ ಪತಿ ಲೇಸೆಂ
  ಬಲೆ ವಿಕೃತಿಗಳುಂಟು ಪರರ್ಗೆ
  ಪತಿ ಲೇಸು ಸತಿಯರು ಲೇಸು ಲೇಸೆಂಬಂತೆ
  ನುತಿವೆತ್ತರಾರು ನಿಮ್ಮಂತೆ. (ಅರಗಿಳಿಯಾಳಾಪ ಸಂಧಿ)

ಈ ರೀತಿ ಪತಿ-ಪತ್ನಿಯರ ಸಂಬಂಧವಿತ್ತು. ಒಬ್ಬನೇ ಗಂಡ ೯೬,೦೦೦ ಜನ ಹೆಂಡತಿಯರನ್ನು ಸಮಾನವಾಗಿ ಪ್ರೀತಿ ತೋರಿಸುವುದನ್ನು ವಾಸ್ತವದಲ್ಲಿ ನಿಂತು ನೋಡಿದರೆ ಆಶ್ಚರ್ಯದ ಜೊತೆಗೆ ಭರತನು ಒಂದೇ ರೀತಿಯಲ್ಲಿ ಎಲ್ಲರನ್ನು ಹೇಗೆ ನಿಭಾಯಿಸುತ್ತಿದ್ದನು ಎಂಬ ಕುತೂಹಲವು ಮೂಡುತ್ತದೆ. ಕವಿಯ ಕಲ್ಪನೆ ಅದ್ಭುತವಾದದ್ದು.

ಕಾವ್ಯದಲ್ಲಿ ಬರುವ ಅರಗಿಳಿ ಕಾವ್ಯವಾಚನ ಮಾಡುವುದು. ಕುಸುಮಾಜಿಯು ಅರಗಿಳಿಯೊಡನೆ ಆಡುತ್ತಿದ್ದ ಮಾತುಗಳನ್ನು ನೆರೆಮನೆಯಲ್ಲಿದ್ದ ಸುಮನಾಜಿ ಕೇಳಿ ಕಥೆಯನ್ನು ರಚಿಸಿದಳು. ಅಮರಾಜಿ ಅದನ್ನು ಬರೆದುಕೊಂಡು ಹೋಗಿ ಅರಗಿಳಿಗೆ ಹೇಳಿಕೊಟ್ಟಳು. ನಂತರ ಸಭೆಯಲ್ಲಿ ಅರಗಿಳಿ ಅದನ್ನು ಹೇಳುತ್ತಿದ್ದಾಗ ಭರತನು ಈ ಕಾವ್ಯವನ್ನು ಹೇಳಿದವರು, ರಚಿಸಿದವರು, ಹೇಳಿಕೊಟ್ಟವರು ಯಾರು ಎಂದು ತಿಳಿದನು. ಕಾವ್ಯಕ್ಕೆ ಕಾರಣಳಾದ ಕುಸುಮಾಜಿಗೆ ಸನ್ಮಾನ ಮಾಡಲಿಚ್ಛಿಸಿ ಅವಳ ಮನೆಗೆ ಹೋದನು. ಆಗ ಅಲ್ಲಿ ನಡೆಯುವ ಸರಸ ಸಲ್ಲಾಪ, ಶೃಂಗಾರಭರಿತ ಮಾತುಗಳು, ಕುಸುಮಾಜಿಯ ವೀಣಾ ಸಂಗೀತ ಹೀಗೆ ಎಲ್ಲವೂ ರಸಮಯವಾಗಿ ಬಂದಿದೆ. ಕವಿ ತನ್ನ ನಾಯಕನನ್ನು ರಸಿಕ ಚಕ್ರವರ್ತಿಯನ್ನಾಗಿ ಮಾಡಿಬಿಟ್ಟಿದ್ದಾನೆ.

[illegible]

ಇಷ್ಟೆಲ್ಲಾ ಸುಖವನ್ನು ಅನುಭವಿಸಿದ ಭರತನದು ಕೇವಲ ಹೊರಮುಖವಾಗಿ ಮಾತ್ರ ಅವನ ಒಳಮುಖದಲ್ಲಿ ಎಲ್ಲವನ್ನು ಮರೆತು ತನ್ನಾತ್ಮ ಯೋಗದಲ್ಲೇ ನಾಲ್ಕು ಘಳಿಗೆ ಕಾಲ ಕಳೆದರೂ ಸಹ ಅದು ನಿಷ್ಕಲ್ಮಶವಾಗಿತ್ತು.

ಎಲ್ಲವ ಮರೆದು ತನ್ನಾತ್ಮನನರಿದು ತ
ನ್ನಲ್ಲಿ ತಾ ನಿಂತು ಯೋಗದೊಳು
ತಲ್ಲೀನವಾಗಿ ನಾಲ್ಘಳಿಗೆಯಿದ್ದನು ರಾಯ
ಮೆಲ್ಲನಿರಿಸಿದನಂತದನು. (ಪೂರ್ವನಾಟಕ ಸಂಧಿ)

ಹೀಗೆ ಅವನು ತನ್ನ ಭೋಗ ಜೀವನ ಅನುಭವಿಸಿದರೂ ಸಹ ಅವನ ಮನಸ್ಸಿನಲ್ಲಿ ನಿರಂಜನಸಿದ್ಧನನ್ನು ಸ್ಮರಿಸುತ್ತಿದ್ದನು.

ತಾಂಡವ ವಿನಯ ಸಂಧಿಯಲ್ಲಿ ತನ್ನ ರಾಣಿಯರ ನಾಟ್ಯವನ್ನು ನೋಡುವುದು ಮತ್ತು ಹುಸಿ ಮುನಿಸಿನಿಂದ ಕೋಪಿಸಿಕೊಂಡ ಹೆಂಡತಿಯರನ್ನು ರಮಿಸುವುದು, ಅಲ್ಲದೆ ತನ್ನ ಓಲಗದಲ್ಲಿ ನಾಟ್ಯವಾಡಲು ಬಂದ ನಾಟ್ಯಂಗನೆಯರು ಇವನನ್ನು ಬಯಸುವುದು ಮತ್ತು ಅದನ್ನು ತಿಳಿದ ಭರತ ಅವರ ಬಯಕೆಯನ್ನು ನಿವಾರಿಸುವುದು. ಇವೆಲ್ಲವನ್ನು ನೋಡಿದರೆ ಎಲ್ಲರಿಗೂ ಭರತ ಚಕ್ರವರ್ತಿಯೇ ಬೇಕು ಎನ್ನುವ ಹಾಗೆ ಕವಿ ಚಿತ್ರಿಸಿದ್ದಾನೆ.

"ಭೋಗವಿಜಯದಲ್ಲಿ ಕವಿ ಶೃಂಗಾರ ಸನ್ನಿವೇಶವನ್ನು ರಸವತ್ತಾಗಿ ಚಿತ್ರಿಸಿದ್ದಾನೆ. ಸಾಂಸರಿಕ ಜೀವನದ ರಸ ಚಿತ್ರವನ್ನು ಕೊಡುವುದರಲ್ಲಿ ಸಮರ್ಥನಾಗಿರುವನು. ಕಾಲ ದೇಶಗಳನ್ನು ಮೀರಿ ಎಲ್ಲ ಜನರ ಬದುಕಿಗೆ ಸೌಖ್ಯವನ್ನು ನೀಡಿದೆ. ಮನುಷ್ಯನು ಸಂಸಾರದಲ್ಲಿ ಅನೇಕ ಸಂಬಂಧ ವಿಶೇಷಗಳಿಗೆ ಕೇಂದ್ರ ಸ್ವರೂಪ ನಾಗಿರುತ್ತಾನೆ. ಇತರ ಆಹ್ಲಾದಕರ ಸನ್ನಿವೇಶಗಳು ಒದಗುತ್ತವೆ. ಇದರಲ್ಲಿ ಗಂಡು-ಹೆಣ್ಣಿನ ಸಂಬಂಧ ಪ್ರಾಮುಖ್ಯವಾದುದು. ಭರತನು ತನ್ನ ಸಹಸ್ರಾರು ಹೆಂಡತಿಯರನ್ನು ಪ್ರೀತಿಯಿಂದ ಸಮಭಾವದಿಂದ ಕಂಡು ಸಂಸಾರ ನಿರ್ವಹಿಸಿರುವನು. ತವರೂರ ಮರೆಯಿಸಿ, ನಿದ್ರೆಯ ತೊರೆಯಿಸಿ, ಸವಿಗಳ ಸರಿಯಿಸಿ ಸುಖದಲ್ಲಿ ಓಲಾಡಿಸಿರುವನು ರಾಗದ್ವೇಷಗಳು ಕಣ್ಮಾರೆಯಾಗಿ, ಅಕ್ಕ ತಂಗಿಯರಾಗಿ, ಸಹಜ ವಾತ್ಸಲ್ಯದಿಂದ ಭರತನ ರಾಣಿಯರಿರುವರು. ಸತಿಯರು ಅನ್ವರ್ಥ ನಾಮಧಾರಿಗಳಾಗಿ ಲೇಸು ಲೇಸು ಆಗಿರುವರು. ಊಟದಲ್ಲಿ ಸವತಿ ಮತ್ಸರವಿಲ್ಲದೆ "ಕುಳ್ಳಿರಕ್ಕ ನೀವೆಲ್ಲ ಬಳಪ್ಪರೆಂದೊಳ್ಳಿತೆ, ನುಡಿದು ಭಾಮೆಯರು ಎಲ್ಲರಿಗೂ ಉಣ ಬಡಿಸಿದರವರವೆಂದೆದಲ್ಲಿಯೇ ಸವಿದರನ್ನವನು" (ಸಂ. ಡಾ.ನಾಗರಾಜಯ್ಯ, ಪು.೧೭೪).

ಭೋಗವಿಜಯದಲ್ಲಿ ಬರೇ ಗಂಡ-ಹೆಂಡತಿಯರ ನಡುವಿನ ಸಂಬಂಧವಲ್ಲದೆ ಸೊಸೆಯುರು-ಅತ್ತೆಯರ ನಡುವೆ, ಮಗ-ತಾಯಿಯ ನಡುವೆ, ಭರತ ತನ್ನ ಕಾಣಲು ಬಂದ ತಾಯಿಯನ್ನು ತೂಗುಯ್ಯಾಲೆಯಲ್ಲಿ ಕೂರಿಸಿ ತೂಗುವ ಸನ್ನಿವೇಶ ಮನಕರಗುವ ರೀತಿಯಾಗಿ ಬಂದಿದೆ.

[illegible]

ಅಲ್ಲದೆ ಅತ್ತಿಗೆ-ನಾದಿನಿಯರ ಸಂಬಂಧ ಪ್ರತಿ ಹೆಣ್ಣಿಗೂ ಆದರ್ಶಪ್ರಾಯವಾಗಿದೆ. ಸುಭದ್ರೆಗೆ ಭರತನ ಸೋದರಿಯರಾದ ಗಂಗಾದೇವಿ-ಸಿಂಧುದೇವಿಯರ ಮಧ್ಯ ನಡೆಯುವ ಕಿಟಲೆ ತರುವ ಮಾತುಗಳು ಇವೆಲ್ಲ ನೋಡಿದರೆ ಭರತನ ಸಂಸಾರದ ರಸ ಚಿತ್ರ ಮೂಡುತ್ತದೆ. ಅವನ ಸಂಸಾರ ಸುಖಮಯವಾದುದು, ಅವರು ಜೀವನವನ್ನು ಪ್ರೀತಿಸುವವರು, ಮಕ್ಕಳು, ಹೆಂಡತಿಯರು, ತಾಯಿಯರ ಜೊತೆ ಆಹ್ಲಾದಕರ ಜೀವನ ಅವನದು. ಈಗಿನ ಸಂಸಾರ ಜೀವನಕ್ಕೆ ಭರತನ ಸಂಸಾರ ಆದರ್ಶವಾಗುತ್ತದೆ. ಇಲ್ಲಿ ಹೆಣ್ಣನ್ನು ಎಲ್ಲಿಯೂ ತುಚ್ಛವಾಗಿ ಕಾಣುವ ಸಂದರ್ಭನೇ ಒದಗಿಬಂದಿಲ್ಲ. ಭರತನ ಹೆಂಡತಿಯರ, ತಂಗಿಯರು, ತಾಯಿಯರ ಈ ಎಲ್ಲರ ಸ್ವಾತಂತ್ರ್ಯ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಸನ್ನಿವೇಶ ಎಲ್ಲಿಯೂ ಮೂಡಿಲ್ಲ. ಅವರ ಮಾತಿಗೂ ಮನ್ನಣೆ ಇದೆ. ಸ್ತ್ರೀಯರನ್ನು ಪೂಜ್ಯ ಸ್ಥಾನದಲ್ಲಿ ನೋಡಿದ್ದಾನೆ.

ಭರತನ ಜೀವನದಲ್ಲಿ ಬರುವ ಸನ್ನಿವೇಶಗಳು ವಾಸ್ತವದಲ್ಲಿರುವ ಜನರಿಗೆ ಒಂದು ಸಂದೇಶವನ್ನು ಹೇಳುತ್ತದೆ. ಭೋಗವಿಜಯವನ್ನು ಓದಿದಾಗ ಶೃಂಗಾರದಲ್ಲಿ ತೇಲಾಡುವ ಹಾಗೆ ಅನುಭವವಾಗುತ್ತದೆ. ಎಲ್ಲಿಯೂ ಅಶ್ಲೀಲತೆಯ ನುಡಿಗಳಿಲ್ಲ.

ಹೀಗೆ ಕವಿ 'ಭೋಗವಿಜಯ'ದಲ್ಲಿ ಭರತನು ಚಕ್ರವರ್ತಿಯಾಗುವುದಕ್ಕಿಂತ ಪೂರ್ವದಲ್ಲಿ ಅವನು ಕಳೆದ ರಸಮಯ ದಿನಗಳನ್ನು ಮತ್ತು ಭೋಗದಲ್ಲೇ ಯೋಗ ಜೀವನವನ್ನು ಕವಿ ಸುಂದರವಾಗಿ ವರ್ಣಿಸಿದ್ದಾನೆ. ಈ ಭೋಗವಿಜಯವನ್ನು ಕಾವ್ಯದಲ್ಲಿ ತರುವುದರ ಮೂಲಕ ಭರತನ ಜೀವನ ಚಿತ್ರಣವನ್ನು ತೋರಿಸಿದ್ದಾನೆ. ಇದರಿಂದ ಪುರಾಣ ಕೃತಿಯನ್ನು ಬದಲಾಯಿಸಿದ್ದಾನೆ. "ಚಕ್ರವರ್ತಿಯಾಗುವುದಕ್ಕಿಂತ ಮುಂಚೆ ಭರತನ ಜೀವನ ಮತ್ತು ವ್ಯಕ್ತಿತ್ವಗಳು ಹೇಗಿದ್ದುವೆಂಬುದನ್ನು ಯಾವ ಮೂಲದಲ್ಲಿಯೂ ನಾವು ಪಡೆಯುವುದಿಲ್ಲ. ರತ್ನಾಕರವರ್ಣಿ ತನ್ನ ಭೋಗವಿಜಯವೆಂಬ ಮೊದಲನೆಯ ಭಾಗದಲ್ಲಿ ಇದನ್ನು ಬಿಡಿಬಿಡಿಯಾಗಿ ಚಿತ್ರಿಸಿದ್ದಾನೆ. ಇದೇ ಅವನ ಮಹಾಕವಿತ್ವಕ್ಕೆ ನಿದರ್ಶನವಾದ, ಕನ್ನಡ ಸಾಹಿತ್ಯ ಪ್ರಪಂಚಕ್ಕೆ ನೂತನವಾದ ರಸಸೃಷ್ಟಿ" (ರಂ.ಶ್ರೀ. ಮುಗಳಿ, ೨೦೦೨, ಪು.೩೨೨).

ದಿಗ್ವಿಜಯ ಸಂದರ್ಭದಲ್ಲಿ ಭರತ-ಬಾಹುಬಲಿಯ ಪ್ರಸಂಗದಲ್ಲಿ ಮಾಡಿಕೊಂಡ ಬದಲಾವಣೆಯನ್ನು ಗಮನಿಸಬಹುದು. ಹೀಗೆ ಭರತ ಹೆಂಡತಿಯರೊಡನೆ ಸುಖಮಯವಾಗಿ ರಾಜ್ಯವಾಳುತ್ತಿದ್ದಾಗ ಅವನ ಆಯುಧಗಾರದಲ್ಲಿ ಚಕ್ರರತ್ನವೊಂದು ಉದಯಿಸುತ್ತದೆ. ದಿಗ್ವಿಜಯ ಸಂಕೇತವಾಗಿ ಅದನ್ನು ಮುಂದಿಟ್ಟು ಕೊಂಡು ಆರು ಖಂಡಗಳನ್ನು ಜಯಿಸುವುದಕ್ಕಾಗಿ ದಿಗ್ವಿಜಯಕ್ಕೆ ಹೊರಡುತ್ತಾನೆ. ತನ್ನ ಹೆಂಡತಿ, ಮಕ್ಕಳ ಸಹಿತವಾಗಿ ದಿಗ್ವಿಜಯಕ್ಕೆ ಹೋಗುತ್ತಾನೆ. ಆರು ಖಂಡಗಳನ್ನು ಜಯಿಸಿ ಇನ್ನೇನು ಅಯೋಧ್ಯೆಗೆ ಹೋಗಿ ಚಕ್ರವರ್ತಿ ಪಟ್ಟ ಕಟ್ಟಿಸಿಕೊಳ್ಳಲು ಮರಳಿ ಹೋಗುವಾಗ ಮಧ್ಯೆ ಪೌದನಾಪುರದಲ್ಲಿ ಚಕ್ರ ನಿಲ್ಲುತ್ತದೆ. ಅಲ್ಲಿ ಬಾಹುಬಲಿ ರಾಜ್ಯವಾಳುತ್ತಿದ್ದನು. ಭರತನು ಉಳಿದ ತಮ್ಮಂದಿರನ್ನು ದಾರಿಗೆ ತರಲು ಪ್ರಯತ್ನಿಸುತ್ತಾನೆ. ಅವರೇ ಉದ್ಧಟರಾಗಿ, ತಂದೆ ಕೊಟ್ಟ ಉಂಬಳಿಯೊಳಗಿರುವ ನಾವು ಇವನಿಗೇಕೆ ಆಶ್ರಿತರಾಗಿ ಬಾಳಬೇಕು? ಎಂಬ ಈರ್ಷೆಯಿಂದ ರಾಜ್ಯವನ್ನು ತೊರೆದು ಸನ್ಯಾಸಕ್ಕೆ ಹೋಗುತ್ತಾರೆ. ಉಳಿದೊಬ್ಬ ತಮ್ಮನನ್ನಾದರೂ

[illegible]

[illegible]

[illegible]

[illegible]

ಒಲಿಸಿಕೊಳ್ಳೋಣವೆಂದು ಭರತ ತನ್ನ ಮಂತ್ರಿ ದಕ್ಷಿಣನನ್ನು ಬಾಹುಬಲಿಯ ಕಡೆ ಸಂಧಾನಕ್ಕೆ ಕಳಿಸುತ್ತಾನೆ. ದಕ್ಷಿಣನನು ಎಷ್ಟೇ ಸ್ನೇಹಪೂರ್ವಕವಾದ ಮಾತುಗಳನ್ನಾಡಿದರೂ ಅವೇ‌ಲ್ಲ ಪ್ರಯೋಜನವಾಗಲಿಲ್ಲ. ಬಾಹುಬಲಿ ಯುದ್ಧಕ್ಕೆ ಸಿದ್ಧನಾಗುತ್ತಾನೆ. ಇದನ್ನು ತಿಳಿದ ಭರತನಿಗೆ ಚಿಂತೆಯಾಗುತ್ತದೆ. ಯುದ್ಧಕ್ಕೆ ಸಿದ್ಧವಾಗಿ ಬಂದ ತಮ್ಮನಿಗೆ ಭರತನು ಭೂಮಿತೂಕದ ಮಾತುಗಳನ್ನಾಡಿ ಮಹಾನುಭಾವನಾಗುತ್ತಾನೆ. ಯುದ್ಧದ ಸಂದರ್ಭದಲ್ಲಿ ಭರತನು "ನಾವಿಬ್ಬರೂ ಜೀನಪುತ್ರರು. ನಮ್ಮ ಈ ಕಾಳಗ ಲೋಕಕ್ಕೆ ದ್ರೋಹದ ಶಾಸನ ಹಾಕಿ ಕೊಟ್ಟಂತಾಗುತ್ತದೆ" ಎಂದು ಹೇಳಿದ.

- ಕೇಳಣ್ಣ ಚಕ್ರವ ಬಯಸಿತಿಲ್ಲಾನು ಶ
ಶ್ತಾಲಯದೊಳು ತಾನೆ ಹುಟ್ಟಿ
ಏಳಿಸಿ ನಾಡ ಸುತ್ತಿಸಿತು ನಿಮ್ಮೆಲ್ಲರ
ಆಲಿಗೆ ನೋವಾಗುವಂತೆ. (ರಾಜೇಂದ್ರ ಗುಣವಾಕ್ಯ ಸಂಧಿ)

ಹೀಗೆ ಬಾಹುಬಲಿಗೆ ಮನಕರಗುವ ಮಾತುಗಳನ್ನು ಭರತ ಹೇಳುತ್ತಾನೆ. ಎಲ್ಲಾ ಯುದ್ಧದಲ್ಲಿ ಗೆಲವು ನಿನ್ನದೆ ಎಂದು ಗಂಭೀರವಾಗಿ ಬೋಧಿಸುತ್ತಾನೆ. ಇವನ ನುಡಿಗಳನ್ನು ಕೇಳಿ ಬಾಹುಬಲಿಗೆ ತನ್ನ ಉದ್ಧಟತನಕ್ಕೆ ತನಗೆ ನಾಚಿಕೆಯಾಗುತ್ತದೆ. ಅಣ್ಣನ ಜೊತೆ ಕಾಳಗಕ್ಕೆ ನಿಂತಿದ್ದಕ್ಕೆ ಪ್ರಾಯಶ್ಚಿತ್ತವಾಗಿ ತಪಸ್ಸಿಗೆ ಹೋಗುತ್ತಾನೆ. ಇದರಿಂದ ಭರತನಿಗೆ ತುಂಬಾ ನೋವು, ಸಂಕಟವಾಗುತ್ತದೆ. ತನ್ನಂತೆಯೇ ಸಂಕಟಪಡುತ್ತಿದ್ದ ತಾಯಿಯನ್ನು ಸಮಾಧಾನಗೊಳಿಸುತ್ತಾನೆ. ಬಾಹುಬಲಿಗೆ ಘೋರ ತಪಸ್ಸಿನಿಂದಲೂ ದಿವ್ಯಜ್ಞಾನವಾಗದಿರುವುದನ್ನು ಕಂಡು ದಿವ್ಯಜ್ಞಾನೋಪದೇಶ ಮಾಡಿ ಅವನ ಮನಃ ಕಷಾಯದಲ್ಲಿರುವ ತೊಡಕನ್ನು ನಿವಾರಿಸಿ ಆತನಿಗೆ ಆತ್ಮಶುದ್ಧಿಯನ್ನು ದೊರಕಿಸಿಕೊಡುತ್ತಾನೆ.

ಬಾಹುಬಲಿಯ ದೀಕ್ಷೆ ನಂತರ ತಾಯಿ-ಭಾವಮೈದುನರು, ಹೆಂಡತಿಯರು, ಬಂಧುಗಳು, ಸನ್ಯಾಸವನ್ನು ಸ್ವೀಕರಿಸುತ್ತಾರೆ. ಒಂದು ದಿನ ಕನ್ನಡಿಯಲ್ಲಿ ಭರತನು ನೆರೆಕೂದಲನ್ನು ನೋಡಿ ರಾಜ್ಯವನ್ನು ಮಕ್ಕಳಿಗೆ ಕೊಟ್ಟು ಒಡನೇ ಮುಕ್ತಿಯನ್ನು ಹೊಂದುತ್ತಾನೆ.

ಹೀಗೆ ರತ್ನಾಕರನು ಪುರಾಣದ ಕಾವ್ಯದಲ್ಲಿ ತುಚ್ಛವಾಗಿ ಕಂಡ ಭರತನನ್ನು ತೆಗೆದುಕೊಂಡು ಅವನನ್ನು ಉದಾತ್ತೀಕರಿಸಿದ್ದಾನೆ. ಅವನ ಮೇಲೆ ಭಕ್ತಿ, ಭಾವವನ್ನು ತೋರಿಸಿದ್ದಾನೆ. ಕಾವ್ಯದುದ್ದಕ್ಕೂ ಕವಿ ಎಲ್ಲಿಯೂ ಹಿಂಸೆಗೆ ಎಡೆಮಾಡಿಕೊಟ್ಟಿಲ್ಲ. 'ಅಹಿಂಸೆ ಪರಮೋ ಧರ್ಮ' ಎಂದು ಸಾರಿದ್ದಾನೆ. ಎಲ್ಲವನ್ನು ಕವಿ ಸುಂದರ, ಶೃಂಗಾರ, ರಸಮಯವನ್ನಾಗಿ ಮಾಡಿದ್ದಾನೆ. ಎಲ್ಲಿಯೂ ಕವಿ ಭಾವೋದ್ವೇಗ, ತವಕ, ಉದ್ವೇಗದಿಂದ ನುಡಿಗಳನ್ನು ಹೇಳುವುದಿಲ್ಲ. ಇದರಿಂದ ಒಂದು ಸತ್ವ ಕಡಿಮೆಯಾದರೂ ಕಾವ್ಯ ಮುಗಿಲು ಮುಟ್ಟಿದೆ. ಸಂಪ್ರದಾಯಬದ್ಧವಾದ ಪುರಾಣ ಕಥೆಯಲ್ಲಿ ತನಗೆ ಸರಿದೋರಿದಂತೆ ಬದಲಾವಣೆಗಳನ್ನು ಮಾಡಿಕೊಂಡಿರುವುದನ್ನು ನೋಡಿದರೆ ಕವಿಯ ಆತ್ಮಧೈರ್ಯ ಅಪಾರವಾದುದು. ಜೈನ ಪುರಾಣವನ್ನು ತಿದ್ದಿ ಬರೆದಿದ್ದಾನೆ.

[illegible]

[illegible]

[illegible]

[illegible]

ಕವಿಯು ಕಾವ್ಯದ ಮೊದಲಿಗೆ ಹೇಳಿದ ಹಾಗೆ ತನ್ನ ಕೃತಿ ಜನಸಾಮಾನ್ಯರಿಗೆ ಅದರಲ್ಲೂ ಮನೆಯಲ್ಲೇ ಕುಳಿತ ಸ್ತ್ರೀಯರು ಮೆಚ್ಚಬೇಕು. ಎಲ್ಲರೂ ಹಾಡುಕುಣಿಯುವಂತ `ಹಾಡುಗಬ್ಬ`ವನ್ನು ಸಾಂಗತ್ಯದಲ್ಲಿ ರಚಿಸಿದೆ ಎಂದು ಹೇಳಿಕೊಂಡಿದ್ದಾನೆ.

- ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು
  ರಯ್ಯ ಮಂಚಿದಿಯೆನ ತೆಲುಗ
  ಅಯ್ಯಯ್ಯ ಎಂಚಪೊರ್ಲಾಂಡೆಂದು ತುಳುವರು
  ಮೈಯ್ಯುಬ್ಬಿ ಕೇಳಬೇಕಣ್ಣಾ. (ಆಸ್ಥಾನ ಸಂಧಿ)

ಎಂದು ತನ್ನ ಕಾವ್ಯವನ್ನು ಓದಿದ ಎಲ್ಲಾ ಭಾಷಿಕ ಜನರು ಮೆಚ್ಚಬೇಕು. ಕಾವ್ಯದಲ್ಲಿ ಯಾವುದೇ ಸಮಾಸ, ಹದಿನೆಂಟು ವರ್ಣನೆಗಳು, ಅಲಂಕಾರಗಳು ಮುಂತಾದ ಲಕ್ಷಣಗಳನ್ನು ಕಾವ್ಯದಲ್ಲಿ ತರಲು ಕವಿ ಬಯಸುವುದಿಲ್ಲ. ಇದೆಲ್ಲಾ ವಸ್ತುಕ ಕಾವ್ಯಕ್ಕೆ ಎಂದು ಹೇಳಿದ್ದಾನೆ. "ಸಕಲ ಲಕ್ಷಣಕ್ಕಾಗಿ ಬಿರುಸು ಮಾಡಿದರೆ ಪುಸ್ತಕದ ಬದನೆಕಾಯಿ" ಎಂದು ಹೇಳಿದ್ದಾನೆ.

ರತ್ನಾಕರನು ತಂದ ಭರತನ ಚಿತ್ರಣವನ್ನು ನೋಡಿದರೆ ನಮಗೆ ಭಗವತ್‌ಗೀತೆಯ ಶ್ರೀಕೃಷ್ಣನ ವ್ಯಕ್ತಿತ್ವವು ನೆನಪಿಗೆ ಬರುತ್ತದೆ. ಭರತ-ಕೃಷ್ಣ ಇವರು ಎಲ್ಲಾ ಸುಖವನ್ನು ಅನುಭವಿಸಿಯೂ ಯೋಗಿ-ಮಹಾಯೋಗಿಗಳಾಗಿದ್ದಾರೆ. ಕವಿಗೆ ಶ್ರೀಕೃಷ್ಣನ ವ್ಯಕ್ತಿತ್ವ ಪ್ರಭಾವ ಬೀರಿದೆ. ಶ್ರೀಕೃಷ್ಣನಿಗೆ ೧೬,೦೦೦ ಗೋಪಿಕಾ ಸ್ತ್ರೀಯರು ಇದ್ದರೂ ಅವನು ಮಹಾಯೋಗಿ ಭರತನಿಗೆ ೯೬,೦೦೦ ಹೆಂಡತಿಯರಿದ್ದರೂ ಅವನು ಯೋಗಿ ಎಂದು ಹೇಳಿದ್ದಾನೆ.

೧೬ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯ ಅವನತಿಯತ್ತ ಸಾಗುತ್ತಿತ್ತು. ಜೈನ ಧರ್ಮಕ್ಕೆ ಪ್ರೋತ್ಸಾಹ ಕಡಿಮೆಯಾಗುತ್ತಿದ್ದಾಗ ಜನರು ವೀರಶೈವ ಧರ್ಮ, ಶ್ರೀವೈಷ್ಣವ ಧರ್ಮಕ್ಕೆ ವಾಲುತ್ತಿದ್ದರು. ಎರಡೂ ಧರ್ಮಗಳು ಪ್ರಬಲವಾಗಿದ್ದವು. ಕವಿ ಜೈನ ಧರ್ಮದವನಾದರೂ ಸಹ ಅನ್ಯ ಧರ್ಮವನ್ನು ಎಲ್ಲಿಯೂ ತೆಗಳಿ ಬರೆದಿಲ್ಲ. ಅನ್ಯ ಧರ್ಮದಲ್ಲಿರುವ ಉತ್ತಮಾಂಶಗಳನ್ನು ಸ್ವೀಕರಿಸುತ್ತಿದ್ದ ಮತ್ತು ತನ್ನ ಧರ್ಮದಲ್ಲಿರುವ ಡಂಬಾಚಾರ, ಮೂಢನಂಬಿಕೆಗಳನ್ನು ಹೋಗಲಾಡಿಸಲು ಪ್ರಯತ್ನಿಸಿದ. ಆ ಕಾಲಾವಧಿಯಲ್ಲಿ ದಾಸರು ಶ್ರೀಕೃಷ್ಣನ ಮಹಿಮೆಯನ್ನು ತಮ್ಮ ಕೀರ್ತನೆಯಲ್ಲಿ ಹಾಡಿ ಹೊಗಳಿದ್ದರು. ಅಲ್ಲದೆ ವೀರಶೈವ ಧರ್ಮದ ತತ್ವಗಳು ಕವಿಯ ಮೇಲೆ ವಿಶೇಷವಾದ ಪರಿಣಾಮವನ್ನು ಬೀರಿದ್ದವು. ಸತಿಪತಿಯೊಂದಾದ ಭಕ್ತಿ ಅತಿಶಯವಾದುದು ಎಂಬ ಉಕ್ತಿ ರತ್ನಾಕರನ ಮೇಲೆ ಪ್ರಭಾವಿಸಿ ಅದನ್ನು ತನ್ನ ಕಾವ್ಯದಲ್ಲಿ ಮೂಡಿಸಿ ಪ್ರತಿಪಾದಿಸಿದನು.

[illegible]

[illegible]

[illegible]

[illegible]

ಜೈನ ಧರ್ಮ ಕೇವಲ ಸನ್ಯಾಸಿ ಧರ್ಮವಾಗಿ, ಭೋಗವನ್ನು ನಿರಾಕರಿಸುವ, ದೇಹವನ್ನು ದಂಡಿಸುವ ಧರ್ಮವಾಗಿ ಉಳಿಯದೇ ಅತಿಯಾದ ಸಂಸಾರ ತ್ಯಾಗವನ್ನು ಹೇಳಿತು. ಸಂಸಾರಿಯಾಗಿದ್ದವನಿಗೆ ಮೋಕ್ಷ ಸಾಧ್ಯವಿಲ್ಲ. ಎಲ್ಲವನ್ನು ತ್ಯಜಿಸಿದವನಿಗೆ ಸಾಧ್ಯ ಎಂದು ನಂಬಿದ್ದರು. ಜೈನ ಕಾವ್ಯಗಳು ಈ ನೀತಿಯನ್ನು ಬಿಟ್ಟರೆ ಹೊಸದೇನನ್ನು ಹೇಳುತ್ತಿರಲಿಲ್ಲ. ಹೀಗೆ ತನ್ನ ಧರ್ಮದ ಗೊಡ್ಡು ಸಂಪ್ರದಾಯವನ್ನು, ದೋಷವನ್ನು ಹೋಗಲಾಡಿಸಲು ಜೈನ ಧರ್ಮಕ್ಕೆ ಹೊಸ ತಿರುವನ್ನು ನೀಡಿದನು. ಅತೀ ವಿರಕ್ತಿಯಿಂದ ಮೋಕ್ಷ ಸಾಧ್ಯ ಎಂಬುದನ್ನು ಒಡೆದು ಹಾಕಿದನು.

ತನ್ನ ಧರ್ಮಕ್ಕೆ ವಿರುದ್ಧವಾದ ಅಂಶಗಳನ್ನು ಕಾವ್ಯದಲ್ಲಿ ತಂದನು. ಕೃಷ್ಣನ ಪ್ರಭಾವದಿಂದ ಅವನ ವ್ಯಕ್ತಿತ್ವವನ್ನು ತನ್ನ ಕಥಾನಾಯಕನಲ್ಲಿ ತಂದನು. ಸಂಸಾರದಲ್ಲಿ ಭೋಗ-ತ್ಯಾಗದಲ್ಲಿ ಮೊದಲು ಸಂಸಾರಿಯಾಗಿ ಭೋಗ ಸುಖವನ್ನು ಅನುಭವಿಸಿದ ನಂತರ ಅವನು ಯೋಗಿಯಾಗುತ್ತಾನೆ. ಅದನ್ನು ಭರತೇಶ ವೈಭವದ ಮೂಲಕ ಹೇಳಿದ್ದಾನೆ. "ರತ್ನಾಕರನ ಜೀವನದಲ್ಲಿ ಜೈನರ ತ್ಯಾಗ, ಶೈವರ ಯೋಗ, ವೈಷ್ಣವ ಭೋಗ ಇವುಗಳ ಅಪೂರ್ವ ಸಂಗಮದಿಂದುಂಟಾದ ಅದ್ಭುತ ರಸಾಯನವೇ ಇವನ ಭರತೇಶ ವೈಭವದಲ್ಲಿ ಅಮೃತಪ್ರಾಯವಾಗಿ ಪರಿಣಮಿಸಿದೆ" (ಸಂ. ವಾಮನಬೇಂದ್ರೆ, ೧೯೬೫, ಪು.೬೯).

ಗಂಡಿಗೆ ಅಷ್ಟೇ ಮೋಕ್ಷವಲ್ಲ ಹೆಣ್ಣಿಗೂ ಮೋಕ್ಷ ಸಾಧ್ಯ ಎಂದು ಕಾವ್ಯದ ಮೂಲಕ ಹೇಳಿದ್ದಾನೆ. ಸಂಸಾರಿಯಾದವನಿಗೆ ಭೋಗ-ಯೋಗ-ತ್ಯಾಗ ಸಮನಾಗಿ ಬರುತ್ತದೆ. ಮನುಷ್ಯನು ಪುರುಷಾರ್ಥವನ್ನು ದಾಟಿದ ಮೇಲೆ ಕೊನೆಗೆ ಮೋಕ್ಷ ಹೊಂದುತ್ತಾನೆ. ಸಂಸಾರಿಯು ತನ್ನ ಎಲ್ಲಾ ಕರ್ತವ್ಯವನ್ನು ಮುಗಿಸಿದ ಮೇಲೆ ಮೋಕ್ಷ ಮಾರ್ಗ ಹಿಡಿಯುತ್ತಾನೆ.

ವೈಷ್ಣವ ಧರ್ಮದ ಹಾಗೆ ಕವಿಗೆ ವೀರಶೈವ ಧರ್ಮದ ಪ್ರಭಾವ ಅಗಾಧವಾದುದು. ಆ ಧರ್ಮದ ನುಡಿಗಟ್ಟುಗಳನ್ನು ಪಾರಿಭಾಷಿಕ ಪದಗಳನ್ನು ಕವಿ ತನ್ನ ಕಾವ್ಯದಲ್ಲಿ ಬಳಸಿಕೊಂಡಿದ್ದಾನೆ. "ಉಂಡುಪವಾಸಿ, ಬಳಸಿ ಬ್ರಹ್ಮಚಾರಿ, ಮಂಡೆ ಬೆಳೆದು ಮನಬೋಳಾದ ತಪಸಿ, ಮೊಲೆಯ ಮೇಲಿದ್ದು ಯೋಗಿಗಳುಂಟು, ಮಯ್ಯ ಬೆತ್ತಲೆ ಮಾಡಿ ಮನವ ಕತ್ತಲೆ ಮಾಡಿ" ಇವೆಲ್ಲ ವೀರಶೈವ ಧರ್ಮದ ಪದಗಳಾಗಿವೆ.

ಹೀಗೆ ಕವಿಯು ತನ್ನ ಧರ್ಮದಲ್ಲಿದ್ದ ತೊಡಕುಗಳನ್ನು ನಿವಾರಿಸಲು 'ಭರತೇಶವೈಭವ'ವನ್ನು ರಚಿಸಿದ. ಧರ್ಮದಲ್ಲಿರುವ ಕೆಲವು ಆಚರಣೆಗಳನ್ನು ತೊಡೆದು ಹಾಕಿ ಕಾಲಕ್ಕೆ ತಕ್ಕ ಬದಲಾವಣೆಯನ್ನು ಕವಿ ಬಯಸಿದ. ಆಗ ಮಾತ್ರ ಧರ್ಮ ಜನಮನದಲ್ಲಿ ಉಳಿಯುತ್ತದೆ ಎಂಬುದು ಅವನ ಅಭಿಲಾಷೆಯಾಗಿತ್ತು. ಕವಿಯು ತನ್ನ ಧರ್ಮದ ದೋಷಗಳನ್ನಷ್ಟೇ ನಿವಾರಿಸುವುದಲ್ಲದೆ ಪ್ರತಿ ಸಂಸಾರವೂ ಹೇಗೆ ಇರಬೇಕು ಎಂದು ಭರತನ ಜೀವನದ ಮೂಲಕ ಚಿತ್ರಿಸಿದ್ದಾನೆ. ಗಂಡ-ಹೆಂಡತಿಯರ ಮಧ್ಯೆ ಇರುವ ಸುಮಧುರ

ಸಂಬಂಧ ಹೇಳಿದ್ದಾನೆ. ಒಬ್ಬ ಹೆಂಡತಿಯನ್ನು ಸಾಕುವುದು ಕಷ್ಟವಾಗುವ ಈ ಕಾಲದಲ್ಲಿ ಭರತ ೯೬,೦೦೦ ಪತ್ನಿಯರನ್ನು ಹೇಗೆ ನಿಭಾಯಿಸಿದ್ದಾನೆ ಎನ್ನುವುದು ಆಶ್ಚರ್ಯವಾಗುವುದರ ಜೊತೆಗೆ ಕುತೂಹಲವೂ ಆಗುತ್ತದೆ.

ಸವತಿಯರು ತಮ್ಮ ನಡುವೆ ಮಾತ್ಸರ್ಯವನ್ನು ಬಿಟ್ಟು ಪರಸ್ಪರ ಪ್ರೀತಿ ವಾತ್ಸಲ್ಯದಿಂದ ಅಕ್ಕ-ತಂಗಿಯರಾಗಿರುವುದು ಸ್ತ್ರೀ ಸಮುದಾಯಕ್ಕೆ ಹೇಳಿಕೊಡುವ ಪಾಠವಾಗಿದೆ. ಅತ್ತಿಗೆ-ನಾದಿನಿ, ಅತ್ತೆ-ಸೊಸೆ, ತಾಯಿ-ಮಗ, ಅಣ್ಣ-ತಮ್ಮನ ನಡುವಿನ ಪರಸ್ಪರ ಸ್ನೇಹ ಸಂಬಂಧವನ್ನು ತೋರಿಸಿದ್ದಾನೆ. ಅಣ್ಣ-ತಮ್ಮರ ನಡುವೆ ದಾಯಾದಿ ಕಲಹವನ್ನು ಬಿಟ್ಟು ಇಬ್ಬರ ಮಧ್ಯೆ ಸ್ನೇಹವನ್ನು ಹೇಳಿದ್ದಾನೆ. ಸೋದರ ಕಾಳಗವನ್ನು ತರಲು ಕವಿ ಬಯಸುವುದಿಲ್ಲ. ಇವೆಲ್ಲಾ ರತ್ನಾಕರ ಮುಂದಿನವರಿಗೆ ಕೊಟ್ಟ ಸಂದೇಶವಾಗಿದೆ. ಹೀಗೆ ಕವಿಯ ಕಲ್ಪನೆ ಅದ್ಭುತ ರಮ್ಯವಾದದ್ದು.

*****

ಅಧ್ಯಾಯ ೩

ಭರತೇಶವೈಭವ : ಛಂದಸ್ಸಿನ ವಿನ್ಯಾಸ ಮತ್ತು ಅಭಿವ್ಯಕ್ತಿ ಧೋರಣೆ

ಅಧ್ಯಾಯ ೩

ಭರತೇಶವೈಭವ : ಛಂದಸ್ಸಿನ ವಿನ್ಯಾಸ ಮತ್ತು ಅಭಿವ್ಯಕ್ತಿ ಧೋರಣೆ

ಪದ್ಯದ ಲಯವನ್ನು ಗುರುತಿಸುವುದು ಅದನ್ನು ಅಳತೆ ಮಾಡುವ ಮಾನದಂಡವೇ ಛಂದಸ್ಸು. ಮನುಷ್ಯನು ಭಾವನಾ ಜೀವಿಯಾಗಿರುವುದರಿಂದ ಕವಿಯಾಗಲಿ ಅಥವಾ ಕವಿಯ ಕಾವ್ಯವನ್ನು ಓದುವ ಸಹೃದಯವಾಗಲಿ ಹೊರಪ್ರಪಂಚವನ್ನು ವೀಕ್ಷಿಸಿದಾಗ ಅವರ ಮನಸ್ಸಿನಲ್ಲಿ ಹಲವಾರು ಭಾವನೆಗಳು ಹುಟ್ಟಿಕೊಳ್ಳುತ್ತವೆ. ಇದಕ್ಕೆ ಪ್ರತಿಕ್ರಿಯೆಯಾಗಿ ಉಲ್ಲಾಸ, ಹೃದಯ ಮಿಡಿತ, ಸಂತೋಷ ಹೀಗೆ ಹಲವಾರು ಭಾವನೆಗಳು ನಾದಗಳಾಗಿ ಹೊರಹೊಮ್ಮುತ್ತದೆ. ಈ ನಾದದ ಅಂಶವೇ 'ಲಯ' ವೆನಿಸಿಕೊಳ್ಳುತ್ತದೆ. ಇವೆಲ್ಲದಕ್ಕೂ ಛಂದಸ್ಸು ಕಾರಣೀಭೂತವಾಗಿದೆ.

ಛಂದಸ್ಸು ಪದ್ಯದ ರಚನೆಗೆ ಅಗತ್ಯವಾದ ವಿಷಯವಾಗಿದೆ. ಪ್ರಾಚೀನ ಕವಿಗಳೆಲ್ಲಾ ತಮ್ಮ ಕಾವ್ಯಗಳನ್ನು ಛಂದಸ್ಸಿಗೆ ಅನುಗುಣವಾಗಿ ರಚಿಸಿದ್ದಾರೆ. ಅದರಲ್ಲಿಯೂ ವ್ಯಾಕರಣ, ಛಂದಸ್ಸು, ಅಲಂಕರಾದಿ ವಿಷಯಗಳನ್ನು ತಿಳಿಸುವ ಗ್ರಂಥಗಳು ಹಿಂದೆ ಪದ್ಯಮಯವಾಗಿದ್ದವು. ಛಂದಸ್ಸನ್ನು ಒಳಸಿಕೊಂಡು ಶಾಸ್ತ್ರ ವಿಷಯಗಳನ್ನೊಳಗೊಂಡ ಕಾವ್ಯಗಳನ್ನು ರಚಿಸುತ್ತಿದ್ದರು. ಈ ಶಾಸ್ತ್ರ ವಿಷಯಗಳನ್ನು ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಳ್ಳಲು ಪದ್ಯವೇ ಸುಲಭ ಮಾರ್ಗವೆಂದು ನಮ್ಮ ಪ್ರಾಚೀನ ಕವಿಗಳು ಕಂಡುಕೊಂಡರು. ಛಂದಸ್ಸು ಕೆಲವು ವಿಶಿಷ್ಟ ರಸಭಾವಗಳ ಅಭಿವ್ಯಕ್ತಿಗೆ ತುಂಬಾ ಪ್ರಯೋಜನವಾಗಿದೆ.

ಛಂದಶ್ಶಾಸ್ತ್ರವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು 'ಗಣ'ಗಳ ಪ್ರಸ್ತಾರ ಹಾಕುವುದು ಮುಖ್ಯವಾದುದು. 'ಗಣ' ಎಂದರೆ ಎರಡು ಪಾದಗಳ ನಡುವೆ ಬರುವ ಅಕ್ಷರಗಳ ಗುಂಪು. ಇದನ್ನು ಮೂರು ರೀತಿಯಾಗಿ ವಿಂಗಡಿಸಬಹುದು.

೧. ಅಕ್ಷರ ಗಣ

೨. ಮಾತ್ರಾ ಗಣ

೩. ಅಂಶ ಗಣ

ಅಕ್ಷರ ವೃತ್ತಗಳು ಸಂಸ್ಕೃತದ ಲೌಕಿಕ ಛಂದಸ್ಸಿಗೆ ಸೇರಿದ ವೃತ್ತಗಳು. ಇದನ್ನು 'ಯಮಾತಾರಾಜಭಾನಸಲಗಂ' ಎಂಬ ಸೂತ್ರದಲ್ಲಿ ನೋಡಬಹುದು. ಖ್ಯಾತ ಕರ್ಣಾಟಕಗಳು ಈ ವೃತ್ತಕ್ಕೆ ಸೇರಿವೆ. ಮಾತ್ರಾ ವೃತ್ತಗಳು ಸಂಸ್ಕೃತ ಪ್ರಾಕೃತಗಳಲ್ಲಿ ವೃತ್ತವಿರುವುದು ಕಾಣುತ್ತೇವೆ. ಮಾತ್ರೆಗಳಿಂದ ಕಟ್ಟಿದ ಗಣಗಳು

[illegible]

[illegible]

[illegible]

[illegible]

[illegible]

- [illegible]
- [illegible]
- [illegible]

[illegible]

ಮಾತ್ರಾಗಣಗಳು. ಅಕ್ಷರಗಳಿಗೆ ಬೆಲೆಯನ್ನು ಕೊಡುವುದು ೩, ೪, ೫ ಮಾತ್ರೆಗಳ ಗುಂಪುಗಳನ್ನು ಒಂದೊಂದು ಗಣವಾಗಿ ವಿಂಗಡಿಸುವ ಗಣಗಳು ಮಾತ್ರಾಗಣಗಳು. ಕನ್ನಡದಲ್ಲಿ ಕಂದ, ರಗಳೆ, ಷಟ್ಪದಿ ಈ ಗಣಕ್ಕೆ ಸೇರಿವೆ.

ಅಂಶವೃತ್ತಗಳು ದ್ರಾವಿಡ ಭಾಷೆಯಲ್ಲಿ ಒಂದಾದ ಕನ್ನಡದಲ್ಲಿ ಹಿಂದಿನಿಂದಲೂ ಬಂದ ಹಾಡಿನ ಮಟ್ಟುಗಳು. ಇವುಗಳನ್ನು ನಾಗವರ್ಮನು 'ಕರ್ಣಾಟಕ ವಿಷಯಜಾತಿ' 'ಕರ್ಣಾಟಕ ವಿಷಯ ಜಾತಿ ವೃತ್ತ' ಎಂದು ಕರೆದಿದ್ದಾನೆ. ಜಯಕೀರ್ತಿಯು 'ಕರ್ಣಾಟಕ ವಿಷಯ ಭಾಷಾಜಾತಿ' ಎಂಬುದಾಗಿ ಹೇಳಿದ್ದಾನೆ. ಇವುಗಳನ್ನು ಹೇಳುವಾಗ 'ದೇಶ್ಯ ಛಂದಸ್ಸು' 'ಕನ್ನಡ ಛಂದಸ್ಸು' 'ಅಚ್ಚಗನ್ನಡ ಛಂದಸ್ಸು' ಎಂಬುದಾಗಿ ಹೇಳುತ್ತಾರೆ.

ಕನ್ನಡ ಛಂದಸ್ಸಿನ ರಹಸ್ಯ ಅಡಗಿರುವುದು ದೇಸೀ ಛಂದಸ್ಸಿನಲ್ಲಿ. ಇದರಲ್ಲಿ ಯತಿ ನಿಯಮವಿರುವುದು ಕಂಡುಬರುತ್ತದೆ. ಮಾತ್ರೆಗಳ ನಿರ್ಬಂಧವಿರುವುದಿಲ್ಲ. ತ್ರಿಪದಿ-ಅಕ್ಕರ-ಮೂಲಷಟ್ಪದಿ-ಸೀಸಸಾಂಗತ್ಯ ಈ ಜಾತಿಗೆ ಸೇರಿದವು. ಅಂಶಗಣದಲ್ಲಿ ಅಕ್ಷರಗಳು ಬಿಗಿಯಾಗಿರದೆ ಲಯಕ್ಕನುಗುಣವಾಗಿ ಹಿಗ್ಗಿಸಲೂಬಹುದು, ಕುಗ್ಗಿಸಲೂಬಹುದು, ತೇಲಿಸಲೂಬಹುದು. ಲಯಕ್ಕೆ ತಕ್ಕಂತೆ ಹೇಳುವುದೇ ಅಂಶಗಣದ ಲಕ್ಷಣವಾಗಿದೆ. ಅಂಶಗಣಗಳಿಗೆ ಮಾತ್ರೆ ಹಾಕಿದರೆ ಅವುಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಲಯದಲ್ಲಿ ಹಾಕಿದರೆ ಒಗ್ಗುತ್ತದೆ. ಅಂಶಗಣಗಳನ್ನು ಅಳೆಯುವ ಮಾನದಂಡವನ್ನು ನಾಗವರ್ಮ "ಛಂದೋಂಬುಧಿ"ಯಲ್ಲಿ ಹೇಳಿದ್ದಾರೆ. ಅವುಗಳು ಬ್ರಹ್ಮ, ವಿಷ್ಣು, ರುದ್ರವೆಂಬುದಾಗಿ ತಿಳಿಸಿದ್ದಾನೆ. ನಾಗವರ್ಮನಾಗಲಿ, ಜಯಕೀರ್ತಿಯಾಗಲಿ ತಮ್ಮ ಗ್ರಂಥಗಳಲ್ಲಿ ಅಚ್ಚಗನ್ನಡ ಮಟ್ಟುಗಳು ಎನಿಸಿರುವ ಅಂಶಗಣಾತ್ಮಕವಾದ ರಚನೆಗಳನ್ನು ಹೇಳುವಾಗ ಮದನವತಿ, ಅಕ್ಕರ, ಚೌಪದಿ, ಗೀತಿಕೆ, ಏಳೆ, ತ್ರಿಪದಿ, ಉತ್ಸಾಹ, ಷಟ್ಪದಿ, ಅಕ್ಕರಿಕೆ ಛಂದೋವಸಂತ ಎಂಬ ೧೦ ಬಗೆಗಳನ್ನು ಹೇಳಿದ್ದಾರೆ. ಆದರೆ 'ಸಾಂಗತ್ಯ'ದ ಮಾತನ್ನು ಅವರು ಎಲ್ಲಿಯೂ ಪ್ರಸ್ತಾಪಿಸಿಲ್ಲ. ಅವರ ಕಾಲಕ್ಕೆ ಈ 'ಸಾಂಗತ್ಯ'ವೆಂಬ ಅಚ್ಚಗನ್ನಡ ಮಟ್ಟು ಇನ್ನೂ ರೂಪಗೊಂಡಿರಲಿಲ್ಲವೆಂದು ತೋರುತ್ತದೆ. ಮುಂದೆ ಈ ಎಲ್ಲಾ ಪ್ರಕಾರಗಳು ಅಲ್ಪಸ್ವಲ್ಪ ಮಾರ್ಪಾಟು ಹೊಂದಿ 'ಸಾಂಗತ್ಯ'ವೆಂಬ ಪ್ರಕಾರ ರೂಪಗೊಂಡಿದೆ.

ಬೇರೆ ಮಟ್ಟುಗಳಿಂದ ಹುಟ್ಟಿದ 'ಸಾಂಗತ್ಯ'ದಿಂದ ಷಟ್ಪದಿ, ತ್ರಿಪದಿ ಕಾವ್ಯಗಳಂತೆ ಇದರಲ್ಲೂ ಹಲವಾರು ಪ್ರಮುಖ ಕಾವ್ಯಗಳು ಹುಟ್ಟಿಬಂದಿವೆ. ಸಾಂಗತ್ಯ ಅಚ್ಚಗನ್ನಡ ಮಟ್ಟುಗಳಲ್ಲಿ ಪ್ರಮುಖವಾದುದು. ಇದು ಹಾಡಿನ ಮಟ್ಟು, ಕುಟ್ಟುವ, ಬೀಸುವ ಹೆಣ್ಣುಮಕ್ಕಳ ಹಾಡುಗಳೆಲ್ಲವೂ ಈ ಸಾಂಗತ್ಯದಲ್ಲೇ ಇವೆ. ಇದಕ್ಕೆ ತಾಳವೇ ಪ್ರಧಾನ. ಹೊಸದಾಗಿ ಸೇರಿಕೊಂಡ ಈ ಮಟ್ಟು ಮುಂದೆ ಕವಿಪ್ರಿಯವೂ, ಜನಪ್ರಿಯವೂ ಆಗಿ ಬೆಳೆಯಿತು.

೧೫ ನೇ ಶತಮಾನದಿಂದೀಚೆಗೆ ಸಾಂಗತ್ಯದ ಉಗಮವಾಯಿತೆಂದು ಹೇಳಲಾಗಿದೆ. ೧೫೧೦ ರಲ್ಲಿದ್ದ ದೇಪರಾಜನ 'ಸೊಬಗಿನ ಸೋನೆ'ಯೇ ಇದುವರೆಗೆ ತಿಳಿದುಬಂದ ಮೊದಲ ಸಾಂಗತ್ಯ ಕೃತಿಯಾಗಿದೆ. ಈ

[illegible]

[illegible]

[illegible]

[illegible]

[illegible]

[illegible]

ಛಂದಸ್ಸನ್ನು ಬಳಸಿಕೊಂಡು ೧೦ ಪದ್ಯಗಳನ್ನೊಳಗೊಂಡ ಒಂದು ಚಿಕ್ಕ ಕೃತಿಯಿಂದ ಹಿಡಿದು ೧೦,೦೦೦ ಪದ್ಯಗಳನ್ನೊಳಗೊಂಡ ಬೃಹತ್ ಕಾವ್ಯವೂ ಮೂಡಿಬಂದಿದೆ. ಸಾಂಗತ್ಯವು ಸುಲಲಿತವೂ, ಸುಸಮರ್ಥವೂ ಆದ ಒಂದು ಛಂದ ಪ್ರಕಾರವಾಗಿದೆ. ಇತರ ಎಲ್ಲಾ ದೇಸೀ ಛಂದಸ್ಸನ್ನು ಬಳಸಿರುವುದಕ್ಕಿಂತ ಸಾಂಗತ್ಯವನ್ನು ಹೆಚ್ಚು ಕವಿಗಳು ವಿಫಲವಾಗಿ ಬಳಸಿ ಗ್ರಂಥಗಳನ್ನು ರಚಿಸಿದ್ದಾರೆ. ಮಾತ್ರಾಗಣದ ಚೌಕಟ್ಟಿಗೆ ಒಳಗಾಗದೆ ಅಂಶಗಣಕ್ಕೆ ಹೊಂದಿಕೊಂಡು ಅದರ ತಾಳಕ್ಕೆ ಹೊಂದಿಕೊಂಡು ಸಾಂಗತ್ಯ ಪ್ರಸಿದ್ಧಿಯನ್ನು ಪಡೆಯಿತು. ರತ್ನಾಕರವರ್ಣಿ, ಕನಕದಾಸ, ಮಂಗರಸ, ನಂಜುಂಡ ಕವಿಗಳು ಕಾವ್ಯರಚನೆಯಲ್ಲಿ ಈ ಸಾಂಗತ್ಯವನ್ನು ಬಳಸಿಕೊಂಡು ಅದರ ಬೆಳವಣಿಗೆಗೆ ದಾರಿಮಾಡಿಕೊಟ್ಟಿದ್ದಾರೆ. ಕನ್ನಡ ಕವಿಯಿತ್ರಿಯರೂ ಇದನ್ನು ಬಳಸಿರುವುದು ಕಂಡುಬರುತ್ತದೆ.

'ಸಾಂಗತ್ಯ'ವನ್ನು ಕುರಿತು ಕೆಲವು ವಿದ್ವಾಂಸರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

ಟಿ.ವಿ. ವೆಂಕಟಾಚಲಶಾಸ್ತ್ರಿ : "ಹಾಡಿನ ರೂಪದಲ್ಲಿ ಒಂದು ಸಂಗತಿಯನ್ನು ಎಂದರೆ ಘಟನೆ, ಸಂದರ್ಭ ಅಥವಾ ವಿಷಯವನ್ನು ನಿರೂಪಿಸುವುದೇ ಸಾಂಗತ್ಯ."

ಸೇಡಿಯಾಪು ಕೃಷ್ಣಭಟ್ಟರು : "ಸಾಂಗತ್ಯ ಎಂಬ ಶಬ್ದಕ್ಕೆ 'ಒಡಗೂಡಿರುವಿಕೆ' ಎಂದು ಅರ್ಥ."

ಡಿ.ಎಸ್.ಕರ್ಕಿ : "ಸಾಂಗತ್ಯಕ್ಕೆ ದೊರೆತ ಹೆಸರಿನಷ್ಟು ಒಪ್ಪುವ ಹೆಸರು ಕನ್ನಡ ಮಟ್ಟುಗಳಲ್ಲಿ ಇನ್ನಾವುದಕ್ಕೂ ದೊರೆತಿಲ್ಲ. ಸಾಂಗತ್ಯವು ಹಾಡುಗಬ್ಬಕ್ಕೆ ತುಂಬಾ ಅಳವಡಿಸುವ ಮಟ್ಟು. ಅದರ ರಾಗರಂಜನೆ ಅಪ್ರತಿಮವಾದದ್ದು. ಸಾಂಗತ್ಯವು ಮಧುರ ಸ್ವರಗಳ ಸಮ್ಮಿಲನದಿಂದ ಹೊರಡುವ ಗತಿಯನ್ನು ಸೂಚಿಸುತ್ತದೆ." 'ಭರತೇಶ ವೈಭವ', 'ಮೋಹನ ತರಂಗಿಣಿ' ಇದಕ್ಕೆ ಉದಾಹರಣೆ.

ಬಿ.ಎಂ.ಶ್ರೀ : 'ಗೀತಿಕೆಯ ಎರಡು ಪಾದಗಳು ಅಥವಾ ಪಿರಿಯಕ್ಕರದ ಎರಡು ಪಾದಗಳ ರೂಪಾಂತರವೇ ಸಾಂಗತ್ಯ.'

'ಸಾಂಗತ್ಯ'ದ ಸಾಮಾನ್ಯ ಲಕ್ಷಣವನ್ನು ಈ ರೀತಿಯಾಗಿ ನೋಡಬಹುದು.

ವಿ. ವಿ. ವಿ. ವಿ

ವಿ. ವಿ. ಬ್ರ

ವಿ. ವಿ. ವಿ. ವಿ

ವಿ. ವಿ. ಬ್ರ.

ಉದಾಹರಣೆ :

- ಪರಮಪರಂ ಜ್ಯೋತಿ ಕೋಟಿಚಂದ್ರಾದಿತ್ಯ
  ಕಿರಣ ಸುಜ್ಞಾನ ಪ್ರಕಾಶ
  ಸುರರ ಮಕುಟಮಣಿ ರಂಜಿತಚರಣಾಬ್ಜ
  ಶರಣಾಗು ಪ್ರಥಮ ಜಿನೇಶ (ಆಸ್ಥಾನ ಸಂಧಿ)

- ಹತ್ತೆಂಟು ಪಯಣವ ಬಂದು ಪೌದನಪುರ
  ದತ್ತ ಸಾರ್ದಲಿಂದ ಮುಂದೆ
  ಎತ್ತಿ ನಡೆವೆನೆನೆ ನಿಂದುದು ನಡೆಯದ
  ತ್ತಿತ್ತೊಲೆಯದೆ ಚಕ್ರರತ್ನ (ಕಾಮದೇವಾಸ್ಥಾನ ಸಂಧಿ)

- ಚೆನ್ನಾಗಿ ಕಂಡಿರಿ ನಿಮ್ಮಂತೆ ಕಾಣ್ಬವ
  ರಿನ್ನುಂಟೆ ನನ್ನೆದೆಯೊಳಗ
  ಬನ್ನಿ ನಾವೆಲ್ಲವನ್ನಾ ರೋಗಿಸುವುದೆಂದು
  ಮನ್ನಿಸಿ ಕರೆವುತ ನಡೆದ (ಆರೋಗಣೆ ಸಂಧಿ)

- ವನದೊಳು ಚರಿಸಿ ವಸಂತನಾವನವ ಭೂಂ
  ಕನೆ ಚಿಗುರೇರಿಸುವಂತೆ
  ವನಧಿ ಮಧ್ಯದ ಧರಣಿಯ ನಿನ್ನ ಸುಳುಹಿಂದ
  ನನೆಕೊನೆವೋಗಿಸು ನೃಪತಿ (ನವರಾತ್ರಿ ಸಂಧಿ)

- ಒಡನೆ ಮುಂದೆಯ್ದಿ ಮತ್ತಾ ಗುಹೆಗಿಕ್ಕಿದ
  ಬಡಗಣ ಕದವಿನ ಕೀಲ
  ಬಡಿದೊತ್ತಿ ತೆಗೆವುದು ನಾವೆಯ್ದುವಿನೆಗಲ್ಲಿ
  ಪಡೆಗೂಡಿ ಕೃತಮಾಲನಿರಲಿ (ಮೈದುನ ಮಾತಿನ ಸಂಧಿ)

ಸಾಂಗತ್ಯ ನಾಲ್ಕು ಪಾದಗಳುಳ್ಳ ಪದ್ಯ. ಅಂಶಗಣ ಪ್ರಧಾನವಾದ ಒಂದು ಛಂದೂಬಂಧಿ. ಒಂದು ಮತ್ತು ಮೂರನೇ ಪಾದಗಳು ಒಂದು ಸಮನಾದರೆ, ಎರಡು ಮತ್ತು ನಾಲ್ಕನೇ ಪಾದಗಳು ಒಂದು ಸಮ. ಒಂದು ಮತ್ತು ಮೂರನೇ ಸಾಲಿನಲ್ಲಿ ನಾಲ್ಕು ನಾಲ್ಕು ವಿಷ್ಣುಗಣಗಳು, ಎರಡು ಮತ್ತು ನಾಲ್ಕನೇ

ಪಾದಗಳಲ್ಲಿ ಎರಡೆರಡು ವಿಷ್ಣು ಗಣಗಳು ಮತ್ತೆ ಕೊನೆಯಲ್ಲಿ ಒಂದೊಂದು ಬ್ರಹ್ಮಗಣವು ಬರುತ್ತದೆ. ಕೆಲವು ಕಡೆ ವಿಷ್ಣುವಿಗೆ ಬದಲಾಗಿ ಬ್ರಹ್ಮಗಣ ಬರುತ್ತದೆ. ಆದಿಪ್ರಾಸ, ದ್ವಿತೀಯಾಕ್ಷರ ಪ್ರಾಸ ನಿಯತವಾಗಿ ಬರುತ್ತದೆ. ೩ ಮತ್ತು ೧೪ನೇ ಸ್ಥಾನದಲ್ಲಿ ಬ್ರಹ್ಮಗಣ ಬರುತ್ತದೆ.

ಸಾಂಗತ್ಯ ಲಕ್ಷಣವನ್ನು ಅನುಸರಿಸಿ ಕೃತಿಗಳು ರಚನೆಗೊಂಡರು ಕೂಡ ಕನಕದಾಸ, ಮಂಗರಸ, ಶಿಶುಮಾಯಣ, ನಂಜುಂಡಕವಿ, ಸಂಚಿ ಹೊನ್ನಮ್ಮ ಮುಂತಾದ ಕವಿಗಳು ಸಾಂಗತ್ಯ ಲಕ್ಷಣವನ್ನು ಮೀರಿ ಪರ್ಯಾಯ ಗಣವನ್ನು ತಂದಿದ್ದಾರೆ. ರತ್ನಾಕರವರ್ಣಿ ಸಾಂಗತ್ಯದ ಅನನ್ಯತೆಯನ್ನು ಅದರ ವೈಶಿಷ್ಟ್ಯತೆಯನ್ನು 'ಭರತೇಶವೈಭವ'ದಲ್ಲಿ ತಂದಿದ್ದಾನೆ. ಆದ್ದರಿಂದ ಈ ಛಂದಸ್ಸಿನ ದೃಷ್ಟಿಯಿಂದ ನೋಡಿದರೆ ರತ್ನಾಕರನು ಗಣ್ಯನಾದವನು. ಸಾಂಗತ್ಯ ಕವಿಗಳಿಗೆ ಇವನೇ ಮಾದರಿಯಾಗಿದ್ದಾನೆ.

೧೫ನೇ ಶತಮಾನದಲ್ಲಿ ಸಾಂಗತ್ಯದಲ್ಲಿ ಕಾವ್ಯ ರಚನೆಯು ಪ್ರಾರಂಭವಾಗಿ ಅದು ನಿರಂತರವಾಗಿ ಮುಂದುವರೆದು ೧೬ನೇ ಶತಮಾನದಲ್ಲಿ ಉನ್ನತ ಶಿಖರಕ್ಕೆ ಏರಿತು. ಮಂಗರಸ, ನಂಜುಂಡ ಕವಿ, ಕನಕದಾಸ, ರತ್ನಾಕರ ಈ ಪ್ರಸಿದ್ಧ ಕವಿಗಳು ಈ ಕಾಲಕ್ಕೆ ಸೇರಿದವರು. ಇವರು ಈ ಛಂದಸ್ಸನ್ನು ಜನಪ್ರಿಯಗೊಳಿಸಿದರು. ಹೀಗೆ ಮುಂದೆ ಬಂದ ಕವಿಗಳು ಇವನ್ನೇ ತಮ್ಮ ಕಾವ್ಯ ಮಾಧ್ಯಮವಾಗಿ ಮಾಡಿಕೊಂಡು ಕೃತಿಗಳನ್ನು ರಚಿಸಿದರು. ೧೭ನೇ ಶತಮಾನದಲ್ಲಿ ನೂರಾರು ಕೃತಿಗಳು ಹೊರಬಂದವು. ೧೮-೧೯ನೇ ಶತಮಾನದಲ್ಲಿ ಕ್ರಮೇಣ ಇಳಿಮುಖವಾಯಿತು.

ಸಾಂಗತ್ಯದ ಬೆಳವಣಿಗೆಯಲ್ಲಿ ಜೈನರು, ವೀರಶೈವರು, ವೈಷ್ಣವರು ಪ್ರಮುಖರಾಗಿದ್ದಾರೆ. ಅದರಲ್ಲಿ ಜೈನರು ಇದರ ಬೆಳವಣಿಗೆಗೆ ಹಿರಿದಾದ ಪಾತ್ರವನ್ನು ವಹಿಸಿದ್ದಾರೆ. ಇವರ ಕೊಡುಗೆ ಅಪಾರವಾದದ್ದು. ತೀರ್ಥಂಕರರ ಚರಿತ್ರೆಗಳನ್ನು, ಧಾರ್ಮಿಕ ಮಹಾಪುರುಷರ ಕಥೆಗಳು, ಮತ ತತ್ವವನ್ನು ಕುರಿತ ಕತೆಗಳನ್ನು ಹೇಳಲು ಜೈನ ಕವಿಗಳು ಸಾಂಗತ್ಯವನ್ನು ಬಳಸಿದರು. ಅವರು ಯಾವ ಯಾವ ವಿಷಯಗಳನ್ನು ನಿರೂಪಿಸಿದರೂ ಅವುಗಳು ಸರಳವಾಗಿ ನಿರರ್ಗಳವಾಗಿ ಸಾಂಗತ್ಯದಲ್ಲಿ ಕೃತಿಯನ್ನು ರಚಿಸಿದರು. ಕಲ್ಯಾಣಕೀರ್ತಿಯು (೧೪೩೯) ಮೊದಲ ಜೈನ ಸಂಪ್ರದಾಯದ ಸಾಂಗತ್ಯ ಕೃತಿಯ ರಚನಕಾರ. ಅವನ 'ಕಾಮನ ಕಥೆ' ಮೊದಲ ಸಾಂಗತ್ಯ ಕೃತಿ. ಇದು ಚಿಕ್ಕದಾದ ಒಂದು ಸಾಂಗತ್ಯ ಕೃತಿ. ಇದರಲ್ಲಿ ರುಕ್ಮಿಣಿಯ ಮಗ ಪ್ರದ್ಯುಮ್ನನ ಕಥೆಯನ್ನು ಜೈನ ಪರಂಪರೆಗೆ ಅನುಸಾರವಾಗಿ ಹೇಳಲಾಗಿದೆ.

ವೀರಶೈವ ಕವಿಗಳೂ ಕೂಡ ಜೈನರಂತೆಯೇ ಮತದ ಆಚಾರ ವಿಚಾರಗಳನ್ನು ಕುರಿತಂತೆ ಮಾತ್ರವಲ್ಲದೆ ಧರ್ಮ ಪ್ರವರ್ಧನೆಗೆ, ಧರ್ಮ ಪ್ರಚಾರಕ್ಕೆ, ಮತತತ್ವಕ್ಕೆ ಅಲ್ಲದೆ ಶಿವಲೀಲೆಯನ್ನು ಹೇಳಲು, ಶಿವಭಕ್ತರ ಮಹತ್ವವನ್ನು ನಿರೂಪಿಸಲು ಅವರು ಸಾಂಗತ್ಯವನ್ನು ಬಳಸಿಕೊಂಡರು. ವೀರಶೈವ ಸಾಂಗತ್ಯ ಕವಿಗಳಲ್ಲಿ ಮಲ್ಲಿಕಾರ್ಜುನ (ಕ್ರಿ.ಸು. ೧೪೮೫)ನು 'ಶ್ವೇತನ ಸಾಂಗತ್ಯ' ಎಂಬ ಕೃತಿಯನ್ನು ರಚಿಸಿದನು. ಇದೇ ವೀರಶೈವ ಸಾಂಗತ್ಯ ಕೃತಿಗಳಲ್ಲಿ ಮೊದಲನೆಯದು.

ವೈಷ್ಣವ ಸಂಪ್ರದಾಯದಲ್ಲಿ ಹಲವಾರು ಹರಿದಾಸರು ಕೃತಿಗಳನ್ನು ರಚಿಸಿದರು. ಆದರೆ ಈ ವೈದಿಕ ಸಾಂಗತ್ಯ ಕೃತಿಗಳಲ್ಲಿ ಕನಕದಾಸರಿಗೆ ಪ್ರಮುಖವಾದ ಸ್ಥಾನ ಸಲ್ಲುತ್ತದೆ. ಇವರನ್ನೊಳಗೊಂಡ ಅನೇಕ ಹರಿದಾಸರು ವಿಷ್ಣುವಿನ ಲೀಲಾ ವಿಲಾಸವನ್ನು, ಹರಿಭಕ್ತಿಯನ್ನು, ವಿಷ್ಣುವಿನ ಮಹಾತ್ಮೆಯನ್ನು ಆ ಭಕ್ತರ ಚರಿತ್ರೆಯನ್ನು ಮೊದಲಾದವುಗಳನ್ನು ಸಾಂಗತ್ಯದಲ್ಲಿ ರಚಿಸಿದ್ದಾರೆ. ಇದರಲ್ಲಿ ಪ್ರಮುಖವಾದುದೆಂದರೆ ಕನಕದಾಸರ 'ಮೋಹನ ತರಂಗಿಣಿ'. ಇದು ಶ್ರೀವೈಷ್ಣವ ಧರ್ಮದ ಮೊದಲ ಸಾಂಗತ್ಯ ಕೃತಿ. ಈ ಸಾಹಿತ್ಯ ಕೃತಿಯಲ್ಲಿ ಅವರು ತಮ್ಮ ಸಮಕಾಲೀನ ಜೀವನ ಚಿತ್ರಣವನ್ನು ಚಿತ್ರಿಸಿದ್ದಾರೆ. ಶ್ರೀಕೃಷ್ಣನ ಚರಿತ್ರೆಯನ್ನು, ಮಹಾತ್ಮೆಯನ್ನು, ಲೀಲೆಯನ್ನು ಹೇಳುವುದೇ ಈ ಕೃತಿಯ ವಸ್ತುವಾಗಿದೆ.

ಚಾರಿತ್ರಿಕ ಕಥಾವಸ್ತುವನ್ನು, ಸ್ತ್ರೀ ನೀತಿಯನ್ನು, ವೈದ್ಯ ಗ್ರಂಥಗಳನ್ನು ಸಾಂಗತ್ಯದಲ್ಲಿ ರಚಿಸಿದ್ದಾರೆ. ಅಂಶಗಣಾತ್ಮಕವಾದ ಈ ಸಾಂಗತ್ಯದಲ್ಲಿ ಚಂಪೂವಿನಲ್ಲಿ ಇದ್ದಹಾಗೆ ಯಾವ ನಿಯಮ ನಿಷ್ಠೆಗಳು ಇರುವುದಿಲ್ಲ. ಈ ತರಹದ ಹೇಳಿಕೆಯನ್ನು ಸಾಂಗತ್ಯದಲ್ಲಿ ಕೃತಿಯನ್ನು ರಚಿಸಿದ ಕವಿಗಳು ಕಾವ್ಯದ ಆರಂಭದಲ್ಲಿ ಹೇಳಿಕೊಂಡಿರುತ್ತಾರೆ. ಇದರಲ್ಲಿ ಬರುವ ಭಾಗಗಳನ್ನು ಸಂಧಿ, ಆಶ್ವಾಸವೆಂದು ಗುರುತಿಸುತ್ತಾರೆ.

ಪರಂಪರಾಗತವಾಗಿ ಬಂದ ಹಾಗೆ ಈ ಕಾವ್ಯಗಳಲ್ಲೂ ಮೊದಲಿಗೆ ಇಷ್ಟದೇವತಾ ಸ್ತುತಿ, ಗುರುಗಳ ಸ್ತುತಿ, ಪದ್ಯವನ್ನು ಓದಿದಾಗ ಬರುವ ಫಲಗಳು ಎಲ್ಲವನ್ನು ಆದಿಯಲ್ಲಿ ಮತ್ತು ಅಂತ್ಯದಲ್ಲಿ ಇದರಿಂದ ಬರುವ ಫಲಶೃತಿಗಳನ್ನು ಹೇಳಿರುತ್ತಾರೆ. ಇದು ಸಾಮಾನ್ಯವಾಗಿ ಎಲ್ಲ ಕವಿಗಳು ಮಾಡುವುದೇ ಆಗಿದೆ.

ಪ್ರಸ್ತುತ ಈ ಅಧ್ಯಾಯದಲ್ಲಿ ರತ್ನಾಕರನು ಸಾಂಗತ್ಯದಲ್ಲಿ 'ಭರತೇಶವೈಭವ'ವನ್ನು ಹೇಗೆ ನಿರೂಪಿಸುತ್ತಾ ಹೋಗಿದ್ದಾನೆ ಎಂದು ನೋಡುವುದಾಗಿದೆ. ಸಾಂಗತ್ಯ ಛಂದಸ್ಸಿನ ವಿಚಾರವನ್ನು ಎತ್ತಿಕೊಂಡಾಗ ನಮಗೆ ಮೊದಲು ಕಣ್ಮುಂದೆ ಬರುವ ಕೃತಿ ಎಂದರೆ ರತ್ನಾಕರವರ್ಣಿಯ 'ಭರತೇಶವೈಭವ'. ಸಾಂಗತ್ಯ ಕೃತಿಗಳಲ್ಲಿ ಇವರ ಸ್ಥಾನ ಹಿರಿದಾದುದಾಗಿದೆ. ಈ ಚಿಕ್ಕ ಪ್ರಕಾರವನ್ನು ಬಳಸಿಕೊಂಡು ೧೦,೦೦೦ ಪದ್ಯಗಳನ್ನು ರಚಿಸಿದ. ಸಾಂಗತ್ಯ ಕವಿಗಳಲೆಲ್ಲ ರತ್ನಾಕರವರ್ಣಿಯು ಸಮರ್ಥನೂ, ಪ್ರಭಾವಶಾಲಿಯೂ ಆದ ಕವಿ ಎನಿಸಿದ್ದಾನೆ. ಈತನು ಈ ಛಂದ ಪ್ರಕಾರಕ್ಕೆ ಕೊಟ್ಟಷ್ಟು ಒತ್ತು ಮತ್ತೆ ಯಾವ ಕವಿಯೂ ಕೊಟ್ಟಿಲ್ಲ.

ಸಾಂಗತ್ಯವು ಓದುವುದಕ್ಕೆ ಸುಲಭವಾಗಿರುವುದು ಜೊತೆಗೆ ಹಾಡುವುದಕ್ಕೂ ಇಂಪಾಗಿ ಇರುವುದು. ಕಾವ್ಯಗಳಲ್ಲಿ ವಸ್ತುಕ, ವರ್ಣಕ ಎಂಬ ಎರಡು ವಿಧದಲ್ಲಿ ಇದು ವರ್ಣಕದ ಗುಂಪಿಗೆ ಸೇರಿದೆ. ವಸ್ತುಕದಲ್ಲಿ ಕಥಾವಸ್ತುವೇ ಪ್ರಧಾನವಾಗಿ ಬಂದಿರೆ ವರ್ಣಕದಲ್ಲಿ ವರ್ಣನೆ ಮಾಡುವುದೇ ಮುಖ್ಯವಾಗುತ್ತದೆ. ಇದನ್ನು ಭರತೇಶವೈಭವದಿಂದ ತಿಳಿಯಬಹುದು. ಸಂಗೀತವೇ ಪ್ರಧಾನವಾದ ಹಾಡುಗಬ್ಬ ಸಾಂಗತ್ಯ. ಹಾಡಿನ ರೂಪದಲ್ಲಿ ಒಂದು ಸಂಗತಿಯನ್ನು ನಿರೂಪಿಸುತ್ತದೆ. "ಭರತೇಶವೈಭವ'ವು ಈ ಅರ್ಥದಲ್ಲಿ ವರ್ಣಕ ಕಾವ್ಯವೆನ್ನಲು ಅದರಲ್ಲಿ ಸೇರಿದ ಸಭಾಗೃಹ, ಸಂಗೀತ ನಾಟ್ಯ, ಆರೋಗಣೆ ಇವೇ ಮೊದಲಾದವುಗಳ ಸುದೀರ್ಘ ವರ್ಣನೆಯೇ ಸಾಕ್ಷಿ. ಅದರಲ್ಲಿ ಒಂದೊಂದು ಸಂಧಿ ಒಂದೊಂದು ವರ್ಣನೆಗೆ ಮೀಸಲಾಗಿದೆ." (ಡಿ.ಎಸ್. ಕರ್ಕಿ, ೧೯೫೫, ಪು.೨೧೩).

[illegible]

ಮಧ್ಯಕಾಲೀನ ಕನ್ನಡ ಸಾಹಿತ್ಯ ಕವಿಗಳಿಗೆ ಸಾಂಗತ್ಯ ನಾಡಿಮಿಡಿತ ಇಷ್ಟವಾಯಿತು. ಇದರಲ್ಲಿ ಬರುವ ಭಾಷೆ ನಡುಗನ್ನಡ ಭಾಷೆ. ಓದಲು ಹಳೆಗನ್ನಡದಂತೆ ಕಷ್ಟವಾಗಿರುವುದಿಲ್ಲ. ನಿರಕ್ಷರ ಹೆಣ್ಣುಮಕ್ಕಳು ಸಾಂಗತ್ಯವನ್ನು ಹಾಡುತ್ತಾರೆ. ಸುಕೋಮಲ ಭಾವನೆಗಳನ್ನು ಸುಲಲಿತವಾಗಿ ಹೇಳಲು ಸಾಂಗತ್ಯವು ಒಗ್ಗುವಂತಹ ಮಟ್ಟಾಗಿದೆ. ಇದು ಭರತೇಶ ವೈಭವದಿಂದ ತಿಳಿಯುತ್ತದೆ.

ಪ್ರತಿಯೊಬ್ಬ ಕವಿಯು ಪ್ರಮುಖವಾದ ಕಾವ್ಯ ರೂಪವನ್ನು ಬಳಸಿಕೊಂಡು ಕಾವ್ಯಗಳನ್ನು ಕೃತಿಗಳನ್ನು ರಚಿಸುತ್ತಾರೆ. ಆ ಕಾವ್ಯರೂಪವನ್ನು, ಛಂದಸ್ಸನ್ನು ಸಂಪೂರ್ಣವಾಗಿ ಕರಗತ ಮಾಡಿಕೊಂಡು ಅದನ್ನು ತಮ್ಮ ಭಾವ, ಭಾವನೆಗಳಿಗೆ ಸ್ಪಂದಿಸುವ ಹಾಗೆ ತಮ್ಮ ಕೃತಿಯ ವಸ್ತು ವಿನ್ಯಾಸಕ್ಕೆ ನಿರೂಪಣೆಗೆ ಯೋಗ್ಯವಾಗಿ ಒಗ್ಗುವ ಹಾಗೆ ಬಳಸಿಕೊಂಡವರು ಕೆಲವರು ಮಾತ್ರವೇ. ಅದರಲ್ಲಿ ರತ್ನಾಕರವರ್ಣಿಯೂ ಒಬ್ಬನು. ಇವನು ಸಾಂಗತ್ಯವನ್ನು ಸಂಪೂರ್ಣವಾಗಿ ಅರಿತು ಅದನ್ನು ತನ್ನ ಕಾವ್ಯದಲ್ಲಿ ದುಡಿಸಿಕೊಂಡು ಸಾಂಗತ್ಯದ ಸೀಮಾ ಪುರುಷ ಎನಿಸಿಕೊಂಡಿದ್ದಾನೆ. "ರತ್ನಾಕರನು ಸಾಂಗತ್ಯಕಾರರಲ್ಲೆಲ್ಲ ವಿಶೇಷ ಪ್ರತಿಭಾವಂತನಾದುದರಿಂದ, ದೈವದತ್ತವಾದ ಕಾವ್ಯ ಪ್ರತಿಭೆಯ ಜೊತೆಗೆ ಸ್ವತಂತ್ರ ದೃಷ್ಟಿ, ಜೀವನ ಪ್ರೀತಿ, ಕಲಾ ನೈಪುಣ್ಯ, ಆಧ್ಯಾತ್ಮದ ಶ್ರದ್ಧೆ, ಲೋಕಾನುಭವ ಮುಂತಾದವು ಸಮರಸವಾಗಿ ಆತನಲ್ಲಿ ಮೇಳವಿಸಿ ಆತನ ಸಾಂಗತ್ಯ ಕೃತಿ 'ಭರತೇಶವೈಭವ' ಸರ್ವಶ್ರೇಷ್ಠ ಸಾಂಗತ್ಯ ಕೃತಿಯಾಗಲು ಸಾಧ್ಯವಾಯಿತು. ಆತ ಕನ್ನಡದ ನಾಲ್ಕೈವರು ಮಹಾಕವಿಗಳಲ್ಲಿ ಒಬ್ಬನಾದನು" (ಟಿ.ವಿ. ವೆಂಕಟಾಚಲಶಾಸ್ತ್ರಿ, ೧೯೯೯, ಪು.೨೫೧).

ಕವಿಯು ಕಾವ್ಯದಲ್ಲಿ ತೆಗೆದುಕೊಂಡ ವಸ್ತುವಿನ ಆಯ್ಕೆ, ಅದನ್ನು ವಿನ್ಯಾಸಗೊಳಿಸಿದ ರೀತಿ, ಸನ್ನಿವೇಶ, ಸಂಭಾಷಣೆಗಳು ಪಾತ್ರಗಳ ಸ್ವಭಾವವನ್ನು ನಿರೂಪಿಸುವುದು, ವರ್ಣನೆಗಳನ್ನು ಮಾಡುವುದು ಎಲ್ಲವನ್ನು ಸಹ ವಿವಿಧ ರಸಭಾವಗಳಿಂದ ಅವುಗಳನ್ನು ನಿಯತವಾದ ಒಂದು ಛಂದಸ್ಸಿನಲ್ಲಿ ವೈವಿಧ್ಯಮಯವಾಗಿ ಕವಿ ಹೇಳುತ್ತಾ ಹೋಗುತ್ತಾನೆ. ಬೇರೆ ಯಾವುದೇ ಛಂದಸ್ಸಿನ ಪ್ರಕಾರ ಕವಿ ತಂದಿಲ್ಲ. ಎಲ್ಲವೂ ನಿಯತವಾದ ಸಾಂಗತ್ಯದ ಧಾಟಿಯಲ್ಲೇ ಆದಿಯಿಂದ ಅಂತ್ಯದವರೆಗೂ ಒಂದೇ ಸಮನಾಗಿ ಹೇಳಿದ್ದಾನೆ.

ರತ್ನಾಕರನು ಬೃಹತ್ ಗ್ರಂಥವನ್ನು ಬರೆದರೂ ಯಾವುದೇ ರಾಜಮರ್ಯಾದೆಯನ್ನು ಪಡೆಯದೆ, ವಿದ್ವಜ್ಜನ ಮನ್ನಣೆಯನ್ನು ಪಡೆಯಲು ಕೃತಿಯನ್ನು ರಚಿಸಿಲ್ಲ. ಅವನೇ ಕೊನೆಯಲ್ಲಿ ಹೇಳಿಕೊಂಡಿರುವ ಹಾಗೆ.

- ಮೆಯ್ಯೊಳಿರ್ದಾತ್ಮನ ಬತ್ತಲೆ ಮಾಡಿ ನಾ
  ನೊಯ್ಯನೀಕ್ಷಿಸಿದರೆ ತಾವು
  ಮೆಯ್ಯ ಬತ್ತಲೆ ಮಾಡಿ ಮನವ ಕತ್ತಲೆ ಮಾಡಿ
  ಹುಯ್ಯಲಿಡುತ ಸುತ್ತುತಿಹರು. (ಸರ್ವರಮೋಕ್ಷ ಸಂಧಿ)

- ಏನೇನು ಪರಿಯೊಳಾಡಿದರು ತವಗೆ ಕೀರ್ತಿ
  ಹಾನಿಯಾಗಿಯೆ ಬಂದಿತದಕೆ
  ಬೇನೆಬಟ್ಟೊಡನೆಮ್ಮ ಕಾವ್ಯವ ಜರೆದರ
  ಜ್ಞಾನಿಗಳಲ್ಲ ಸಲ್ಲೆಂದು. (ಸರ್ವರಮೋಕ್ಷ ಸಂಧಿ)

- ತರ್ಕ ಪುರಾಣ ತಳ್ಳಿಯ ತೋರಿ ಬೆದಬೆಂದ
  ರರ್ಕನ ಪಳಿದ ಗೂಗೆಯೊಲು
  ಮಾರ್ಕೊಳ್ಳದಾನು ಮೋನದೊಳಿರ್ದೆ ಬಂಧರು ರಾ
  ಜರ್ಕಳೆ ನೂಂಕಿದರವರ. (ಸರ್ವರಮೋಕ್ಷ ಸಂಧಿ)

ಹೀಗೆ ಕವಿ ಹೇಳಿಕೊಂಡಿದ್ದಾನೆ.

'ಸಾಂಗತ್ಯ'ವೆಂದರೆ 'ಮೇಳದೊಡನೆ ಸಾಗುವ ಹಾಡಾಗಿದೆ.' ಮೇಳ, ವಾದ್ಯಗಳೊಡನೆ ಜೊತೆಗೂಡಿ ಹಾಡಬಹುದು. ಇದು ಸಂಗೀತಕ್ಕೆ ಸಂಬಂಧಿಸಿದ ಒಂದು ಅಂಶವಾಗಿದೆ. ಸಂಗೀತಕ್ಕೂ ಸಾಂಗತ್ಯಕ್ಕೂ ಸಂಬಂಧವಿದೆ. ರಾಗ, ತಾಳ, ಭಾವದ ಜೊತೆಗೆ ಬರುವುದು ಸಾಂಗತ್ಯ. ರತ್ನಾಕರವರ್ಣಿ ತನ್ನ ಕಾವ್ಯದಲ್ಲಿ ಸಂಗೀತದ ರಾಗ, ತಾಳ, ಭಾವಗಳನ್ನು ಪದ್ಯದಲ್ಲಿ ತಂದಿದ್ದಾನೆ. ಸುಮಧುರ, ಸುಕೋಮಲ ಭಾವನೆಗಳನ್ನು ಹೇಳಲು ಸಾಂಗತ್ಯ ಹೇಳಿ ಮಾಡಿದ ಛಂದ ಪ್ರಕಾರವಾಗಿದೆ. ಭರತನ ಆಸ್ಥಾನದಲ್ಲಿ ಸಂಗೀತದ ಸಂದರ್ಭ ಬಂದಾಗ ವಾದ್ಯ ವಿಶೇಷಣಗಳು ಬರುತ್ತವೆ.

- ನೆರವಾಗು ಗಾನ ಕೇಳೇಳೆಂದು ಮಲಗಿದ್ದ
  ಸರಸತಿಯನು ಜಾಣೆ ತನ್ನ
  ಬೆರಳಿಂದ ಮಿಡಿವಂತೆ ಭಾರಿದಂಡಿಗೆಗೊರ್ವ
  ತರಳಾಕ್ಷಿ ಮಿಡಿದಳಂಗುಲಿಯ (ಉಪ್ಪರಿಗೆ ಸಂಧಿ)

- ಮುಖ ವೀಣೆ ವೇಣುವುಪಾಂಗ ಚೆನ್ನಿಗ ಶ್ರುತಿ
  ಸಖತನವಾಗಲೋಚೆಯೊಳು
  ಮುಖರಿಗಾಣರು ರಾಗ ರಸದೋರಿದರು ಸ್ವರ್ಗ
  ಸುಖವ ಕರೆದು ತೋರುವಂತೆ (ಪೂರ್ವನಾಟಕ ಸಂಧಿ)

- ಢಕ್ಕೆ ನಾಟ್ಯಾನಕೆ ಚಂಪೆ ಕಿಂಕಿಣಿ ಡೌಡೆ
  ಕುಕ್ಕುರು ತುಡುಮು ರಿಂಚೆಯೆವ

ತಕ್ಕಿಟ ತೋಕಿಟ ತೋಂಗಿ ತೋಹಂಗಿ ತೋ
ಧಿಕ್ಕಿಟಯೆನೆ ಕೇಳಿಸಿದರು. (ಪೂರ್ವನಾಟಕ ಸಂಧಿ)

- ಸಂಗೀತಕಾರರು ತಾಳಮೇಳವನು ಸು
  ಸಂಗಿಸಿಕೊಂಡು ಜೋಕೆಯೊಳು
  ಭೃಂಗಾಳಿಯಂತೆ ತಂಗಾಳಿಯಂತೊಡನೆ ಭಾ
  ಪಾಂಗ ಕೇಳಿಯ ಕೇಳಿಸಿದರು (ಪೂರ್ವನಾಟಕ ಸಂಧಿ)

ಹೀಗೆ ಕವಿಯು ಆಸ್ಥಾನ ಸಂಧಿ, ಉಪ್ಪರಿಗೆ ಸಂಧಿ ಮುಂತಾದವುಗಳಲ್ಲಿ ಸಂಗೀತಕ್ಕೆ ಸಂಬಂಧಿಸಿದಂತೆ ಅಲ್ಲದೆ ಅದರ ವಾದ್ಯಗಳಿಗೆ ಸಂಬಂಧಿಸಿದಂತೆಯೂ ಹೇಳಿದ್ದಾನೆ. ಕೆಲವು ಪದ್ಯದ ಸಾಲುಗಳಲ್ಲಿ ರತ್ನಾಕರನು ಸಾಂಗತ್ಯದ ರಹಸ್ಯವನ್ನು ಸ್ವಾರಸ್ಯಮಯವಾಗಿ ಹೇಳಿದ್ದಾನೆ. ಅಲ್ಲದೆ ಕೆಲವು ಸಂಗೀತ ವಾದ್ಯಗಳನ್ನು ಕಾವ್ಯದಲ್ಲಿ ತರುವುದರ ಮೂಲಕ ಅದನ್ನು ಓದಿದರೆ ಸ್ವತಃ ಅನುಭವಿಸಿದಂತೆ ಆಗುವ ಹಾಗೆ ಪದ್ಯದ ಸಾಲುಗಳನ್ನು ಕವಿ ಸೃಷ್ಟಿಸಿದ್ದಾನೆ.

- ನೋಟ ರಾಯನ ಮೇಲೆ ನೆನಹು ರಾಗದ ಮೇಲೆ
  ನೀಟ ತಂತಿಯ ಮೇಲೆ ಬೆರಳು
  ಚಾಟುಕಾಲೆಯರು ಛಾಂದಸಿಕೆಯ ಸೊಂಕಿ ಸ
  ಘಾಟಿಕೆಯಿಂದ ಹಾಡಿದರು. (ಉಪ್ಪರಿಗೆ ಸಂಧಿ)

- ಎಡಗೈಯೊಳಮರಿಸಿ ವೀಣೆಯನಾಂತು ಮೇ
  ಗಡೆ ಮೆಟ್ಟಿನೊಳು ಬೆರಳಾಡೆ
  ಒಡನೆ ಕೀಳ್ಗಡೆ ತಂತಿಯೊಳು ಬಲಗೈಬೆರ
  ಳೊಡರಿಸೆ ಪಾಡಿದಳೊಲಿದು. (ವೀಣಾ ಸಂಧಿ)

- ವೀಣೆಯ ನುಡಿಸುತ ಪಾಡಿದರಿವಳೀಗ
  ವೀಣೆಗಳೆರಡನೊಂದಾಗಿ
  ಹೂಣೆ ನುಡಿಸುತಿದ್ದಳೆಂಬೊಳಿಹುದು ಮಝು
  ರಾಣಿಯ ದನಿಯ ಚೆಲ್ವಿಕೆಯೆ. (ವೀಣಾ ಸಂಧಿ)

- ಸುಳಿನಾಭಿಯೊಳು ಪುಟ್ಟಿ ಮೆಲ್ಲೆದೆಯೊಳು ಬೆಳೆ
  ದೊಳುಗೊರಳೊಳು ಪ್ರಾಯವಡೆದು

ಎಳೆಯಳ ಬ್ರಹ್ಮರಂಧ್ರವನೇರಿ ಬಾಯ್ವೆರೆ
ಗಿಳಿದು ಮೋಹಿಸಿದುದಾಳಾಪ. (ವೀಣಾ ಸಂಧಿ)

ಹೀಗೆ ಕವಿಯು ಭರತನ ಹೆಂಡತಿ ಕುಸುಮಾಯಾಜಿ ನುಡಿಸಿದ ವೀಣಾ ವಾದ್ಯವನ್ನು ಸುಂದರವಾಗಿ, ಶೃಂಗಾರಭರಿತವಾಗಿ ಅನುಭವಿಸಿದ ಹಾಗೆ ಚಿತ್ರಿಸಿದ್ದಾನೆ. ಅಲ್ಲದೆ ಆಕೆಯು ತಂತಿಯನ್ನು ಮೀಟುವ ಬೆರಳಿನ ಬಗೆಯನ್ನು ಅವಳು ನುಡಿಸುವ ವೀಣೆಯ ಸ್ವರದ ಹಾಗೆ ಆಕೆಯ ಕೊರಳು ಸಹ ಆಕೆಗೆ ಸಹಕರಿಸಿದ ಬಗೆಯನ್ನು ಕವಿ ಬಹಳ ನೈಪುಣ್ಯತೆಯಿಂದ ಹೇಳಿದ್ದಾನೆ. ಈ ತರಹ ಕಲ್ಪನೆಯನ್ನು ತನ್ನ ಕಾವ್ಯದಲ್ಲಿ ಮೂಡಿಸಿದ್ದಾನೆ.

ಸಾಂಗತ್ಯದ ಲಕ್ಷಣವನ್ನು ಹೇಳುವಾಗ ವಿಷ್ಣುವಿನ ಸ್ಥಾನದಲ್ಲಿ ಕೆಲವೊಮ್ಮೆ ಬ್ರಹ್ಮಗಣವೂ ಬರಬಹುದು ಎಂದು ಹೇಳುತ್ತದೆ. ಈ ಸೂಕ್ಷ್ಮ ಮಾರ್ಪಾಟನ್ನು ಈ ಪದ್ಯದಲ್ಲಿ ನೋಡಬಹುದು. ಸಾಂಗತ್ಯದಲ್ಲಿ ಅನನ್ಯತೆ ತೋರಿದ್ದಾನೆ.

- ಅಯ್ಯಯ್ಯ ಚೆನ್ನಾದು ದೆನೆಕ ನ್ನಡಿಗರು
  ರಯ್ಯಮಂ ಚಿದಿಯೆನೆ ತೆಲುಗಾ
  ಅಯ್ಯಯ್ಯ ಎಂಚಪೊ ಲ್ರ್ಯಾಂಡೆಂದು ತುಳುವರು
  ಮೆಯ್ಯಬ್ಬಿ ಕೇಳಬೇ ಕಣ್ಣಾ (ಆಸ್ಥಾನ ಸಂಧಿ)

- ದೇವ ಬಿನ್ನಹ ಸಿಂಧುದೇವನು ಗಂಗಾ
  ದೇವನೆಂಬಿಬ್ಬರು ಜಿನನ
  ಭಾವನೆವಿಡಿದಿಹರೆಮ್ಮೆಲ್ಲರಿಗೆ ಪೂಜ್ಯ
  ಭಾವ ರಾಗಿಹರನವರತ. (ಸಿಂಧುದೇವಿಯಾಶೀರ್ವಾದ ಸಂಧಿ)

- ದೂರವಲ್ಲಾ ಹಂಸನೆಲ್ಲರ ಮೈಯ ಬೀ
  ಡಾರದೊಳಿರುತಿಹನವನ
  ಸಾರಿ ಮುಕ್ತಿಯನೆಯ್ದಲರಿಯದೆ ಜಗವೆಲ್ಲ
  ಬಾರದ ಭವ ಬರುತಿಹುದು. (ಬ್ರಾಹ್ಮಣನಾಮ ಸಂಧಿ)

- ಸೋಂಕಿಗೆ ಕರೆದು ತಾನಿಕ್ಕಿದರ್ಘ್ಯದ
  ಕಂಕಣಗಳ ಕೊಟ್ಟನವಗೆ
  ಅಂಕಿತಾಳಾಪದಿ ಬೀಳ್ಕೊಡೆ ಬಲಗೂಡಿ
  ಭೋಂಕನೆ ಹೋದನಾ ದೇವ. (ಕವಾಟವಿಸ್ಫೋಟನ ಸಂಧಿ)

ಹೀಗೆ ಕೆಲವೊಮ್ಮೆ ವಿಷ್ಣುಗಣಗಳ ಸ್ಥಾನದಲ್ಲಿ ಬ್ರಹ್ಮಗಣ ಪರ್ಯಾಯವಾಗಿ ಬರುವುದನ್ನು ನೋಡಬಹುದು. ಕೆಲವು ಸಲ ಪದ್ಯ ಪಾದಗಳಲ್ಲಿ ಗಣ ವ್ಯತ್ಯಾಸಗಳೂ ಕಂಡುಬರುತ್ತವೆ.

"ಗಣದ ಯೋಜನೆಯ ದೃಷ್ಟಿಯಿಂದ ಕನ್ನಡ ಛಂದದ ವೈಶಿಷ್ಟ್ಯವೆಂದರೆ ಯಾವುದೇ ಕನ್ನಡ ಬಂಧದಲ್ಲಿ ಸೇರಿದ ಗಣಗಳು ಲಯದ ಬೆಳಕಿನಲ್ಲಿ ಸಹಜವಾಗಿ ಸುಲಭವಾಗಿ ಗಮನಕ್ಕೆ ಬರುತ್ತವೆ. ಉದಾಹರಣೆಗೆ,

- ಅಂದುಗೆ ಗಳದನಿ ಕಟಿಸೂತ್ರ ಕಿಂಕಿಣಿ
  ವೃಂದಝುಂ ಝುಣ ಝುಲಿ ಕಿನಲು
  ಹಿಂಡುವ ರಿವಹಾಸೆಗಳಝುಂಕಿ ಸುತನಡೆ
  ತಂದಳು ರಾಮನಿದ್ದಡೆಗೆ (ಸನ್ಮಾನ ಸಂಧಿ)

ಇದಕ್ಕೆ ಕಾರಣವೆಂದರೆ ಯಾವುದೇ ಕನ್ನಡ ಮಟ್ಟಿನ ಗಣದ ಅಂತ್ಯದಲ್ಲಿ ಲಯವನ್ನು ಎತ್ತಿ ತೋರಿಸುವ ಸಹಜವಾದ ವಿರಾಮ ಗಮನಕ್ಕೆ ಬರುತ್ತದೆ" (ಡಿ.ಎಸ್. ಕರ್ಕಿ, ೧೯೫೫, ಪು.೫೫).

ಸಾಂಗತ್ಯವು ಭಾವಾಮೂಲ್ಯವಾದದ್ದು. ಸಾಂಗತ್ಯವು ಮೃದು ಸ್ವಭಾವವನ್ನು, ಶೃಂಗಾರ, ಮೃದುಹಾಸು, ಸುಕೋಮಲ ಸ್ವಭಾವ, ಪ್ರೀತಿ-ವಾತ್ಸಲ್ಯ, ಕರುಣೆ, ಶಾಂತಿ, ಸಂಯಮ ಹೀಗೆ ಸುಮಧುರ ಸುಕೋಮಲ ಭಾವವನ್ನು ಹೇಳಲು ಸಾಂಗತ್ಯವು ಇಂಥ ಭಾವನೆಗಳಿಗೆ ಹೇಳು ಮಾಡಿಸಿದ ಮಟ್ಟುಯಿದಾಗಿದೆ.

ಮೃದು ಸ್ವಭಾವವನ್ನು ಕಾವ್ಯದಲ್ಲಿ ನೋಡುವುದಾದರೆ

- ಅಂಗವಂಗವ ಸೋಂಕಿ ಮೃದು ಮೃದುವಾಗಿ ಸು
  ಖಾಂಗವಡೆದರೆಂದು ನುಡಿಯೆ
  ತಂಗಾಳಿ ಹೂದೋಟದೊಳಗೂಡಿತೆಂಬ ಬೆ
  ಡಂಗ ನುಡಿದ ಸುಮ್ಮನಿಹೆನು. (ವೀಣಾ ಸಂಧಿ)

ವೀರರಸ, ಭಯಂಕರ, ಕ್ರೌರ್ಯ ರಸಗಳಿಗೆ ಈ ಸಾಂಗತ್ಯವು ತಕ್ಕದ್ದಲ್ಲ. ಇದು ಏನಿದ್ದರೂ ಶೃಂಗಾರಪೂರ್ಣವಾದ ರಸಮಯ ಸನ್ನಿವೇಶವನ್ನು ವರ್ಣಿಸುವುದಕ್ಕೆ ಅತೀ ಸೂಕ್ತವಾಗಿದೆ. ಭರತೇಶ ವೈಭವವು ಈ ಎಲ್ಲ ಸುಂದರ ಭಾವನೆಗಳನ್ನು ಒಳಗೊಂಡ ಶೃಂಗಾರ ಭರಿತವಾದ ಒಂದು ವರ್ಣನೆಯ ಕಾವ್ಯವಾಗಿದೆ.

ಕವಿಯು ಭರತನನ್ನು ಇಲ್ಲವೇ ಆತನ ಹೆಂಡತಿಯರನ್ನು ವರ್ಣಿಸುವಾಗ ಅವರ ಅಪ್ಪುಗೆ ಆಲಿಂಗನವನ್ನು ಶೃಂಗಾರ ರಸವತ್ತಾಗಿ ಹೇಳಿದ್ದಾನೆ. ಎಲ್ಲಿಯೂ ಅವನ ಶೃಂಗಾರದ ವರ್ಣನೆ ಅಶ್ಲೀಲತೆಗೆ ಹೋಗಿಲ್ಲ.

- ಚಂದದಿ ನುಡಿವುತಿದ್ದದು ಗಿಳಿಯನು ಮಕ
  ರಂದಾಜಿ ಕೊಂಡು ಬಾರೆಂದು

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ತಂದು ಗಿಳಿಯ ಕೊಡುವಾಗ ನಾದುನಿಯನಾ
ನಂದದೊಳಮರ್ದಪ್ಪಿಕೊಂಡ. (ಸರಸ ಸಂಧಿ)

- ಅತ್ತಿತ್ತ ಮೈಯಾನೊಲೆದಳಾಕೆ ಮಿಸುಕದಂ
  ತೆತ್ತಿ ತಾನಮರ್ದಪ್ಪಿಕೊಂಡ
  ಮುತ್ತುಕೊಟ್ಟನು ಕೊರಳಿಗೆ ಕಂಠಮಾಲೆಯ
  ಸುತ್ತಿ ಮೆಚ್ಚಿದೆನೆಂದು ಬಿಟ್ಟ. (ಸರಸ ಸಂಧಿ)

- ಕೋಮಲಾಂಗನು ಹೇಮವರ್ಣನು ಜಗವೆ
  ಕಾಮಿಸತಕ್ಕ ಚೆನ್ನಿಗನು
  ಆಮೋದವುಕ್ಕುವ ಜವ್ವನಿಗನು ಸರ್ವ
  ಭೂಮೀಶರೊಡೆಯನಾ ಚಕ್ಕಿ (ಆಸ್ಥಾನ ಸಂಧಿ)

- ಉದಯಗಿರಿಯ ಮೇಲೆ ಮೆರೆವ ಭಾನುವಿಗೆ ಮ
  ತ್ತಿದಿರಾದ ಪ್ರತಿಸೂರ್ಯನಂತೆ
  ಪದುಳದುತ್ತಂಗ ಸಿಂಹಾಸನವೇರಿ ದೇ
  ಹದ ಕಾಂತಿ ಮೆರೆಯೆ ಮೆರೆದನು. (ಆಸ್ಥಾನ ಸಂಧಿ)

ಹೀಗೆ ರತ್ನಾಕರವರ್ಣಿಯ ಶೃಂಗಾರವನ್ನು ರಸದ ಘಳಿಗೆಗಳನ್ನು ಅಲ್ಲದೆ ಕೆಲವು ಕಡೆ ಉಪಮೆ ರೂಪಕಗಳನ್ನು ಬಳಸಿ ವರ್ಣಿಸುತ್ತಾ ಹೋಲಿಸುತ್ತಾ ಹೋಗುತ್ತಾನೆ. ಸನ್ನಿವೇಶ ಸಂಭಾಷಣೆಯಲ್ಲಿಯೂ ಸಹ ರಸಪೂರ್ಣವಾದ ಮಾತುಗಳನ್ನು ತಂದು ಸನ್ನಿವೇಶವನ್ನು ಸುಂದರವಾಗಿಸಿದ್ದಾನೆ. ಕವಿಗೆ ಶೃಂಗಾರ ಕವಿ ಹಂಸರಾಜ ಎಂಬ ಬಿರುದೇ ಇದೆ. ಅವನು ರಚಿಸಿದ (ಭೋಗವಿಜಯ) ಸಂಧಿಗಳು ಶೃಂಗಾರ ರಸದಿಂದಲೇ ಕೂಡಿವೆ. ಕವಿ ಚಿತ್ರಿಸಿದ ಒಂದೊಂದು ಚಿತ್ರಣವೂ ಸಹ ಸರಸ ಸಲ್ಲಾಪದಿಂದ ಕೂಡಿವೆ. ಇದನ್ನು ನಾವು ಓದುತ್ತಾ ಹೋದರೆ ಸ್ವತಃ ನಾವೇ ರಸಾನುಭೂತಿಯನ್ನು ಹೊಂದಿದ ಅನುಭವವಾಗುತ್ತದೆ. ಭರತನು ನಡೆಸಿದ ಶೃಂಗಾರಮಯ ಜೀವನವನ್ನು ಅವನ ವೈಭವವನ್ನು ನೆನೆದು ಪುಳುಕವುಂಟಾಗುತ್ತದೆ. ಭರತ ಮತ್ತು ಆತನ ರಾಣಿಯರ ನಡುವಿನ ಸನ್ನಿವೇಶವಾಗಲಿ, ಸಂಭಾಷಣೆಗಳಾಗಲೀ, ನಾಟ್ಯಂಗನೆಯ ನರ್ತನವಾಗಲಿ ಎಲ್ಲವೂ ನಯನ ಮನೋಹರವಾಗಿವೆ. ಒಟ್ಟಿನಲ್ಲಿ ಶೃಂಗಾರ ಚಿತ್ರಗಳನ್ನು ಚಿತ್ರಿಸುವಲ್ಲಿ ರತ್ನಾಕರವರ್ಣಿಗೆ ಸರಿಸಮನಾರು ಇಲ್ಲ ಎನಿಸುತ್ತದೆ. "ಇಂತಹ ನಿರ್ದಿಷ್ಟವೂ ಸುಪುಷ್ಟವೂ ಆದ ಶೃಂಗಾರ ಚಿತ್ರಗಳು ಕನ್ನಡ ಕಾವ್ಯ ಪ್ರಪಂಚದಲ್ಲಿ ಹೇಳಿಕೊಳ್ಳುವಷ್ಟು ಹೆಚ್ಚಾಗಿ ಇಲ್ಲ. ರತ್ನಾಕರನ ಕಲಾನುಭವದಲ್ಲಿ ಇವುಗಳು ತಂಡ ತಂಡವಾಗಿ ಕಂಡುಬರುತ್ತವೆ. ಬೇಲೂರಿನ ದೇವಾಲಯದಂತೆ ಕಲಾಮಯವಾಗಿರುವ ಈ ಶಬ್ದಚಿತ್ರಗಳನ್ನು

- ಮಾತಿನ ಪ್ರತಿಮೆಗಳನ್ನು ಪದರ ಪದರವಾಗಿ ಬಿಡಿಸಿ ನೋಡುವ ತಾಳ್ಮೆ ಬೇಕು ನೋಡಿ ಆನಂದಿಸುವ ಹೃದಯ ಬೇಕು" (ಸಂ.ತ.ಸು. ಶಾಮರಾಯ, ೧೯೮೬, ಪು.೫೭).

ಶೃಂಗಾರರಸದ ಚಿತ್ರಣದಂತೆ ಕವಿಯು ಶಾಂತಿ ರಸವನ್ನು ತರುವಲ್ಲಿ ಸಫಲನಾಗಿದ್ದಾನೆ.

- ಗಾನಮದ್ದಳೆ ತಾಳಲಯಕೆ ನರ್ತಿಪ ಮಂದ
  ಯಾನೆಗೆ ಶಿರದ ಕುಂಭದೊಳು
  ಧ್ಯಾನವಿಪ್ಪಂತೆ ರಾಜ್ಯದೊಳಿರ್ದು ಮುಕ್ತಿ ಸಂ
  ಧಾನದೊಳಗೆ ನಿನ್ನ ನೆನಹು. (ಕವಿವಾಕ್ಯ ಸಂಧಿ)

- ಭೋಗ ವಿಚಾರವು ಬೇಕು ನೃಪತಿಗಾತ್ಮ
  ಯೋಗ ವಿಚಾರವು ಬೇಕು
  ರಾಗರಸಿಕನಾಗಬೇಕು ಭಾವಿಸೆ ವೀತ
  ರಾಗರಸಿಕನಾಗಬೇಕು. (ಕವಿವಾಕ್ಯ ಸಂಧಿ)

- ಕೂಡಬೇಕು ಕೂಡುವಲ್ಲಿ ಪಾತ್ರವರಿಯಬೇಕು
  ನುಡಿಬೇಕು ಮೌನವೂ ಬೇಕು
  ಬಡವರಂತಿರಬೇಕು ಪ್ರಭುವಿನಂತಿರಬೇಕು
  ನಡೆಯಿದು ಜಾತಿ ಕ್ಷತ್ರಿಯರ (ಕವಿವಾಕ್ಯ ಸಂಧಿ)

- ಎಳೆಮಿಂಚಿನಂದದ ಬೊಂಬೆಯೋ ತಿಂಗಳ
  ತಿಳಿವೆಳಗಿನೊಳಾದ ರೂಪೋ
  ಪಳಕಿನ ಪುತ್ತಳಿಯೋ ಎನೆ ಕ್ರಮದಿಂದ
  ಹೊಳೆವುದೊಳಗೆ ತನ್ನ ರೂಪು (ಕವಿವಾಕ್ಯ ಸಂಧಿ)

ಗಂಡ-ಹೆಂಡತಿಯ ಮಧ್ಯೆ, ಭಾವ-ನಾದುನಿಯರ ಮಧ್ಯೆ ಸಂಭಾಷಣೆಯಲ್ಲಿ ಮೃದು ಹಾಸ್ಯವನ್ನು ತರುವಲ್ಲಿ ಕವಿ ಯಶಸ್ವಿಯಾಗಿದ್ದಾನೆ.

- ಅನುಕೂಲವಾದುದಾರೋಗಣೆಗಿನ್ನೆಮ್ಮ
  ಮನೆಗೇಳು ಭಾವಾಜಿಯೆಂದು
  ತನುಮಧ್ಯ ನುಡಿದಳದಕೆ ರಾಯ ನಗುತ ನಾ
  ದುನಿಯೊಳು ನುಡಿದನಿಂತೆಂದು. (ಸರಸ ಸಂಧಿ)

- ಇಂದಾನು ನಿನ್ನ ಮನೆಗೆ ಬಹುದುಚಿತವೆ
  ಒಂದರೆ ವರುಷದ ಮೇಲೆ
  ಬಂದು ನೀನೆನ್ನ ಕರೆದರಾನು ಬಹೆನು ಹೋ
  ಗೆಂದನು ನೃಪತಿ ನಾದುನಿಗೆ. (ಸರಸ ಸಂಧಿ)

- ಅಕ್ಕನ ನೋಡುವೆನೆಂದು ನಿನ್ನೆಯ ಬೀಡ
  ಹೊಕ್ಕರೆ ಫಲ ತೋರಿತೆನಗೆ
  ಚೆಕ್ಕನೆಮ್ಮೂರಿಗೆಯ್ದುವೆನಿನ್ನು ನಿನ್ನೂರ
  ದಿಕ್ಕ ನೋಡಿದರಾನು ಹೆಣ್ಣೆ. (ಸರಸ ಸಂಧಿ)

ಈ ರೀತಿಯಾಗಿ ಅವರ ನಡುವೆ ಮೃದು ಹಾಸ್ಯದ ಜೊತೆಗೆ ಮೃದುವಾದ ಮುನಿಸನ್ನು ಭರತ ನಾದಿನಿಗೆ ಮಾಡುವ ಕೀಟಲೆಯನ್ನು ನೋಡಬಹುದು. ಅಲ್ಲದೆ ಕವಿಯು ಕರುಣೆ ವಾತ್ಸಲ್ಯದ ಸಂದರ್ಭವನ್ನು ಮನಕಲಕುವ ರೀತಿಯಲ್ಲಿ ಚಿತ್ರಿಸಿದ್ದಾನೆ. ತಾಯಿ-ಮಗನ ಸಂವಾದದಲ್ಲಿ ಇದನ್ನು ಕಾಣಬಹುದು. ತಾನು ಇರುವ ಸ್ಥಳದಲ್ಲೇ ತನ್ನ ತಾಯಿ ಬರುವುದನ್ನು ಕಂಡ ಭರತನಿಗೆ ಮಾತೃ ವಾತ್ಸಲ್ಯ ತುಂಬಿ ಬರುತ್ತವೆ.

- ತೂಗುಮಂಚದೊಳೊರಗಿದ ತಾಯ ಭರತೇಶ
  ತೂಗಿದನಂದು ತೊಟ್ಟಿಲೊಳು
  ರಾಗದೊಳಿಟ್ಟಾಕೆ ತೂಗಿದ ಸಾಲವ
  ತೂಗಿ ತಿದ್ದುವನೊಯೆಂಬಂತೆ. (ಪಾರಣಾ ಸಂಧಿ)

ತನ್ನ ಕಾಣಲು ತನ್ನ ಅರಮನೆಗೆ ಬಂದ ತಾಯಿಯನ್ನು ತೂಗುಮಂಚದಲ್ಲಿ ಕೂಡಿಸಿ ತೂಗುತ್ತಾನೆ. ಭರತ-ಬಾಹುಬಲಿಯ ಯುದ್ಧ ಸನ್ನಿವೇಶ ಬಂದಾಗ ಭರತನು ತಮ್ಮನನ್ನು ಬರಿ ಮಾತಿನಿಂದಲೇ ಸೋಲಿಸಿದನು. ಯುದ್ಧ ಮಾಡಲು ಸಿದ್ಧನಿದ್ದ ಬಾಹುಬಲಿ ತನ್ನ ತಪ್ಪನ್ನು ಅರಿತು ಅಣ್ಣನಾದ ಭರತನು ಎಷ್ಟು ಬೇಡವೆಂದರೂ ಪ್ರಾಯಶ್ಚಿತ್ತಕ್ಕಾಗಿ ಸನ್ಯಾಸವನ್ನು ಸ್ವೀಕರಿಸಿ ನಿಂತಲ್ಲಿಂದಲೇ ಹೊರಟು ಹೋಗುವನು. ಇದರಿಂದ ಅವನ ಪರಿವಾರವೆಲ್ಲ ದುಃಖ ಸಾಗರದಲ್ಲಿ ಬೆಂದು ಹೋಯಿತು. ತಾಯಿ, ಹೆಂಡತಿಯಂದಿರು, ಮಕ್ಕಳು ಎಲ್ಲರೂ ದುಃಖಿತಪ್ತರಾದರು. ಯಾರಿಗೆ ಯಾರು ಸಮಾಧಾನ ಹೇಳದಂತಾದರು. ಎಲ್ಲರಿಗೂ ಭರತನೇ ಸಮಾಧಾನ ಮಾಡಬೇಕು. ಮಗನು ದೀಕ್ಷೆ ಕೈಗೊಂಡ ಸುದ್ದಿ ತಿಳಿದ ತಾಯಿ ಯಶಸ್ವತೀ ದೇವಿ ಮೂರ್ಛೆ ಹೋಗಿ ಮತ್ತೆ ಎಚ್ಚರದಲ್ಲಿ ಗೋಳಿಡುತ್ತಿದ್ದಳು.

- ಚಿಕ್ಕಣ್ಣ ದೀಕ್ಷೆಗೆಯ್ದಿದನೆ ಹಾ ಹಾ ನನ್ನ
  ಚಿಕ್ಕಾನೆ ಮದವೆದ್ದು ಹೋಯ್ತೆ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಹೊಕ್ಕಡನ್ನಗಟ್ಟಿ ತಡವರಿಲ್ಲದಾದರೆ
ಅಕ್ಕಟಯೆಂದಳಲಿದಳು. (ಚಿತ್ತಜನಿರ್ವೇಗ ಸಂಧಿ)

- ಕೇಳಲೊಡನೆ ಸುನಂದಾದೇವಿ ಮೂರ್ಛೆಯ
  ತಾಳಿದಳರಸಿಯರೆದೆಗೆ
  ಬಾಳ ಬೀಸಿದ ತೆರನಾಯ್ತು ಹಾಯೆಂದು ಮೂ
  ರ್ಛಾಲಂಬವಡೆದೊರಗಿದರು. (ಚಿತ್ತಜನಿರ್ವೇಗ ಸಂಧಿ)

- ಎಚ್ಚತ್ತು ಜನನಿ ಏನೇನು ಝುಂಝಾನಿಲ
  ಪಚ್ಚೆವಿಲ್ಲಣ್ಣನೇನಾದ
  ಹುಚ್ಚುಗೊಂಡಂತೆಮ್ಮ ಬಿಸುಟು ಹೋದನೆ ದೀಕ್ಷೆ
  ಮೆಚ್ಚಾಯ್ತೆ ಹೋಗೆಂದಳಳುತ. (ಚಿತ್ತಜನಿರ್ವೇಗ ಸಂಧಿ)

- ಕಾಣ್ಬೆಂನೆದೆಯ್ದಿದನಣ್ಣನ ದೀಕ್ಷೆಗೆ
  ಪೂಣ್ಬವಿರಕ್ತಿಯೆಂ ತಾಯ್ತೆ
  ಜಾಣ್ಬೆಡೆ ನುಡಿವನಲ್ಲರ ಸಣ್ಣ ಹೇಳೆಂದು
  ಗೋಣ್ಬಾಂತು ಕೇಳಿದಳಳುತ. (ಚಿತ್ತಜನಿರ್ವೇಗ ಸಂಧಿ)

ಬಾಹುಬಲಿಯ ಹೆಂಡತಿಯರೂ ಗೋಳಾಡುತ್ತಾ ರೋಧಿಸುತ್ತಿದ್ದ ಬಗೆ.

- ಮಕ್ಕಳ ನೆನೆಯದೆ ಪೆಂಡಿರ ನೋಡದೆ
  ಲೆಕ್ಕಕೆ ತಾರದೆ ನನ್ನ
  ಚಿಕ್ಕಪ್ರಾಯದೊಳಿಂತು ದೀಕ್ಷೆಗೆ ಲಂಘಿಸ
  ತಕ್ಕುದೆ ನಿನಗೆ ಕಂದರ್ಪ. (ಚಿತ್ತಜನಿರ್ವೇಗ ಸಂಧಿ)

- ಅಂಗನೆಯರ ಕೂಟ ಸಾಕಾಯ್ತೆ ನಿನಗೆ ಮು
  ಕ್ತ್ಯಂಗನೆಯಾಟ ಬೇಕಾಯ್ತು
  ಸಂಗರವೆಂಬೊಂದು ನೆವದೋರಿ ವಿಧಿ ನಿನ್ನ
  ಮುಂಗಡೆಗೊಯ್ದುದೆ ನೀರ. (ಚಿತ್ತಜನಿರ್ವೇಗ ಸಂಧಿ)

ನಲ್ಲ ಹಾಹಾ ನಮ್ಮ ಬಿಟ್ಟು ಹೋದ್ಯೆ ಕಬ್ಬು
ವಿಲ್ಲ ಹಾ ಹಾ ನಮ್ಮ ತೊರೆದ್ಯೆ
ಕೊಲ್ಲದೆ ಕೊಂದೆ ನೀನೆಮ್ಮನೆಂದ ಬಲೆಯ
ರೆಲ್ಲರು ಹಳವಳಿಸಿದರು. (ಚಿತ್ತಜನಿರ್ವೇಗ ಸಂಧಿ)

ಅವನ ಮಕ್ಕಳ ಅಳುವನ್ನು ನೋಡಿದರೆ ಮನ ಕರಗುತ್ತದೆ.

- ಸೊಸೆಯರ ಕಳುಹಿಸುವಾಗ ಸುಬಲರಾಜ
  ವೆಸರಿನ ಮೂರು ವರುಷದ
  ಹಸುಳೆ ಬಂದಯ್ಯನ ತೋರು ತೋರೆಂದು ಪೀ
  ಡಿಸಿತು ಮನ್ಮಥನ ಮಾತೆಯನು. (ಚಿತ್ತಜನಿರ್ವೇಗ ಸಂಧಿ)

- ಇದ್ದಾಗ ತೊಡೆಯ ಮೇಲಿಟ್ಟುಕೊಂಡಂಗಜ
  ಮುದ್ದಾಡುತಿಪ್ಪನಾ ಶಿಶುವ
  ಗುದ್ದುವುದಜ್ಜಿಯ ಬಿದ್ದುಳುವುದು ಕಾಡು
  ತಿದ್ದುದು ಪಿತನ ತೋರೆಂದು (ಚಿತ್ತಜನಿರ್ವೇಗ ಸಂಧಿ)

ಈ ಮೇಲಿನ ಎಲ್ಲ ಸನ್ನಿವೇಶವನ್ನು ನೋಡಿದರೆ ಕರುಣೆ ಜೊತೆಗೆ ದುಃಖ ಉಂಟಾಗುತ್ತದೆ. ಮನಕಲಕುವ ಸಂದರ್ಭಗಳು ಇದರಲ್ಲಿ ಬಂದಿವೆ. ತಾಯಿಯ ಗೋಳಾಟ, ಹೆಂಡತಿಯರ ಅಳಲು ಅಲ್ಲದೆ ಸಣ್ಣ ಮಗು ತಂದೆ ತೋರಿಸು ಎಂದು ಹಿಡಿದ ಹಠ ಈ ಎಲ್ಲ ಸಂದರ್ಭವನ್ನು ನೋಡಿದರೆ ಕರುಣಾ ರಸ ತುಂಬಿ ಬರುತ್ತದೆ. ಭರತನ ಸಂಸಾರ ದುಃಖ ಸಾಗರದಲ್ಲಿರುತ್ತದೆ. ಇದನ್ನು ಕಾವ್ಯದಲ್ಲಿ ಕವಿಯು ತುಂಬಾ ಅರ್ಥಗರ್ಭಿತವಾಗಿ ಸಂದರ್ಭಗಳನ್ನು ತಂದಿದ್ದಾನೆ.

ಹೀಗೆ ರತ್ನಾಕರನು ಮನಸ್ಸನ್ನು ಭಾವೋದ್ವೇಗಗೊಳಿಸುವ ಉಗ್ರಭಾವಗಳನ್ನು ಪದ್ಯದಲ್ಲಿ ತರದೇ ಶೃಂಗಾರ ಪ್ರಿಯವೆನಿಸಿದ ಭಾವಗಳನ್ನು ಹೆಚ್ಚಾನು ಹೆಚ್ಚಾಗಿ ಕಾವ್ಯದಲ್ಲಿ ತಂದಿದ್ದಾನೆ. ಈ ಎಲ್ಲಾ ಸುಕೋಮಲ ಭಾವನೆಗಳನ್ನು ನಿರೂಪಿಸಲು ಸಾಂಗತ್ಯದ ಬಂಧ ಹೇಳಿ ಮಾಡಿದ ಹಾಗಿದೆ. ಈ ಕಾವ್ಯದಲ್ಲಿ ಮೂಡಿಬಂದಿರುವ ಲೋಕಾನುಭವಗಳು, ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಬಗೆಬಗೆಯ ವರ್ಣನೆಗಳು, ನಾಟಕದಂತೆ ಕಂಡುಬರುವ ದೃಶ್ಯಗಳು, ಕವಿ ನಿರ್ಮಿಸಿದ ವ್ಯಕ್ತಿ ವೈಶಿಷ್ಟ್ಯದ ಚಿತ್ರಣಗಳು, ಅವನ ನಿರೂಪಣಾ ವಿಧಾನ, ಪಾತ್ರ-ಪಾತ್ರಗಳ ನಡುವಿನ ಸಂಭಾಷಣೆ, ಸಂವಾದ, ಸರಸ ಸಂವಾದ ಈ ಎಲ್ಲವೂ ಕಥೆಯನ್ನು ಆಕರ್ಷಿಸುತ್ತದೆ. "ಆಧ್ಯಾತ್ಮವನ್ನೇ ನಿಚಿತ ಪ್ರಯೋಜನವನ್ನಾಗಿಟ್ಟುಕೊಂಡೂ ಇಹಜೀವನ ಪ್ರೀತಿಯನ್ನು ಒಲಿಯುವ ಒಂದು ಅಪೂರ್ವ ಸಮರಸ ದೃಷ್ಟಿ, ಇಷ್ಟು ಪರಿಸ್ಫುಟವಾಗಿ ಬೇರಾವ ಸಾಂಗತ್ಯ ಕವಿಯ ಕೃತಿಯಲ್ಲಿಯೂ

ಪ್ರತಿಬಿಂಬಿಸಿಲ್ಲ. ಒಂದಿಬ್ಬರು ಪ್ರಸಿದ್ಧರನ್ನು ಬಿಟ್ಟರೆ ಉಳಿದವರಿಗೆ ಇಷ್ಟು ವಿಶಾಲ ಕಥಾ ಭಿತ್ತಿಯಾಗಲಿ ಘನವಾದ ರಚನೋದ್ದೇಶವಾಗಲಿ ದರ್ಶನ ಸಾಮರ್ಥ್ಯವಾಗಲಿ ಇಲ್ಲ. ಅವರ ಕೃತಿಗಳಲ್ಲಿ ಗುಣಾಂಶಗಳಿದ್ದೂ ವಸ್ತು, ಉದ್ದೇಶ, ವ್ಯಾಪ್ತಿ, ಛಂದಸ್ಸು, ಶೈಲಿ, ಕಾವ್ಯತ್ವ, ಕೃತಿಗಾತ್ರ ಮೊದಲಾದ ಹಲವು ದೃಷ್ಟಿಗಳಿಂದ ಅವು ರತ್ನಾಕರನ ಕೃತಿಯಿದಿರು ಕುಬ್ಜವಾಗಿ ಕಾಂತಿಹೀನವಾಗಿ ನಿಲ್ಲುತ್ತವೆ" (ಟಿ.ವಿ. ವೆಂಕಟಾಚಲಶಾಸ್ತ್ರಿ, ೧೯೯೯, ಪು. ೨೫೪).

'ಸಾಂಗತ್ಯ'ವೆಂಬ ಒಂದು ಚಿಕ್ಕ ಬಂಧದಲ್ಲಿ ಕವಿ ಬೃಹತ್ ಕಾವ್ಯವನ್ನು ಬರೆದು ಉನ್ನತ ಶಿಖರಕ್ಕೆ ಏರಿದ್ದಾನೆ. ಅದರ ಬೆಳವಣಿಗೆಗೆ ಪ್ರಮುಖ ಕಾರಣವಾಗಿದ್ದಾನೆ. ಪದ್ಯದಲ್ಲಿ ವರ್ಣನೆಗಳು ಹೇರಳವಾಗಿ ಬಂದರು ಅವು ಸ್ವಯಂಪೂರ್ಣವಾಗಿದೆ. ಇಲ್ಲಿ ಬರುವ ಪ್ರತಿ ಪದ್ಯಗಳು ಕವಿಯ ಲೋಕಾನುಭವ, ಕವಿಯಲ್ಲಿರುವ ಆಧ್ಯಾತ್ಮಿಕತೆಯಲ್ಲಿ ಇರುವ ಶ್ರದ್ಧೆ, ಕಲಾಪೂಜ್ಯತೆ ತಿಳಿಯುತ್ತದೆ. ಕವಿಯ ಮನೋಧರ್ಮವು ರಾಗ ರಸಿಕತೆಯಿಂದ ಸಹಜ ಸುಂದರವಾಗಿದೆ.

ಮಂಗರಸ, ನಂಜುಂಡಕವಿ, ಕನಕದಾಸ, ರತ್ನಾಕರ ಈ ನಾಲ್ಕು ಕವಿಗಳು ಹೆಚ್ಚಾಗಿ ಸಾಂಗತ್ಯವನ್ನು ಬಳಸಿದವರು. ಇವರಲ್ಲಿ ಅಲ್ಪಸ್ವಲ್ಪ ಭೇದ ಕಂಡುಬರುತ್ತದೆ. ಆದರೆ ಸಾಂಗತ್ಯ ಕವಿಗಳಲ್ಲಿ ವಿಶೇಷವಾಗಿ ಆಕರ್ಷಿತವಾಗುವವನು ರತ್ನಾಕರ. ಅವನು ಬಳಸಿದ ಭಾಷೆಯಾಗಲಿ, ಛಂದಸ್ಸು, ದೇಶಿ ಸಹಜತೆಯ ಶೈಲಿ ಎಲ್ಲವೂ ಸುಲಭ ಸುಂದರವಾಗಿದೆ. ಕವಿಯ ಕವಿತ್ವ ಅದ್ಭುತವಾದದ್ದು ಕವಿಯ ವೈಶಿಷ್ಟ್ಯತೆ ಎನ್ನಬಹುದು.

"ರತ್ನಾಕರನ ಶೈಲಿ-ಛಂದಸ್ಸುಗಳ ಅದ್ಭುತವಾದ ಸಂಪತ್ತಿಯನ್ನೂ ಸಹಯೋಗವನ್ನು ಎಷ್ಟು ವರ್ಣಿಸಿದರೂ ಸಾಲದು. ಜಾನಪದವಾದ ಸಾಂಗತ್ಯ ಧಾಟಿ ಮತ್ತು ಅಚ್ಚಕನ್ನಡ ದೇಸಿ ಅವನ ಪ್ರತಿಭೆಯ ಪರುಷದಿಂದ ಹೊಳೆಹೊಳೆಯುವ ಹೊನ್ನಾಗಿವೆ. ಅವನ ಬರವಣಿಗೆಯ ಓಘದಲ್ಲಿ ಸರಸ್ವತಿಯ ಪ್ರಸನ್ನತೆಯಿದೆ, ನಿರ್ಮಲತೆಯಿದೆ. ದರ್ಶನದ ಉನ್ನತಿ, ವ್ಯಕ್ತಿಯ ಉದಾತ್ತತೆ ಇವನ್ನು ಚಿತ್ರಿಸುವ ಭಾಷೆ ಮತ್ತು ನುಡಿಯುವ ಛಂದ ಎಷ್ಟು ಸರಳವೋ ಅಷ್ಟೇ ಭವ್ಯವಾಗಿದೆ. ದೇಸಿಯನ್ನು ಮಾರ್ಗದ ಮಟ್ಟಕ್ಕೆ ಒಯ್ಯುವ ಸಾಹಸ ಬಹುಮಟ್ಟಿಗೆ ಸಫಲವಾಗಿದೆ" ಎಂಬ ವಿದ್ವಾಂಸರ ಅಭಿಪ್ರಾಯ ಸೂಕ್ತವಾದುದು. (ಸಂ. ವಿ.ಸೀತಾರಾಮಯ್ಯ, ೧೯೮೪, ಪು.೧೭೮-೧೭೯).

ಪ್ರಾಚೀನವಾದ ಜೈನ ಪುರಾಣದ ಕಥಾವಸ್ತುವನ್ನು ತೆಗೆದುಕೊಂಡು ತನ್ನದೇ ಆದ ಸ್ವತಂತ್ರ್ಯ ದೃಷ್ಟಿಯಲ್ಲಿ ಮುಖ್ಯ ಪಾತ್ರದಲ್ಲಿ ಬದಲಾವಣೆಯನ್ನು ತಂದು ಭರತನ ಜೀವನವನ್ನು ಶ್ರೇಷ್ಠವಾಗಿಸಿದ್ದಾನೆ. ಭರತನ ವೈಭವವನ್ನು ವರ್ಣರಂಜಿತವಾಗಿ ವರ್ಣಿಸಲು ಸಾಂಗತ್ಯವನ್ನು ಬಳಸಿ ಅವನ ವೈಭವದ ಜೊತೆಗೆ ಸಾಂಗತ್ಯವನ್ನು ವೈಭವೀಕರಿಸಿದ್ದಾನೆ. ಒಂದು ಚಿಕ್ಕದಾದ ದೇಸಿ ಮಟ್ಟನಿಂದ ಒಂದು ಮಹಾಗ್ರಂಥವನ್ನು ಬರೆದು ಪ್ರಾಚೀನ ಕವಿಗಳಾದ ಪಂಪ, ರನ್ನರಿಗೆ ಸಮನಾಗಿ ನಿಂತಿದ್ದಾನೆ. ರತ್ನಾಕರವರ್ಣಿ ಅವನು ಬಳಸಿದ ಶೈಲಿಯಲ್ಲಾಗಲಿ, ಛಂದಸ್ಸುಗಳಲ್ಲಾಗಲಿ ಇತರ ಸಾಂಗತ್ಯ ಕವಿಗಳು ಅವನ ಸರಿಸಾಟಿಯಾಗಿ ಯಾರೂ ನಿಲ್ಲಲಾಗುವುದಿಲ್ಲ. ಇದೇ ರತ್ನಾಕರನಿಗೆ ಮಹಾಕವಿ ಪಟ್ಟವನ್ನು ಕೊಟ್ಟಿದೆ. "ರತ್ನಾಕರನ ಕಾವ್ಯ ಕನ್ನಡದ

ಮಕ್ಕಳ ಭಾವದ ಹಸಿವನ್ನು ತೀರಿಸಬಲ್ಲದು. ನಾವು ಅವನ ಕಾವ್ಯದ ಕಡೆಗೆ ಹೆಚ್ಚು ಹೆಚ್ಚಾಗಿ ತಿರುಗಬೇಕು. ಅವನ ಭಾವನೆಯ ಸಂಪತ್ತು ಅಪಾರವಾದದ್ದು ಎಂದು ಮಾಸ್ತಿ ವೆಂಕಟೇಶ ಅಯ್ಯಂಗಾರ ಹೇಳಿರುವ ಮಾತು ಒಪ್ಪತಕ್ಕದ್ದು" (ಟಿ.ವಿ. ವೆಂಕಟಾಚಲಶಾಸ್ತ್ರಿ, ೧೯೯೯, ಪು.೨೬೪).

ನಡುಗನ್ನಡ ಸಾಹಿತ್ಯದ ಕಾಲಘಟ್ಟದಲ್ಲಿ ಪ್ರಾಶಸ್ತ್ಯ ಸಿಕ್ಕ ಈ ಅಂಶ ಛಂದಸ್ಸಾದ ಸಾಂಗತ್ಯದಿಂದ ಮುಂದೆ ಅಂಶ ಛಂದಸ್ಸಿನಲ್ಲಿ ಅನೇಕ ಕೃತಿಗಳು ಬಂದವು. ಮತ್ತೆ ಸ್ವಲ್ಪ ಕಾಲ ಕ್ಷೀಣಿಸಿದ್ದ ಈ ಮಟ್ಟು ಮುಂದೆ ಬಂದ ಹೊಸಗನ್ನಡದ ಸಂದರ್ಭದಲ್ಲಿ ಈ ಅಂಶ ಛಂದಸ್ಸುಗಳು ಆಕರ್ಷಕ ಬಿಂದುಗಳಾದವು. ಜನಪದ ಸಾಹಿತ್ಯವಾದ ಸಾಂಗತ್ಯದ ಸವಿಸೊಗಸನ್ನುಂಡ ಹೊಸ ತಲೆಮಾರಿನ ಕವಿಗಳು ಈ ಅಂಶಬಂಧವನ್ನು ಬಳಸಿ ಅವುಗಳಿಗೂ ಮಹತ್ವವನ್ನು ಕೊಟ್ಟರು. ಇವುಗಳ ಜೊತೆಗೆ ಹಲವು ಹೊಸಬಂಧಗಳೂ ರೂಪಗೊಂಡವು.

ಆಧುನಿಕ ಕವಿಗಳ ಕವನಗಳಲ್ಲಿ ಛಂದಸ್ಸಿನ ಅಂಶಗಳು ಇಲ್ಲವೇ ಇಲ್ಲ ಅದೇನಿದ್ದರೂ ಹಿಂದಿನ ಕವಿಗಳ ಕೃತಿಗಳಲ್ಲಿ ಮಾತ್ರ ಮೂಡಿಬಂದಿದೆ ಎಂದು ಹೇಳುವಂತಿಲ್ಲ. ಆಧುನಿಕ ಕವಿಗಳ ಕವನಗಳನ್ನು ಅವಲೋಕಿಸಿದರೆ ಅಲ್ಲಿ ಹಲವಾರು ಬಗೆಯ ಛಂದೋಮಟ್ಟುಗಳು ಮೂಡಿಬಂದಿವೆ.

ಜಾನಪದ ಸಾಹಿತ್ಯದಲ್ಲೂ ಈ ಛಂದ ಪ್ರಕಾರಗಳು ಬಳಕೆಯಾಗಿವೆ. ಹಳ್ಳಿಯ ಜಾನಪದ ಕವಿಗಳು ಹಾಡುವ ಹಾಡು, ಲಾವಣಿಗಳು, ಕುಟ್ಟುವ ಬೀಸುವ ಪದಗಳಲ್ಲಿ ಅವರಿಗೆ ತಿಳಿಯದ ಹಾಗೆ ಎಷ್ಟೋ ಛಂದಸ್ಸಿನ ಅಂಶಗಳು ಬಳಕೆಯಾಗಿವೆ. ಅದರಲ್ಲೂ ಹಳ್ಳಿಗರು ಹೆಚ್ಚಾಗಿ ಸಾಂಗತ್ಯದಲ್ಲಿ ಹಾಡುಗಳನ್ನು ಹೇಳಿದ್ದಾರೆ. ಇದು ಹೆಣ್ಣುಮಕ್ಕಳ ಹಾಡುಗಳಲ್ಲಿ ಹೆಚ್ಚಾಗಿ ಕಾಣಿಸುತ್ತದೆ.

ಆಧುನಿಕ ಕವಿಗಳು ಸಾಂಗತ್ಯದ ಲಕ್ಷಣಗಳಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡು ಅದನ್ನು ಬಳಸಿದ್ದನ್ನು ಕಾಣುತ್ತೇವೆ. ಎಸ್.ಬಿ. ಪರಮಶಿವಭಟ್ಟರು 'ಇಂದ್ರಛಾಪ' ಎಂಬ ಕವನ ಸಂಕಲನವನ್ನು ಸಾಂಗತ್ಯದಲ್ಲಿ ರಚಿಸಿದ್ದಾರೆ. ಸಾಂಗತ್ಯ, ಛಂದಸ್ಸು, ಹಳಗನ್ನಡಕ್ಕೆ ಮಾತ್ರ ಸೀಮಿತವಾಗಿಲ್ಲ. ಅದರ ಲಯ ಕನ್ನಡ ಜಾಯಮಾನಕ್ಕೆ ಒಗ್ಗುವುದರಿಂದ ಆಧುನಿಕ ಕವಿಗಳಾದ ಬೇಂದ್ರೆ, ಕೆ.ಎಸ್. ನರಸಿಂಹಸ್ವಾಮಿ, ಶಂಕರನಾರಾಯಣರಾವ್ ಹೀಗೆ ಇನ್ನು ಮುಂತಾದವರು ಅದನ್ನು ಧಾರಾಳವಾಗಿ ಬಳಸಿದ್ದಾರೆ.

*****

ಅಧ್ಯಾಯ ೪

ಭರತೇಶವೈಭವ : ಶೈಲಿನಿರೂಪಣೆಯ ದನಿ

ಅಧ್ಯಾಯ ೪

ಭರತೇಶ ವೈಭವ : ಶೈಲಿನಿರೂಪಣೆಯ ದನಿ

'ಶೈಲಿ' ಇಂಗ್ಲೀಷಿನ Style ಇದು ಲ್ಯಾಟಿನ್ ಭಾಷೆಯ 'ಸ್ಟೈಲಸ್' ಎಂಬ ಪದದಿಂದ ಬಂದಿದೆ. ಪ್ರಾಚೀನ ರೋಮನ್ನರು ಜೇನುಮೇಣದ ಹಲಗೆಗಳ ಮೇಲೆ ಬರೆಯುವುದಕ್ಕೆ ಉಪಯೋಗಿಸುತ್ತಿದ್ದ ಉಪಕರಣಕ್ಕೆ 'ಸ್ಟೈಲಸ್' ಎಂಬ ಹೆಸರು. ಇದೇ ಮುಂದೆ ಶೈಲಿ, Style ಎಂಬ ರೂಪವನ್ನು ಪಡೆದಿದೆ. ಈ ಶೈಲಿ ಪದ ತನ್ನ ಮೂಲಾರ್ಥಕ್ಕಿಂತ ಭಿನ್ನವಾದ ವಿಶಾಲವ್ಯಾಪ್ತಿಯನ್ನು ಹೊಂದಿದೆ. ಮುಖ್ಯವಾಗಿ ಭಾಷೆಯನ್ನು ಬಳಸಿಕೊಳ್ಳುವ ಕಲೆಯಲ್ಲಿ, ಮನುಷ್ಯನ ದಿನನಿತ್ಯದ ವ್ಯವಹಾರದಲ್ಲಿ ಮನೆಯನ್ನು ಕಟ್ಟುವುದು, ಅಲಂಕರಿಸುವುದು ಮತ್ತು ಮನುಷ್ಯನು ಅವನದೇ ಆದ ವೈಯಕ್ತಿಕ ಶೈಲಿಯನ್ನು ರೂಢಿಸಿಕೊಂಡಿರುತ್ತಾನೆ. ಅದು ಅವನ ಮಾತುಗಾರಿಕೆಯಾಗಿರಬಹುದು, ಉಡುಗೆ-ತೊಡುಗೆ, ಬರವಣಿಗೆ, ನೋಟ, ನಡಿಗೆ ಹೀಗೆ ಪ್ರತಿ ಮನುಷ್ಯನು (ಹೆಣ್ಣು ಆಗಿರಬಹುದು, ಗಂಡು ಆಗಿರಬಹುದು) ಅವರದೇ ಆದ Styleನ್ನು ಹೊಂದಿರುತ್ತಾರೆ. ಶೈಲಿಯೆಂಬುದನ್ನು ಸಾಮೂಹಿಕವಾಗಿ ಬಳಸುವುದು ಕಡಿಮೆ ಹೆಚ್ಚಾಗಿ ವೈಯಕ್ತಿಕವಾಗಿ ಶೈಲಿಯನ್ನು ಗುರುತಿಸುತ್ತೇವೆ.

ಮುಖ್ಯವಾಗಿ ಶೈಲಿಯನ್ನು ಭಾಷೆಗೆ ಬಳಸಿಕೊಳ್ಳುವ ಕಲೆಯಲ್ಲಿ ನೋಡಿದರೆ ಪ್ರತಿಯೊಬ್ಬ ಕವಿಯೂ ತನ್ನದೇ ಆದ ಶೈಲಿಯನ್ನು ರೂಪಿಸಿಕೊಂಡಿರುತ್ತಾನೆ. ಆಯಾ ಕವಿಗಳು ಬಳಸುವ ಭಾಷಿಕ ವೈಶಿಷ್ಟ್ಯದ ಅನ್ವಯ, ನಾವು ಆಯಾ ಕವಿಗಳ ಶೈಲಿಯನ್ನು ಗುರುತಿಸಬಹುದು. ಕವಿಯು ಗ್ರಹಿಸಿದ್ದನ್ನು, ಅನುಭವಿಸಿದ ಭಾವನೆಗಳನ್ನು ಭಾಷೆ (ಬರವಣಿಗೆ)ಯ ಮೂಲಕ ಅಭಿವ್ಯಕ್ತಪಡಿಸುತ್ತಾನೆ. ಕವಿಯ ಶೈಲಿ ಅವನ ಮನೋಧರ್ಮವನ್ನು ಹೇಳುತ್ತದೆ. ಕವಿಯ ಮನಸ್ಸಿನಲ್ಲಿ ಒಂದು ವಿಷಯ ಹುದುಗಿರುತ್ತದೆ. ಆ ವಿಷಯವನ್ನು ವ್ಯಕ್ತಪಡಿಸಲು ಅವರಿಗೆ ಒಂದು ಸಾಧನ (ಸಾಹಿತ್ಯ ಪ್ರಕಾರಗಳ)ಗಳು ಅವಶ್ಯಕವಾಗಿ ಬೇಕು. ಅದು ಕಥೆ, ಕಾವ್ಯ, ಕಾದಂಬರಿ, ನಾಟಕಗಳಿರಬಹುದು. ಇದರಿಂದ ಅವನು ತನ್ನ ಅನುಭವವನ್ನು ಅಭಿವ್ಯಕ್ತಪಡಿಸುತ್ತಾನೆ. ಕವಿಯ ಶೈಲಿಯೆಂದರೆ ಕವಿಯ ಭಾವ, ಭಾವನೆಗಳು, ಅನುಭವಗಳು ಇವುಗಳನ್ನು ಭಾಷೆಯೆಂಬ ಮಾನದಂಡದ ಮೂಲಕ ಅಭಿವ್ಯಕ್ತಪಡಿಸುವುದಾಗಿದೆ. ಒಂದೇ ಕಾಲಘಟ್ಟದಲ್ಲಿದ್ದ ಸಮಕಾಲೀನ ಕವಿಗಳಲ್ಲಿ ಒಬ್ಬನಂತೆ ಇನ್ನೊಬ್ಬ ಕವಿಯ ಶೈಲಿ ಇರುವುದಿಲ್ಲ. ಕವಿ ಹೇಗಿರುತ್ತಾನೋ ಕವಿಯ ಶೈಲಿ ಹಾಗೆ ಇರುತ್ತದೆ.

[illegible]

[illegible]

[illegible]

[illegible]

'ಶೈಲಿ'ಯನ್ನು ಕುರಿತು ಅನೇಕ ವಿದ್ವಾಂಸರ ಅಭಿಪ್ರಾಯವನ್ನು ನೋಡುವುದಾದರೆ :

೧. ಮ್ಯಾಥ್ಯು ಆರ್ನಲ್ಡನ ಪ್ರಕಾರ - "ತಾನು ಹೇಳಬೇಕಾದುದನ್ನು ಕವಿ ಒಂದು ದೈವಿಕವಾದ ಉದ್ರೇಕಾವಸ್ಥೆಯಲ್ಲಿ ಮೇಲ್ಮೆಗೊಳಿಸಿ ರೂಪಾಂತರಪಡಿಸುತ್ತಾನೆ. ತನ್ಮೂಲಕ ಅದಕ್ಕೆ ಗಾಂಭೀರ್ಯವೂ ವೈಶಿಷ್ಟ್ಯವೂ ಕೂಡಿಕೊಳ್ಳುತ್ತದೆ. ಇದೇ ನನ್ನ ಅರ್ಥದಲ್ಲಿ ಶೈಲಿ."

೨. ಜೆ.ಎ. ಸಿಮನ್ಸ್ ಪ್ರಕಾರ - "ಆಲೋಚನೆಗೆ ಸಾಕಷ್ಟು ಸಮರ್ಪಕ ಭಾಷೆಯನ್ನು ತೊಡಿಸುವ ಸಮಾರಂಭವೇ ಶೈಲಿ."

೩. ಬಫನ್ನನ ಪ್ರಕಾರ - "ಕವಿಯೇ ಶೈಲಿ."

೪. ಗಿಬ್ಬನ್‌ನ ಪ್ರಕಾರ - "ಕವಿಯ ಶೈಲಿ ಅವನ ಚಿತ್ತವೃತ್ತಿಯ ಪ್ರತಿಬಿಂಬವಾಗಿರಬೇಕು."

೫. ಬೆನ್ ಜಾನ್ಸನ್ ಪ್ರಕಾರ - "ಮನುಜನನ್ನು ಬಹಳ ಚೆನ್ನಾಗಿ ತೆರೆದು ತೋರಿಸುವುದು ಅವನ ನುಡಿ. ನೀನು ಮಾತಾಡಿದರೆ ಸಾಕು, ನಿನ್ನನ್ನು ನಾನು ಅರಿಯಬಲ್ಲೆ. ಯಾವ ಕನ್ನಡಿಯೂ ಮನುಷ್ಯನ ಸ್ವರೂಪವನ್ನು ಅವನ ಮಾತುಗಾರಿಕೆಯಂತೆ ಸ್ಪಷ್ಟಪಡಿಸಲಾರದು. ಅಷ್ಟೇಕೆ, ಅದೇ ಅವನದೆಂದು ಹೇಳುವವರಿದ್ದಾರೆ."

೬. ನ್ಯೂಮನ್ನನ ಅಭಿಪ್ರಾಯ - ಕವಿಯ ಭಾಷೆ "ಅವನ ತೀಕ್ಷ್ಣ ವ್ಯಕ್ತಿತ್ವದ ವಿಶ್ವಾಸಾರ್ಹ ಸೂಚನೆ. ಅವನೊಳಗಣ ಆಲೋಚನಾ ಪ್ರಪಂಚವನ್ನು ಕೇವಲ ನೆರಳಿನಂತೆ ಅದು ಅನುಸರಿಸಿಕೊಂಡಿದೆ. ಆದ್ದರಿಂದ ನೈಜಶಕ್ತಿಯನ್ನು ದಾನವಾಗಿ ಪಡೆದಿರುವ ಕವಿಯ ಶೈಲಿ ಅವನೊಬ್ಬನದೇ ಅಲ್ಲದೆ ಇತರರಿಗೂ ಸೇರಿದೆಯೆಂದು ಉಸಿರುವುದೂ ಒಂದೆ, ಒಬ್ಬನ ಛಾಯೆ ಇನ್ನೊಬ್ಬನದೆಂದು ಹೇಳುವುದೂ ಒಂದೆ. ಕವಿಯನ್ನು ಛಾಯೆಯಂತೆ ಅವನ ಶೈಲಿ ಹಿಂಬಾಲಿಸುತ್ತದೆ. ಅವನ ಭಾವ ಭಾವನೆಗಳು ಅವನ ಸೊತ್ತು. ಅವನ ಶೈಲಿಯೂ ಅವನ ಸೊತ್ತು."

೭. ಆರ್ನಲ್ಡ್ ಬೆನಟ್‌ನ ಪ್ರಕಾರ - "ವಸ್ತುವಿನಿಂದ ಬೇರೆಯಾಗಿ ಶೈಲಿಯನ್ನು ಬರೆಯಲಾಗುವುದಿಲ್ಲ. ಒಬ್ಬ ಕವಿ ಒಂದು ಅಭಿಪ್ರಾಯವನ್ನು ಕಲ್ಪಿಸಿಕೊಳ್ಳುವಾಗ ಪದಗಳ ರೂಪದಲ್ಲಿಯೇ ಅದನ್ನು ಕಲ್ಪಿಸಿಕೊಳ್ಳುತ್ತಾನೆ. ಆ ಪದಗಳ ಸರಣಿಯೇ ಅವನ ಶೈಲಿ."

೮. ಕಾರ್ಲೈಲನ ಅಭಿಪ್ರಾಯದಂತೆ - "ಶೈಲಿ ಲೇಖಕನ ಅಂಗಿಯಲ್ಲ, ತೊಗಲು." ಈ ಅಭಿಪ್ರಾಯವನ್ನು ಫ್ರೂಡ್‌ನು ಹೀಗೆ ಹೇಳುತ್ತಾನೆ "ಅಂಗಿಯನ್ನು ಆಚೆಗೆ ತೆಗೆದಿಡಬಹುದು, ಶೈಲಿ ಹಾಗಲ್ಲ. ಚರ್ಮ ಹೇಗೆ ಜೀವಿಗೆ ಅವರ್ಜನೀಯವಾದ ಒಂದು ಭಾಗವೋ ಹಾಗೆ ಶೈಲಿ."

೯. ಎಸ್.ವಿ. ರಂಗಣ್ಣನವರ ಪ್ರಕಾರ - "ಕವಿಯಂತೆ ಶೈಲಿ, ಶೈಲಿಯಿಂದ ಕವಿ. ಒಂದೇ ಜನಪದ ದವರಾದರೂ ಸಮಕಾಲೀನರಾದರೂ ಒಬ್ಬನಂತೆ ಇನ್ನೊಬ್ಬನಲ್ಲ."

೧೦. ಎಸ್.ಎಸ್. ಅಂಗಡಿಯವರ ಪ್ರಕಾರ - "ಭಾಷೆಯ ಮೂಲಕ ಅಭಿವ್ಯಕ್ತಿಯನ್ನು ಕಾಣುವುದು, ಶೈಲಿಯ ಮುಖ್ಯ ತುಡಿತವೆಂದರೆ ಅನುಭವವನ್ನು ಹರಳುಗಟ್ಟಿಸುವ ಪ್ರಯತ್ನ."

೧೧. ಕೆ.ವಿ. ನಾರಾಯಣರವರ ಪ್ರಕಾರ - "ಭಾಷಿಕನೊಬ್ಬ ಸಾಮುದಾಯಿಕವಾದ ಒತ್ತಡಗಳಿಲ್ಲದಿದ್ದರೂ, ತನ್ನ ಭಾಷಾಬಳಕೆಯಲ್ಲಿ ಮಾಡಿಕೊಳ್ಳುವ ನಿರ್ದಿಷ್ಟವಾದ, ನಿಯಮಿತವಾದ ಪಲ್ಲಟಗಳನ್ನು ಶೈಲಿ ಎಂದು ಗುರುತಿಸಲಾಗುತ್ತದೆ." ಹಾಗೆ ಇವರು ದೇಸೀ ಶೈಲಿಯ ಲಕ್ಷಣವನ್ನು ಹೀಗೆ ಹೇಳಿದ್ದಾರೆ : ಪೂರ್ವನಿರ್ಧಾರಿತ ನಿಯಮಗಳಿಲ್ಲದಿರುವುದು, ನಿಶ್ಚಿತ ಲಕ್ಷಣಗಳಿಗೆ ಹೊರತಾಗಿರುವುದು, ಧ್ಯಾನ ಪೂರ್ವ ಸ್ಥಿತಿಯಲ್ಲಿರುವುದು 'ದೇಸಿ' ಶೈಲಿಯ ಲಕ್ಷಣಗಳಲ್ಲಿ ಕೆಲವು 'ವಿವೃತತೆ' ಅದರ ಗುಣ. ಹಾಗೆಂದರೆ ಇದು ಇದ್ದುದನ್ನು ಯಥಾವತ್ತಾಗಿ ಹೇಳುವ ವಾರ್ತೆಯಲ್ಲ. ವರ್ಣಿತ ಸಂದರ್ಭದ ಚಲನಶೀಲತೆಯನ್ನು ಸ್ಥಗಿತಗೊಳಿಸದೆ ಈ ಶೈಲಿ ಹಿಡಿದಿಡುತ್ತದೆ. ಇದಕ್ಕಾಗಿ ಮಾತಿನ ಕಾಕುಗಳನ್ನು ಆಂಗಿಕ ಭಾವ ಸಾಧ್ಯತೆಗಳನ್ನು ಈ ಶೈಲಿ ಬೆಳೆಸಿಕೊಳ್ಳುತ್ತದೆ.

ಈ ಎಲ್ಲಾ ಮೇಲಿನ ಹೇಳಿಕೆಯನ್ನು ಗಮನಿಸಿ ಒಟ್ಟಿನಲ್ಲಿ 'ಶೈಲಿ'ಯನ್ನು ಹೇಳುವುದಾದರೆ ಕವಿಯ ಭಾವ, ಭಾವನೆಗಳನ್ನು, ಅನುಭವಗಳನ್ನು ಗ್ರಹಿಸಿ ಅದನ್ನು ತನ್ನದೇ ಆದ ಭಾಷಾ ವೈಶಿಷ್ಟ್ಯದ ಮೂಲಕ ಹೇಳುವುದು ಅಥವಾ ಅಭಿವ್ಯಕ್ತಪಡಿಸುವುದಾಗಿದೆ.

ಪ್ರಸ್ತುತ ಈ ಅಧ್ಯಯದಲ್ಲಿ ರತ್ನಾಕರವರ್ಣಿಯ "ಭರತೇಶವೈಭವ" ಕಾವ್ಯದಲ್ಲಿ ಶೈಲಿಯ ನಿರೂಪಣಾ ದನಿಯನ್ನು ನೋಡುವುದಾಗಿದೆ. ಭರತೇಶವೈಭವವನ್ನು ಹೊರಗಿನಿಂದ ಓದಿದರೆ ಅದರಲ್ಲಿರುವುದು ಎಲ್ಲವೂ ಸಹಜ, ಸಾಧಾರಣವಾಗಿ ಸಾಮಾನ್ಯವಾಗಿ ಎಲ್ಲದರಲ್ಲಿ ಇರುವ ಅಂಶಗಳ ಹಾಗೆ ಕಾಣುತ್ತದೆ. ಆದರೆ ಅದನ್ನು ಅಂತರಂಗದಿಂದ ಪರಿಶೀಲಿಸಿದರೆ ಚರ್ಚೆ ಕೈಗೊಂಡರೆ ಅದರಲ್ಲಿರುವ ಸಾಂಗತ್ಯದ ಸೊಬಗು ಅಚ್ಚರಿಯನ್ನುಂಟು ಮಾಡುತ್ತದೆ. ರತ್ನಾಕರನು ಸಾಂಗತ್ಯದಲ್ಲಿ ಬಳಸಿರುವ ಪದ್ಯಗಳು ಅವನ ಅದ್ಭುತ ಶೈಲಿಯನ್ನು ಎತ್ತಿಹಿಡಿಯುತ್ತವೆ. ಸಾಂಗತ್ಯ ಇದು ಓದಲು ಸುಲಭವಾದ ದೇಸಿಮಟ್ಟಾದ್ದರಿಂದ ಸಾಮಾನ್ಯ ಜನರೂ ಸಹ ಕಾವ್ಯವನ್ನು ಮನನ ಮಾಡಿಕೊಳ್ಳಬಹುದು. ಇದೇ ಕವಿಯ ಉದ್ದೇಶವೂ ಆಗಿದೆ.

ಕವಿ "ಭರತೇಶವೈಭವ"ದಲ್ಲಿ ವಿಷಯಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾನೆ. ಅಲ್ಲಿ ಬರುವ ಪ್ರಸಂಗಗಳು ಕೇವಲ ತಾತ್ಕಾಲಿಕವಾದವುಗಳು. ವಿಷಯಕ್ಕೆ ಪೂರಕವಾಗಿ ಬಂದವುಗಳು. ಮನುಷ್ಯನು ಸಂಸಾರದಲ್ಲಿದ್ದುಕೊಂಡು ಅದಕ್ಕೆ ಪೂರ್ತಿ ಅಂಟಿಕೊಳ್ಳಲಾರದೆ ಅವನು ಮೋಕ್ಷವನ್ನು ಸಾಧಿಸುವುದು ಹೇಗೆ ಎಂದು ಕವಿ ರತ್ನಾಕರ 'ಭರತೇಶ ವೈಭವ'ದಲ್ಲಿ ಹೇಳಿದ್ದಾನೆ. ಇವನು ಭಾಗವತದ ಶ್ರೀಕೃಷ್ಣನ ಅಂಶವನ್ನು ಹೋಲುವವನು.

ಭರತನಿಗೆ ಕವಿ ವಿಶೇಷಣ ಹೆಸರುಗಳನ್ನು ಹೇಳಿದ್ದಾನೆ. ಆತ್ಮವಿನೋದಿ, ರಾಜಋಷಿ, ಮೋಕ್ಷರಸಿಕ, ಭಾವತಪಸಿ, ಗಂಭೀರ ಸುಖಿ, ಶೃಂಗಾರಯೋಗಿ, ಮೇದಿನಿಪತಿ, ಕ್ಷೋಣೀಶ, ಅವನೀಶ, ಧಾತ್ರೀಶ, ಭೂತಳಪತಿ,

ನರಪತಿ, ನರನಾಥ, ನೃಪತಿ, ಭೂಪಾಲ, ಕುಸುಮ ಕೋದಂಡ, ಭೂವಲ್ಲಭ, ಪೃಥ್ವೀಪತಿ, ಜನಪತಿ, ನಿಜವೆ ಕಣ್ಣಿಕ್ಕಿ ಕಂಡವನು, ವಿಷಯ ವಿಷವನುಂಡು ದಕ್ಕಿಸಬಲ್ಲ ನಿರ್ವಿಷಸಿದ್ಧ.

ಉಂಡುಪವಾಸಿ ಬಳಸಿ ಬ್ರಹ್ಮಚಾರಿ ಭೂ
ಮಂಡಲವಿದ್ದು ನಿಸ್ಸಂಗ
ಮಂಡೆ ಬೆಳೆದು ಮನ ಬೋಳಾದ ತಪಸಿಯ
ಕೊಂಡಾಡಲಳವೆ ಚಕ್ರಿಯನು. (ಮನ್ನಣೆ ಸಂಧಿ)

ಪುರಾಣದ ಕಥೆಯನ್ನು ಕವಿ ತೆಗೆದುಕೊಂಡರೂ ಸಹ ಅವನು ತನ್ನದೇ ಆದ ಸ್ವತಂತ್ರ್ಯ ರೀತಿಯಲ್ಲಿ ಮಾರ್ಪಾಟು ಮಾಡಿಕೊಂಡಿದ್ದಾನೆ. ಕನ್ನಡ ಕವಿಗಳ ವಿಶೇಷತೆ ಎಂದರೆ ಅವರು ಕಾವ್ಯವನ್ನು ರಚಿಸುವ ಮೊದಲು ದೇವರ ಸ್ಮರಣೆ, ಗುರುಗಳ ಸ್ಮರಣೆ, ಪೂರ್ವಕವಿಗಳ ಸ್ಮರಣೆಯನ್ನು ಮಾಡುವುದು ಮತ್ತು ಕಾವ್ಯದ ಕೊನೆಯಲ್ಲಿ ಕಾವ್ಯವನ್ನು ಓದಿದವರಿಗೆ ಬರುವ ಫಲವನ್ನು ಹೇಳುವುದು ರೂಢಿಗತವಾಗಿ ಅಥವಾ ವಾಡಿಕೆಯಾಗಿ ಬಂದಿದೆ. ರತ್ನಾಕರನು ಇದಕ್ಕೆ ಹೊರತೇನಲ್ಲ. ಕಥೆಯನ್ನು ಬರೆಯುವಾಗ ತನ್ನ ಗುರುವನ್ನು ಧ್ಯಾನಿಸಿ ಮತ್ತು ಅವನನ್ನು ಆದಿಯಾಗಿ ಮಾಡಿಕೊಂಡಿದ್ದಾನೆ.

- ದೇಶಿಗಣಾಗ್ರಣಿ ಚಾರುಕೀರ್ತ್ಯಾಚಾರ್ಯ
  ಶ್ರೀಶುಚಿದೀಕ್ಷೆಯಿತ್ತಾಗ
  ಆಶಾಲೆದೂರ ಶ್ರೀಗುರುಹಾಸನಾಥ ಪ್ರ
  ಕಾಶದೊಳ್ಳೆಲಸಿ ರಕ್ಷಿಸಿದ. (ಸರ್ವರ ಮೋಕ್ಷ ಸಂಧಿ)

- ಗುರುಹಂಸನಾಥನಾಜ್ಞೆಯೊಳು ಸಿದ್ಧಾಂತದ
  ತಿರುಳರಿದಾತ್ಮಲೀಲಾರ್ಥ
  ಭರತೇಶ ವೈಭವವೆಂಬ ಕಾವ್ಯವನಿದ
  ನೊರೆದೆನು ಸುಖಿಗಳಾಲಿಪುದು. (ಸರ್ವರ ಮೋಕ್ಷ ಸಂಧಿ)

- ಬಿನ್ನಹ ಗುರುವೆ ಧ್ಯಾನಕೆ ಬೇಸರಾದಾಗ
  ನಿನ್ನನಾದಿಯ ಮಾಡಿಕೊಂಡು
  ಕನ್ನಡದೊಳಗೊಂದು ಕಥೆಯ ಪೇಳುವೆನದು
  ನಿನ್ನಾಜ್ಞೆ ಕಂಡು ನನ್ನೊಡೆಯ. (ಆಸ್ಥಾನ ಸಂಧಿ)

- ಕಬ್ಬಿಗರೋದುಗಬ್ಬವ ಹಾಡುಗಬ್ಬವ
  ಕಬ್ಬದೊಳೊರೆವರಿವೆರಡು
  ಕಬ್ಬಿನಂತಿರಬೇಕು ಬಿದಿರಂತೆ ರಚಿಸಲೇ
  ಕಬ್ಬೆ ಹೇಳೆಲೆ ಸರಸ್ವತಿಯೆ. (ಆಸ್ಥಾನ ಸಂಧಿ)

ತಾನು ಬರೆದ ಕಾವ್ಯ 'ಹಾಡುಗಬ್ಬ'ವೆಂದು ಅದು ಕಬ್ಬಿನಂತೆ ಸಿಹಿಯಾದುದೆಂದು ಬಿದಿರಿನಂತಲ್ಲವೆಂದು ಹೇಳಿದ್ದಾನೆ.

- ರಳೆ, ಕುಳ ಶಿಥಿಲ ಸಮಾಸ ಮುಂತಾದವ
  ರೊಳಗಿಲ್ಲಿ ಕೆಲವುಳ್ಳರುಂಟು
  ಕೆಲವಿಲ್ಲಾದರುವಿಲ್ಲವೇಕೆಂದವರ ಕೋ
  ಟಲೆಯೇಕೆ ಹಾಡುಗಬ್ಬದೊಳು. (ಆಸ್ಥಾನ ಸಂಧಿ)

- ಸಕಲ ಲಕ್ಷಣವು ವಸ್ತುಕಕೆ, ವರ್ಣಕರೆಷ್ಟು
  ವಿಕಳವಾದರು ದೋಷವಿಲ್ಲ
  ಸಕಲ ಲಕ್ಷಣಕಾಗಿ ಬಿರುಸು ಮಾಡಿದರೆ ಪು
  ಸ್ತಕದ ಬದನೆಕಾಯಹುದು. (ಆಸ್ಥಾನ ಸಂಧಿ)

ಕವಿ ಬರೆದ ಕಾವ್ಯದಲ್ಲಿ ಯಾವುದೇ ಅಲಂಕಾರಗಳು, ಅಷ್ಟಾದಶ ವರ್ಣನೆಗಳು ಬಳಸಿಕೊಂಡಿಲ್ಲ. ರಳ, ಕುಳ, ಶಿಥಿಲಗಳಲ್ಲಿ ಎಷ್ಟು ಬೇಕು ಅಷ್ಟನ್ನು ಉಪಯೋಗಿಸಿರುವುದಾಗಿಯೂ "ಉಚಿತತೆ ತಕ್ಕಷ್ಟು ಪೇಳ್ವೆ" ಎಂದು ಕವಿ ಹೇಳಿಕೊಂಡಿದ್ದಾನೆ. ಸಂಸ್ಕೃತವನ್ನು ಹೆಚ್ಚು ಬಳಸಿ ಯಾವುದೇ ಪಂಡಿತ ಮನ್ನಣೆಗೆ ಕವಿ ಕಾವ್ಯ ಬರೆದಿಲ್ಲ.

ಪುರಾಣದ ಕಥೆಯನ್ನು ಕವಿ ಹೇಳಹೊರಟಿದ್ದರೂ ಮೊದಲಿಗೆ ಬರುವ 'ಭೋಗವಿಜಯ' ಮತ್ತು 'ಭರತ ಬಾಹುಬಲಿಯ' ಯುದ್ಧದ ಪ್ರಸಂಗದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿ ಅದನ್ನು ಮಹಾಕಥೆಯನ್ನಾಗಿಸಿದ್ದಾನೆ. ಇದೇ ಅವನ ಮಹಾ ಕವಿತ್ವಕ್ಕೆ ನಿದರ್ಶನ. ಹಿಂದಿನ ಕಥೆಗಳಲ್ಲಿ ಭರತನಿಗೆ ಮಹತ್ವ ಸ್ಥಾನ ಕೊಟ್ಟಿರಲಿಲ್ಲ. ಆದರೆ ಕವಿ ತನ್ನ ಕಥಾನಾಯಕನಾದ ಭರತನ ಮೇಲೆ ಅಪಾರ ಪ್ರೀತಿ. ಹೀಗಾಗಿ ಅವನ ಜೀವನ ಧ್ಯೇಯವನ್ನು, ಅವನ ಹಿನ್ನೆಲೆಯನ್ನು, ಅವನ ನಡೆ-ನುಡಿಯಲ್ಲಿ ವಿಶಿಷ್ಟತೆಯನ್ನು, ಆಧ್ಯಾತ್ಮಿಕ ಚಿಂತನೆಯನ್ನು, ಸಂಗೀತ ಪ್ರೀತಿಯನ್ನು, ಹೆಂಡತಿಯರೊಡನೆ ಇರುವ ಕ್ಷಣಗಳನ್ನು ಇನ್ನೂ ಹತ್ತು ಹಲವಾರು ಪ್ರಸಂಗಗಳನ್ನು ರಸವತ್ತಾಗಿ ಎಳೆ ಎಳೆಯಾಗಿ ತೆಗೆದಂತೆ ಶೃಂಗಾರ ಭರಿತವಾಗಿ ಭರತನ ಜೀವನ, ಸಂಸಾರ, ರಾಜ್ಯಭಾರವನ್ನು ಹೇಳುತ್ತಾನೆ ಕವಿ.

[illegible]

[illegible]

[illegible]

[illegible]

[illegible]

ಭರತನು ತನ್ನ ಬಂಧುಗಳನ್ನು, ಜಗವನ್ನು ಸೋಲಿಸುವ ಮೋಡಿಕಾರನಾಗಿದ್ದಾನೆ. ಎಲ್ಲರೂ ಅವನ ಅಧೀನರಾಗಿದ್ದಾರೆ. ಅವನು ಊಟ ಮಾಡುವ ರೀತಿ -

- ಗಡಿಯ ದಾಂಟುವನೊಬ್ಬನನುಪಿನಾಳುಗಳ
  ತಾನೊಡನೆ ಮನ್ನಿಸಿ ಪೋಗುವಂತೆ
  ಕಡೆಗಾತ್ಮಸಿದ್ಧಿಯ ಪಡೆವವನನ್ನವ
  ಕೂಡತಿದ್ದ ನಿಂದ್ರಿಯಗಳಿಗೆ. (ಆರೋಗಣೆ ಸಂಧಿ)

ಇದು ಅವನ ಭೋಗಮಜ್ಜನವಾದರೆ ಯೋಗವನ್ನು ಶೃಂಗಾರವಾಗಿ ವರ್ಣಿಸಿದ್ದಾನೆ.

- ಬೇಕಾದರಾಡಿಸಿ ಗಾಳಿಪಟವನರ್ತಿ
  ಸಾಕಾಗೆ ಸುರುಳುವನಂತೆ
  ನೂಕಿ ಚಿತ್ತವ ಹೊರಗಾಡಿಸುವನು ತನ್ನೊ
  ಳೇಕವಾಗಿರಿಸುವನೊಮ್ಮೆ. (ಮನ್ನಣೆ ಸಂಧಿ)

- ಜಿನ ಜಿನ ಕಣ್ಣುಚ್ಚಿ ತನ್ನ ಮೈಯೊಳಗೆ ತ
  ನ್ನನೆ ತಾನೆ ಕಂಡನಾಕ್ಷಣವೆ
  ಜಿನ ಜಿನ ಕಂಡನು ಸಿದ್ದನನಲ್ಲಿಯೆ
  ಅನುಭವಿಸಿದನಾತ್ಮ ಸುಖವ. (ಮನ್ನಣೆ ಸಂಧಿ)

- ಕತ್ತಲೆಯಹುದೊಮ್ಮೆ ಬೆಳಗಹುದದು ಮಾಸಿ
  ಮತ್ತೊಂದು ತಂಪಿನ ಸೊಡರ
  ಹೊತ್ತಿಸಿದಂತಿಹುದಾ ಭರತೇಶನ
  ಚಿತ್ತದೊಳಾತ್ಮಯೋಗವದು. (ಮನ್ನಣೆ ಸಂಧಿ)

- ಒಳಗೆ ತನ್ನಾತ್ಮನ ತಾ ನೋಡೆ ಹೊಸತೊಂದು
  ಬೆಳಗು ತೋರ್ಪುದು ತೋರಲೊಡನೆ
  ಮಳಲಂತೆ ಜರಿವುತಿಹುದು ಕರ್ಮ ನಿಜಸುಖ
  ಹೊಳೆಯಂತೆ ಹೊಳೆದೇಳುತಿಹುದು. (ಮನ್ನಣೆ ಸಂಧಿ)

ಹೊರಗಡೆಯಿಂದ ನೋಡಿದರೆ ರಸಿಕ ಚಕ್ರವರ್ತಿಯಂತೆ ಕಂಡರೂ ಸ್ವಲ್ಪ ಸಮಯದಲ್ಲೇ ಮನಸ್ಸು "ನಿರಂಜನ ಸಿದ್ಧ" "ಗುರು ಹಂಸನಾಥ"ನಲ್ಲಿ ಲೀನವಾಗಿ ಯೋಗ ಸಮಾಧಿಯಾಗಿ ಬಿಡುತ್ತಾನೆ.

ತನ್ನ ೯೬,೦೦೦ ಮಂದಿ ಹೆಂಡತಿಯರೊಡನೆ ಅವನು ನಡೆಸುತ್ತಿದ್ದ ದಾಂಪತ್ಯ ಜೀವನ ವಿಧಾನ.

- ಪಿತ್ತವೇರಿದರೆ ಪರಿಶೋಧನೆಗೈದು
  ಚಿತ್ತಗರಿಳೆಯೊಳೆಹಂತ
  ಬತ್ತಿದ ಮದವ ಪೆಂಗಳೊಳಾಡಿ ಕಳೆದು
  ರಾಜೋತಮನಿಹನಾತ್ಮನೊಳಗೆ.

ಮುನಿ ಪೂಜೆಗೆ ಹೋಗುವಾಗ ಅವನು ಇರುವ ರೀತಿ ತನ್ನ ಸುತ್ತಮುತ್ತಲೂ ರಾಜ್ಯ ಪರಿವಾರದವರು, ಜನರು ಇದ್ದರೂ ಆ ಕಡೆಗೆ ಅವನಿಗೆ ಚಿತ್ತವೇ ಇಲ್ಲ. ಮುನಿಪೂಜೆಗೆ ಹೊರಡುವಾಗ ಅವನು ಏಕಾಂಗಿ.

- ಹೊಗಳ ಬಾರದು ತನ್ನ ಕಂಡೊಬ್ಬರಾಗ
  ಕೈಮುಗಿಯಬಾರದು ಛತ್ರವಿಲ್ಲ
  ಸಂಗತನಿವಾಸಕೆ ನಡೆದನು ಹೆಮ್ಮೆಯ
  ತೆಗೆದಿಟ್ಟು ಭಯ ಭಕ್ತಿವೆರಸಿ. (ಪರ್ವಾಭಿಷೇಕ ಸಂಧಿ)

- ರಾಜನ ಮುಂದೆ ಭೃತ್ಯಗೆ ಗುರುವಿನ ಮುಂದೆ
  ರಾಜಗೆ ಹಮ್ಮು ಸಲ್ಲೆಂಬ
  ರಾಜನೀತಿಯನರಿದಾ ರಾಜ ನಡೆದನು
  ರಾಜವಿಡಾಯವ ಬಿಟ್ಟು. (ಮುನಿಭಕ್ತಿ ಸಂಧಿ)

- ಲೋಕವೆಲ್ಲೆನ್ನ-ನೋಲೈಸುತಿರ್ದರು ನಾನು
  ಲೋಕವ ಬೆರಸೆನೆಂಬುದನು
  ಲೋಕವರಿಕೆ ಮಾಡಲೆಂದು ನಿಂದಂತೆ ತಾ
  ನೇಕಾಕಿಯಾಗಿರ್ದನಾಗ. (ಮುನಿಭಕ್ತಿ ಸಂಧಿ)

- ದಿನ ಬಂಜೆಯಾಗದೆ ಪರಮಾತ್ಮರತರಾದ
  ಮುನಿಗಳಿಗನ್ನದಾನವನು
  ಮನಮುಟ್ಟಿ ಮಾಡುವ ಭಾಗ್ಯವೆಂಬುದನಾವ
  ಮನುಜ ಪಡೆಯಬಹುದೆಂಬ. (ಮುನಿಭಕ್ತಿ ಸಂಧಿ)

ವಿಜಯಾರ್ಧಗಿರಿಯ ವಜ್ರಕವಾಟವನ್ನು ಭರತ ತನ್ನ ದಂಡರತ್ನದಿಂದ ಸ್ಫೋಟಿಸಿದನು. ಅದು ಕವಿ ವರ್ಣಿಸಿದ ಬಗೆ ಹೀಗಿದೆ :

- ಬರಸಿಡಿಲೆರಗೆ ಪಾಸರೆ ಬಿರಿವಂತೆ ಪೊ
ಚ್ಚರಿಸಿ ಸೀಳಾಯ್ತು ಮತ್ತೊಡನೆ
ಮೊರೆಯಿಡುವಂತೆ ಘರ್ರೆಂದು ಘೀಳಿಡುತಾಗ
ತೆರೆದುದಾ ವಜ್ರಕವಾಟ. (ಕವಾಟ ವಿಸ್ಫೋಟನ ಸಂಧಿ)

- ತೊಂಬ ಕಿತ್ತರೆ ನೀರು ನೆಗೆವಂತೆ ಗುಹೆಯಲ್ಲಿ
ತುಂಬಿದ್ದ ಬೆಂಕಿ ಭೂಪತಿಯ
ಬೆಂಬಳಿಯೊಳಗೆ ನಾಲಗೆ ನೀಡಿತಶ್ವ ಕ
ದುಂಬಿ ಹಾರಿತು ಮೂರು ಹಾರ. (ಕವಾಟ ವಿಸ್ಫೋಟನ ಸಂಧಿ)

- ಛಿಳಿ ಛಿಳಿ ಛಿಟಛಿಟ ದಿಮಿದಿಮಿ ದಿಮಿದಿಮಿ
ಘುಳುಘುಳು ಬರುಬರು ಪಲೆರು
ದಳದಳ ದಗಿದಗಿಲೆಂದುರಿ ನೆಗೆದುದು
ಪ್ರಳಯಕಾಲದ ಕಿಚ್ಚಿನಂತೆ
ಆಗ ಭರತನ ಚಿತ್ತವೃತ್ತಿ. (ಕವಾಟ ವಿಸ್ಫೋಟನ ಸಂಧಿ)

- ದ್ವಾರ ಬಂಧವ ನೊಡೆದೊಯ್ದನೆಂದನಗೊಂದು
ಬೀರವಲ್ಲದು ತೋರವಲ್ಲ
ಆರು ಮಿರುವರು ಪೂರ್ವಾರ್ಜಿತ ಪುಣ್ಯದ
ಪ್ರೇರಣೆಯಿದ್ದುದಂತೆಂದ. (ಕವಾಟ ವಿಸ್ಫೋಟನ ಸಂಧಿ)

- ಕೌಶಲಿಯಾಳು ನಾನು ಜನಿಸಬೇಕತ್ತಿ ಬಂದೀ
ಶೈಲವನು ದಾಂಟಿ ಮುಂದೆ
ದೇಶಾಧಿಪತಿಗಳನಾಗಬೇಕೆಂಬುದಾ
ದೇಶವಲ್ಲದೆ ಗೆಲ್ವರಾರು. (ಕವಾಟ ವಿಸ್ಫೋಟನ ಸಂಧಿ)

ಭರತ ತನ್ನ ಹೆಂಡತಿಯರನ್ನು ರಮಿಸುವ ಬಗೆ ತಮ್ಮ ನಾಟ್ಯವನ್ನು ನೋಡದೆ "ಹೆಡ್ಡವೆಂಗಳು ನೃತ್ಯವೇನೆಂದು ಮಂತ್ರಿಯ ಗಡ್ಡವೊಂದನೆ ನೋಡುತಿದ್ದ" ರಾಜ ಎಂದು ತಿಳಿದ ರಾಣಿಯರು ಕೋಪಿಸಿಕೊಂಡಾಗ.

- ನನ್ನಿಂದ ನೋವಾದುದವರಿಗೆಂದಾಗ ನೃ
ಪೋನ್ನತ ನೆನೆದನೆದೆಯೊಳು
ಇನ್ನಿವರನು ತಿಳಿಪುವ ಬಗೆಯಾವುದೆ
ದುನ್ನಿಸಿ ನುಡಿದನು ಮತ್ತೆ. (ತಾಂಡವ ವಿನಯ ಸಂಧಿ)

- ರೂಪಾಣಿ ಬಾರಲೆ ಪದ್ಮಿನಿ ಬಾರೌ ಸ
ಮೀಪಕೆ ನಿಮ್ಮ ಮನಸಿನ
ತಾಪವ ಕೆಡಿಸುವೆನೆಂದು ಗದ್ದುಗೆಯೊಳಿ
ದ್ದಾ ಪೂರ್ವಚಕ್ರ ಕರೆದನು. (ತಾಂಡವ ವಿನಯ ಸಂಧಿ)

ನೆಚ್ಚಿನ ರಾಣಿಯಾದ ಕುಸುಮಾಜಿಯೊಡನೆ ಭರತನ ರಸವತ್ತಾದ ಸಂಭಾಷಣೆ ಕುಸುಮಾಜಿ ಅರಗಿಳಿಗೆ ಹೇಳಿದ ಕಥೆಯನ್ನು ನೆರಮನೆಯ ಸುಮನಾಜಿ ಕೇಳಿ ಚರಿತ ಮಾಡಿದಳು. ಅದನ್ನು ಅಮರಾಜಿ ಅಮೃತವಾಚಕ ಎಂಬ ಗಿಳಿಗೆ ಹೇಳಿಕೊಟ್ಟಳು. ಅದು ಭರತನ ಮುಂದೆ ಹೇಳುತ್ತಿದ್ದಾಗ ಈ ಕೃತಿ ರಚಿಸಿದವಳು ಕುಸುಮಾಜಿ ಎಂದು ತಿಳಿದು, ಪಂಡಿತೆಯ ಮಧ್ಯಸ್ಥಿಕೆಯಲ್ಲಿ (ಅವನ ಮನಸ್ಸಿನಲ್ಲಿಯೂ ಇದೇ ಇತ್ತು) ಕುಸುಮಾಜಿಗೆ ಸನ್ಮಾನ ಮಾಡಲು ಆಕೆಯ ಮನೆಗೆ ಹೋದಾಗ ಇಬ್ಬರ ನಡುವಿನ ಸಂಭಾಷಣೆ ಮತ್ತು ಅವನು ಆಕೆಯನ್ನು ಪ್ರೀತಿಯಿಂದ ಕರೆಯುವ ಬಗೆ-

- ಸಾರಣೆ ಚೆನ್ನಾಯ್ತು ಕುಸುಮೆ ಕುಂಕುಮದೊಂದು
ಸಾರಣೆ ಚೆನ್ನಾಯ್ತು ಕುಸುಮಿ
ತೋರಣ ಚೆನ್ನಾಯ್ತು ಕುಸುಮು ನಿನ್ನಾಣೆಯೆಂ
ದಾ ರಾಯ ನುಡಿದನಾಕೆಯೊಳು. (ಸನ್ಮಾನ ಸಂಧಿ)

- ಚಳಯಗೊಟ್ಟುದು ಲೇಸು ಕುಸುಮಾಜಿ ಹೊಸರಂಗ
ವಲಿ ಲೇಸು ಕುಸುಮಾಂಗಿ ನಿನ್ನ
ನಿಳಯದ ಸಿಂಗಾರ ಸೊಗಸಾಯ್ತು ಕುಸುಮ ಕೋ
ಮಲೆ ಕೇಳು ಜಿನನಾಣೆಯೆಂದ. (ಸನ್ಮಾನ ಸಂಧಿ)

- ಕುಸುಮ ಕುಸುಮಿ ಕುಸುಮಾಜಿ ಕುಸುಮೆಯೆಂಬ
ಕುಸುಮಾಂಗಿ ಕುಸುಮಾಲೆಯೆಂಬ
ಕುಸುಮಲೆ ಕುಸುಮನಿಯೆಂದು ನಲ್ಲಳ ಕುಶ
ಲಿಸಿ ಕೇಳ್ದ ರಾಯನೊಮ್ಮೊಮ್ಮೆ. (ಸನ್ಮಾನ ಸಂಧಿ)

- ತವರೂರ ಗಿವರೂರ ಹೆಂಗನಾನರಿಯೆನೆ
  ಮೃವನೀಶನರಮನೆಯಲ್ಲಿ
  ನವನಿಧಿಯುಂಟೆನಗಿದು ಗಣ್ಯವಲ್ಲವೆಂ
  ದವಳಾಡಿದಳು ಗಂಡನೊಡನೆ. (ಸನ್ಮಾನ ಸಂಧಿ)

- ನನ್ನ ಮೇಲಣ ಲೇಸಿನಿಂದೆನ್ನ ತವರೂರ
  ಬಿನ್ನಣಿಸಿದ ರಾಯನೆಂದು
  ತನ್ನದೆಯೊಳು ಬಲ್ಲಳೆದಕುಬ್ಬದರಸನೊಂ
  ದುನ್ನತಿಮನೆ ಪೇಳ್ದಳಾಗ. (ಸನ್ಮಾನ ಸಂಧಿ)

ಹೀಗೆ ಹೆಂಡತಿಯನ್ನು ಕುಸುಮೆ, ಕುಸುಮಿ, ಕುಸುಮು, ಕುಸುಮಾಜಿ, ಕುಸುಮಾಂಗಿ, ಕುಸುಮ ಕೋಮಲೆ ಎಂದು ಆಕೆಯನ್ನು ಪ್ರೀತಿಯಿಂದ ಕರೆಯುತ್ತಿದ್ದನು. ಅವನ ಪ್ರೀತಿ ಎಂಥಹದು ಎಂದರೆ ತನ್ನ ಹೆಂಡತಿಯರು ತಮ್ಮ ತವರೂರನ್ನು ಮರೆಯುವಷ್ಟು ಅವರಿಗೆ ಪ್ರೀತಿಯನ್ನು ಕೊಟ್ಟಿದ್ದಾನೆ. ಕುಸುಮಾಜಿಯು ಭರತನ ತೊಂಬತ್ತಾರು ಸಾವಿರ ಪತ್ನಿಯರಲ್ಲಿ ಆಕೆಯದು ಎದ್ದು ಕಾಣುವ ಸ್ವಭಾವ ನಕ್ಷತ್ರಗಳ ಮಧ್ಯ ಇರುವ ಚಂದ್ರನಂತೆ. ಆಕೆಯ ಜಾಣ್ಮೆಯಿಂದ, ಮೃದು ಸ್ವಭಾವ, ಅಪಾರವಾದ ಪತಿಭಕ್ತಿಯಿಂದ, ಮೋಹಕ ರೂಪಿನಿಂದ ಭರತನ ಮನಸ್ಸನ್ನು ಸೆಳೆದಿದ್ದಾಳೆ. ಆಕೆ ತನ್ನ ಗಂಡನಿಗೆ ಎಷ್ಟು ಉಪಚಾರ ಮಾಡಿದರೂ ಅವಳಿಗೆ ತೃಪ್ತಿಯಿಲ್ಲ. ತನ್ನ ಮನೆಗೆ ಊಟಕ್ಕೆ ಬಂದ ಗಂಡನನ್ನು ಕುಳ್ಳಿರಿಸಿ ಸಂಭ್ರಮ, ಸಡಗರದಿಂದ ಬಡಿಸುತ್ತಾಳೆ.

- ಸ್ವರ್ಗದೊಳಗೆ ಬಿತ್ತಿ ಬೆಳೆದ ಶಾಲಿಯನಪ
  ವರ್ಗಲೋಕದೊಳಟ್ಟು ತಂದು
  ಭೋರ್ಗರೆದೆಡೆಮಾಳ್ಪ ಪುಣ್ಯಲಕ್ಷ್ಮಿಯೊಯೆಂಬ
  ಮಾರ್ಗದೊಳನ್ನವಿಕ್ಕಿದಳು. (ಸನ್ಮಾನ ಸಂಧಿ)

130007

ರೂಪದಲ್ಲಿ ರತಿಯನ್ನು ಮೀರಿಸಿದ ಅವಳನ್ನು ಕವಿಯು ವರ್ಣಿಸಿದ ರೀತಿ ಅರ್ಥವತ್ತಾಗಿದೆ. ಆಕೆ ಬಡಿಸಿದ ಬಗೆ, ನುಡಿಸಿದ ವೀಣೆ ಎಲ್ಲವೂ ಭರತನನ್ನು ಸೂರೆಗೊಂಡಿವೆ.

ರತ್ನಾಕರನು ತಂದ ಮತ್ತೊಂದು ಮೋಡಿ ತರಿಸುವ, ಮನಸ್ಸು ಸೂರೆಗೊಳಿಸುವ ಸ್ತ್ರೀಪಾತ್ರ ಮಕರಂದಾಜಿ. ಈಕೆ ಕುಸುಮಾಜಿಯ ತಂಗಿ. ಆಕೆಯ ಜೊತೆ ಭರತನ ಕಿಟಲೆ, ಸರಸದ ಸಂವಾದ ಹೀಗಿದೆ:

ಅಕ್ಕನ ಮನೆಗೆ ಬಂದ ಭಾವನನ್ನು ಸ್ವಾಗತ ಮಾಡುತ್ತಾ -

- ಅನುಕೂಲವಾದುದಾರೋಗಣೆಗಿನ್ನೆಮ್ಮ
  ಮನೆಗೇಳು ಭಾವಾಜಿಯೆಂದು
  ತನುಮಧ್ಯೆ ನುಡಿದಳದಕೆ ರಾಯ ನಗುತ ನಾ
  ದುನಿಯೊಳು ನುಡಿದನಿಂತೆಂದು. (ಸರಸ ಸಂಧಿ)

- ಇಂದಾನು ನಿನ್ನ ಮನೆಗೆ ಬಹುದುಚಿತವೆ
  ಒಂದರೆ ವರುಷದ ಮೇಲೆ
  ಬಂದು ನೀನೆನ್ನ ಕರೆದರಾನು ಬಹೆನು ಹೋ
  ಗೆಂದನು ನೃಪತಿ ನಾದುನಿಯ. (ಸರಸ ಸಂಧಿ)

- ಅಕ್ಕಾಜಿಯರ ಮನೆಗೇಳೆಂದೆ ನೀನಿಂತು
  ಠಕ್ಕಿನ ಮಾತನಾಡಿದೆಯ
  ಠಕ್ಕುಕಾತಿಯೆ ನಿನ್ನ ಮನಗೆಂದಯ್ಯೆಸೆ ನಿ
  ನ್ನಕ್ಕನ ಹೆಸರ ಹೇಳಿದೆಯ. (ಸರಸ ಸಂಧಿ)

- ಅಕ್ಕನ ಹೆಸರ ಹೇಳುವರಾಕೆ ಪಡೆದರೆ
  ಮಕ್ಕಳ ಪೇಳ್ವುವು ಮುಂದೆ
  ದಿಕ್ಕಿನೊಳೆನಗೇನು ಸಂಬಂಧ ಸಾಕೇಳು
  ಸಿಕ್ಕಿನ ಮಾತನಾಡದಿರು. (ಸರಸ ಸಂಧಿ)

ರತ್ನಾಕರನು ಸೃಷ್ಟಿಸಿದ ಅಸಂಖ್ಯಾತ ಸ್ತ್ರೀ ಪಾತ್ರಗಳೆಲ್ಲವೂ (ಪಂಡಿತೆಯನ್ನು ಹಿಡಿದು) ಅವರ ಮಾತಿನ ಚಾಣಾಕ್ಷತೆ, ಅವರ ಕೋಮಲ ಮನಸ್ಸು, ಅವರ ಸಮೃದ್ಧ ಸೌಂದರ್ಯ ಎಲ್ಲವನ್ನು ಅವನೆ ಹೇಳಿ ಮಾಡಿಸಿದ ಸುರಸುಂದರಿಯರ ಹಾಗೆ ಶೃಂಗಾರಭರಿತವಾಗಿ ಅವರನ್ನು ಕಾವ್ಯದಲ್ಲಿ ಮೂಡಿಸಿದ್ದಾನೆ.

ಮೇಲಿನ ಪದ್ಯದಲ್ಲಿ ಭರತ-ಮಕರಂದಾಜಿಯ ಸಂಭಾಷಣೆಯು "ರತ್ನಾಕರವರ್ಣಿ ಭಾವ-ನಾದಿನಿಯರ ಸರಸ ಸಂಭಾಷಣೆಯನ್ನು ತನ್ನ ಕಾವ್ಯದಲ್ಲಿ ತರುವುದರ ಮೂಲಕ ಕನ್ನಡ ಸಾಹಿತ್ಯಕ್ಕೆ ಒಂದು ಅಪೂರ್ವ ಕಾಣಿಕೆಯನ್ನು ಕೊಟ್ಟಿದ್ದಾನೆ. ಶೃಂಗಾರ ರಸಭರಿತವಾದ ಅನೇಕ ಬೃಹತ್ ಗ್ರಂಥಗಳು ರತ್ನಾಕರನ ಭರತೇಶ ವೈಭವಕ್ಕಿಂತ ಹಿಂದೆ ರಚಿತವಾಗಿದ್ದರೂ, ಈ ಸನ್ನಿವೇಶವನ್ನು ಯಾವ ಕವಿಯೂ ಯಾವ ಕಾವ್ಯದಲ್ಲಿಯೂ ಚಿತ್ರಿಸಿಲ್ಲ. ಹಾಗಾಗಿ ರತ್ನಾಕರ ಕನ್ನಡ ಸಾಹಿತ್ಯಕ್ಕೆ ಕೊಟ್ಟ ಒಂದು ಕಾಣಿಕೆ ಈ ಭಾವ-ನಾದಿನಿಯರ ಸಂಭಾಷಣೆ. ಈ ಮೂಲಕ ಶೃಂಗಾರರಸ ನಿರೂಪಣೆ, ಜನಪದ ಸಾಹಿತ್ಯದಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಕಂಡು ಮಾಯವಾಗುವ ಈ ರೀತಿ ಭಾವ-ನಾದಿನಿಯರ ಸರಸ-ಸಂಭಾಷಣೆ, ಬಂಗಾಳಿ ಸಾಹಿತ್ಯದಲ್ಲಿ ಸ್ವಲ್ಪ ಹೆಚ್ಚಿನ ಮಟ್ಟದಲ್ಲಿ ಕಾಣಿಸಿಕೊಳ್ಳುತ್ತದೆ." (ಕಮಲಾ ಹಂಪನಾ, ೨೦೦೩, ಪು.೧೬೦-೧೬೧).

ಮಕರಂದಾಜಿಯ ಉಪದೇಶ ಪಡೆದಿದ್ದ ಅಮೃತವಾಚಕನೆಂಬ ಗಿಳಿ ಮತ್ತು ಭರತನ ನಡುವಿನ ಮಾತುಗಳು-

- ಬಂದೆಯ ಭಾವ ಬಂದೆಯ ಸುಪ್ರಭಾವ ಅ
  ಯಂದೆಯ ಸುಗುಣಸ್ವಭಾವ
  ಬಂದುದು ಲೇಸು ಮಹಾನುಭಾವಾಯೆಂದು
  ದಂದು ಮುದ್ದಿನ ರಾಜಕೀಯ. (ಸರಸ ಸಂಧಿ)

- ಕ್ಷೇಮವೆ ಭಾವಾಜಿ ಮತ್ತು ನಿಮಗೆ ಪರಿ
  ಣಾಮವೆ ಹೇಳು ಭಾವಾಜಿ
  ಈ ಮನೆಯತ್ತಲೇಕಡಿಗಡಿಗೆಯ್ತರೆ
  ಭೂಮೀಶ ಎಂದುದಾ ಪಕ್ಕಿ. (ಸರಸ ಸಂಧಿ)

- ಪಂಜರದೊಳಗಿದ್ದು ನಿನಗಿಷ್ಟೆಯೆನೆದಿರು
  ಮಾಂಜಿ ನೀನಗಲ್ವಾಗ ನಿನ್ನ
  ಹೊಂಜೆಳೆ ಮೈಯಳ ದಂತಕಾಂತಿಯ ಹೊನ್ನ
  ಪಂಜರದೊಳು ಕೂಡಿಸುವೆನು. (ಸರಸ ಸಂಧಿ)

- ಇಷ್ಟೇಕೆ ಕೋಪ ನಿಮ್ಮಕ್ಕಗಾನೆಸಗಿದ
  ಕಷ್ಟವೇನಮೃತವಾಚಾಂಕ
  ಶಿಷ್ಟರೆಂದೆಯ್ತಂದೆವೆಕಟ ನೀವಿಬ್ಬರು
  ದುಷ್ಟರಲ್ಲವೆಯೆಂದನೊಡನೆ. (ಸರಸ ಸಂಧಿ)

- ನೋವಾಯ್ತೆ ಭಾವಾಜಿ ನಮ್ಮಕ್ಕನಧರ ಸಂ
  ಜೀವನಾಮೃತವ ನೀನುಂಡು
  ಜೀವ ಸಿದ್ಧಿಯ ಪಡೆದಿರು ನಮ್ಮ ಮನೆಯೊಳಿ
  ನ್ನೀ ವಾಕ್ಯ ಲೇಸಲೆ ನಿನಗೆ. (ಸರಸ ಸಂಧಿ)

ಗಿಳಿಯನ್ನು ಸಹ ಕವಿ ಮಾತಿಗಿಳಿಸಿದ್ದನ್ನು ನೋಡಬಹುದು.

ಭರತ ತನ್ನ ತೊಂಬತ್ತಾರು ಸಾವಿರ ಹೆಂಡತಿಯರನ್ನು ಒಂದೇ ರೀತಿಯಲ್ಲಿ ನೋಡುತ್ತಿದ್ದ. ಯಾರಿಗೂ ಯಾವುದೇ ವಿಷಯದಲ್ಲಿ ಚ್ಯುತಿ ಬರದ ಹಾಗೆ ಎಲ್ಲರನ್ನು ನಿಭಾಯಿಸುತ್ತಿದ್ದ. ೯೬,೦೦೦ ಹೆಂಡತಿಯರ

ಆಚಾರ-ವಿಚಾರಗಳು, ಸಂಪ್ರದಾಯ, ನಡೆ-ನುಡಿ, ಅವರಲ್ಲಿ ಹೆಚ್ಚಾಗಿ ಕಾಣುವ ಪತಿಭಕ್ತಿ, ಅವರ ಮಧ್ಯದಲ್ಲಿ ಇರುವ ಅಕ್ಕ-ತಂಗಿಯರ ವಾತ್ಸಲ್ಯ, ಮಮತೆ, ಪ್ರೀತಿ ಎಲ್ಲವೂ ಮನಸ್ಸನ್ನು ಬಹಳವಾಗಿ ಆಕರ್ಷಿಸುತ್ತವೆ. ಅವರ ಆಳವಾದ ಪತಿಭಕ್ತಿಯನ್ನು ಎತ್ತಿ ತೋರಿಸಲು ಆರೋಗಣೆ ಸಂಧಿಯನ್ನು ಉದಾಹರಿಸಬಹುದು. ಅವರ ಮಧ್ಯ ಇರುವ ಹೊಂದಾಣಿಕೆ, ಪರಸ್ಪರ ಅನ್ಯೋನ್ಯತೆ, ಪ್ರೀತಿ-ವಾತ್ಸಲ್ಯ ಎಲ್ಲವನ್ನು ಈ ವಾಸ್ತವದಲ್ಲಿ ನಿಂತು ನೋಡಿದರೆ ತುಂಬಾ ಆಶ್ಚರ್ಯ ತರುವ ಸಂಗತಿಗಳಾಗಿವೆ.

ಉಪ್ಪರಿಗೆ ಸಂಧಿಯಲ್ಲಿ ಉಪ್ಪರಿಗೆ ಮೇಲೆ ಕುಳಿತ ತಮ್ಮ ಗಂಡನನ್ನು ನೋಡಲು ಆತುರದಿಂದ ಒಬ್ಬರಿಗೊಬ್ಬರು ಕೀಟಲೆ ಮಾಡುತ್ತಾ ಸರಸ-ಸಂಭಾಷಣೆಯಿಂದ ಹೆಂಗಳೆಯರು ಪರಸ್ಪರ ಚೇಡಿಸುತ್ತಾ ಹೋಗುತ್ತಿರುವಾಗ ಆಡಿದ ಮಾತುಗಳು.

- ನೋಡಿ ಬಾ ತಂಗಿ ಯೆಚ್ಚರಿಕೆಯೆಕ್ಕಾಜಿ ಕೈ
  ನೀಡಕ್ಕ ಕೋ ಹಿಡಿ ತಾಯಿ
  ಓಡದಿರಕ್ಕಾ ಬಾ ಬಾ ತಂಗಿಯೆಂದು ಮಾ
  ತಾಡುತೇರಿದರೊಲವಿನೋಳು. (ಉಪ್ಪರಿಗೆ ಸಂಧಿ)

- ಹರಿವುತಿದ್ದಪಳಿಗೆ ಹರಿ ಹರಿ ಮುಂದೆ ನಿ
  ನ್ನರಸನೀವನು ದೊಡ್ಡ ಮೆಚ್ಚಿ
  ಬರಲಾರದವರೇನನಾಡರೆನುತ ತಾವು
  ಸರಸವಾಡುತ ಪತ್ತುತಿಹರು. (ಉಪ್ಪರಿಗೆ ಸಂಧಿ)

- ಮೌನವೀಕೆಗೆ ತನ್ನ ಗಂಡನಂತಾತ್ಮನ
  ಜಾನಿಸುತ್ತೈದುವ ಪರಿಯೊ
  ಏನೆಂದು ತಿಳಿಯಬಾರದು ಹೇಳು ನಿನಗೆ ಸು
  ಧ್ಯಾನವ ಕಲಿಸಿದನಾರೆ. (ಉಪ್ಪರಿಗೆ ಸಂಧಿ)

- ಧ್ಯಾನಗೀನವ ನೀವು ನಿಮ್ಮರಸನು ಬಲ್ಲಿ
  ರಾನೇನ ಬಲ್ಲೆನಾ ಗುಸುಟ
  ಈ ನಿಮ್ಮ ಸರಸ ಸಲ್ಲಾಪಕೆ ಮನದಲ್ಲಿ
  ಆನಂದಿಸುತ ಬಂದೆನಕ್ಕ. (ಉಪ್ಪರಿಗೆ ಸಂಧಿ)

- ನಡೆವಾಗ ಸವತಿಯ ಕಾಲಮೇಲೊಂದು ಕ
  ಪ್ಪಿಡಿದರೆ ಕಂಡೂರ್ವಳದನು

ತೊಡದಳು ಕೈಮುಟ್ಟಿ ತಂಗಿ ಹಾ ಹಾಯೆಂದು
ಒಡನಾಕೆ ಝುಂಕಿಸಿ ಹೋಗೆ. (ಉಪ್ಪರಿಗೆ ಸಂಧಿ)

- ಕಾಲಮೇಲದೆ ಕಪ್ಪು ತೊಡೆದುಕೊಳ್ಳೆಂದೊಲ್ಲು
ಹೇಳದೆ ತೊಡೆದರೆ ತಂಗಿ
ಓಲಗ ಮುಟ್ಟಲಾನುದು ಸುಮ್ಮನೈದಕ್ಕ
ಕೇಳಬಹುದು ನಮ್ಮ ಮಾತು. (ಉಪ್ಪರಿಗೆ ಸಂಧಿ)

ಹೀಗೆ ಒಬ್ಬರಿಗೊಬ್ಬರು ಹಾಸ್ಯ ಮಾಡುತ್ತಾ, ಕಾತುರದಿಂದ ಉಪ್ಪರಿಗೆಗೆ ಹೋಗುವ ರೀತಿಯನ್ನು ಅವರ ಸಂಭಾಷಣೆಯನ್ನು ಕವಿ ಕಣ್ಣಿಗೆ ಕಟ್ಟುವ ಹಾಗೆ ಚಿತ್ರಿಸಿದ್ದಾನೆ.

"ರತ್ನಾಕರ ಭರತೇಶವೈಭವ ಒಂದು ಪರಿಪೂರ್ಣ ಪ್ರಮೀಳಾ ರಾಜ್ಯ. ಹೆಣ್ಣು ಮಕ್ಕಳನ್ನು ಅವನು ಅರ್ಥ ಮಾಡಿಕೊಂಡು ಬಣ್ಣಿಸಿದ್ದಾನೆ. ಅವರ ಭಾವನೆಗಳಲ್ಲಿ ಬೆರೆತು ಅವರ ಅಂತರಂಗವನ್ನು ಅರಿತು ಅವರ ಅನಿಸಿಕೆಗಳಿಗೆ, ಆಶೆ, ಆಶೋತ್ತರಗಳಿಗೆ ದನಿಕೊಟ್ಟಿದ್ದಾನೆ. ಚೆಲ್ಲಾಟ, ಚಕ್ಕಂದ, ಗಂಭೀರ, ಗಹನತೆ ಇಲ್ಲಿ ಬಾರದ ಭಾವವಿಲ್ಲ. ಎಲ್ಲ ತರಹದ ಹೆಣ್ಣು ಜೀವವೂ ಇಲ್ಲಿ ಕಣ್ಣು ಪಡೆದಿದೆ. ಬಾಲಕಿಯಿಂದ ಮುದುಕಿಯವರೆಗೆ, ಪಂಡಿತೆಳಿಂದ ಪಾಮರೆಯವರೆಗೆ, ರಾಗಿಣಿಯಿಂದ ವಿರಾಗಿಣಿಯವರಿಗೆ ಹಲವು ತರದ ಹೆಂಗಸರ ಮೂರ್ತಿಗಳು ಈ ಕಾವ್ಯ ಶರೀರದಲ್ಲಿ ಕಾಣಿಸಿಕೊಂಡಿವೆ" (ಅದೇ, ಪು.೧೭೫).

ಭರತನ ಹೆಂಡತಿಯರ ಮಧ್ಯ ಸವತಿ ಮತ್ಸರವೆಂಬುದು ಸುಳಿಯುವುದಿಲ್ಲ. ಹೀಗೆ ಕಾವ್ಯ ಬೆಳೆಯುತ್ತಾ ಹೋಗುತ್ತದೆ. ಕವಿ ಸನ್ನಿವೇಶಕ್ಕೆ ತಕ್ಕಂತೆ ಸಂಭಾಷಣೆಯನ್ನು ರಸವತ್ತಾಗಿ ಹೇಳುತ್ತಾ ಹೋಗಿದ್ದಾನೆ. ಬಾಳಿನ ಎಲ್ಲಾ ಮುಖ್ಯಭಾಗಗಳನ್ನು ಕವಿ ತನ್ನದೇ ಆದ ಶೈಲಿಯಲ್ಲಿ ನಿರೂಪಿಸಿದ್ದಾನೆ.

ಪುರಾಣ ಪ್ರಸಿದ್ಧವಾದ ಇತಿಹಾಸದ ಪಾತ್ರದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿ ನೂರಾರು ಹೊಸ ಅಂಶಗಳನ್ನು ಅದಕ್ಕೆ ಸೇರಿಸಿ ಭರತ ಚಕ್ರವರ್ತಿಯ ಕಥೆಯನ್ನು ಭರತೇಶವೈಭವವನ್ನಾಗಿಸಿದ್ದಾನೆ ರತ್ನಾಕರ. ಯುದ್ಧಕ್ಕ ಸಿದ್ಧನಾಗಿ ಬಂದ ಬಾಹುಬಲಿಯು ತನ್ನ ಅಣ್ಣ ಭರತನನ್ನು ಸಂಧಿಸಿದಾಗ ಯುದ್ಧದ ಬದಲು ಭರತನು ಹೇಳುವ ಹಿತವಚನಗಳು.

- ಮನಸಿಜ ಕೇಳಣ್ಣ ನಿನಗೆನಗಿಂದು ದು
ರ್ಮನದಿಂದ ಜಗಳವಪ್ಪುದಕೆ
ಘನವೇನು ಹೇಳು ನಿಷ್ಕಾರಣ ಕದನವ
ಜನಪರೆಸಗುವರೆಯೆಂದ. (ರಾಜೇಂದ್ರ ಗುಣವಾಕ್ಯ ಸಂಧಿ)

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

- ನಿನ್ನೊಡವೆಯ ನಾನು ಕೊಂಡುದಿಲ್ಲಣ್ಣ ನೀ
ನೆನ್ನೊಡವೆಯ ಕೊಂಡುದಿಲ್ಲ
ಮುನ್ನಯ್ಯನಿರಿಸಿದಂದದಿ ರಾಜ ಯುವರಾಜ
ಸನ್ನಾಹದೊಳಗಿರ್ದವಲ್ತೆ. (ರಾಜೇಂದ್ರ ಗುಣವಾಕ್ಯ ಸಂಧಿ)

- ನುಡಿಯಲ್ಲಿ ನಾ ನಿನ್ನ ಬಿಟ್ಟಾಡಿದೆನೆ ನನ್ನ
ಪಡೆಯೊಳಗೊಬ್ಬ ರಾಡಿದರೆ
ಒಡಹುಟ್ಟಿದವನ ನೋಡುವೆನೆಂದು ಬರಹೇಳು
ಫಡ ಹುಸಿಯೆಂಬರೆ ಅಪ್ಪ. (ರಾಜೇಂದ್ರ ಗುಣವಾಕ್ಯ ಸಂಧಿ)

- ನಾನಿಷ್ಟು ನಿನ್ನಿಂದ ಹಿರಿಯನಾದುದರಿಂದ
ಸೇನೆಗೆ ಬರವೇಳ್ದನೈಸೆ
ನೀನೆನಗಜ್ರನಾದರೆ ನೀನಿರ್ದ
ಸ್ಥಾನಕೆಯ್ದದೆ ತಡೆದಿಹೆನೆ. (ರಾಜೇಂದ್ರ ಗುಣವಾಕ್ಯ ಸಂಧಿ)

- ನನ್ನ ಗೆದ್ದುದರಿಂದ ನಿನಗೆ ಕೀರ್ತಿಯೆ ಹೇಳು
ನಿನ್ನ ಗೆಲ್ವೆನಗೊಂದು ಜಸವೆ
ಪನ್ನಗ ನರಸುರ ಲೋಕದುತ್ತಮರು ಛೀ
ಯೆನ್ನರೆ ಯೋಚಿಸಿ ನೋಡು. (ರಾಜೇಂದ್ರ ಗುಣವಾಕ್ಯ ಸಂಧಿ)

- ಕೇಳಣ್ಣ ಚಕ್ರವ ಬಯಸಿತಿಲ್ಲಾನು ಶ
ಸ್ತ್ರಾಲಯದೂಳು ತಾನೆ ಹುಟ್ಟಿ
ಏಳಿಸಿ ನಾಡ ಸುತ್ತಿಸಿತು ನಿಮ್ಮೆಲ್ಲರ
ಆಲಿಗೆ ನೋವಾಗುವಂತೆ. (ರಾಜೇಂದ್ರ ಗುಣವಾಕ್ಯ ಸಂಧಿ)

ಹೀಗೆ ಇನ್ನು ಹಲವಾರು ಮೃದುವಚನಗಳನ್ನು ಬಾಹುಬಲಿಯ ಮನಕರಗುವಂತೆ ಭರತನು ಆಡುತ್ತಾನೆ. ನಮ್ಮ ಯುದ್ಧ ಜಗತ್ತಿಗೆ ಒಂದು ದ್ರೋಹ ಶಾಸನವನ್ನು ಬರೆಸಿದ ಹಾಗೆ ಆಗುತ್ತದೆ ಎಂದು ಹೇಳುತ್ತಾನೆ.

ಈ ಮಾತುಗಳಿಂದ ಬಾಹುಬಲಿಗೆ ಬಂದಿದ್ದ ಕೋಪವೆಲ್ಲ ಶಮನವಾಗುತ್ತದೆ. ತಾನು ಎಸಗುತ್ತಿದ್ದ ಪಾಪಕ್ಕೆ ಪ್ರಾಯಶ್ಚಿತ್ತ ಪಡುತ್ತಾನೆ. ತನ್ನ ಮನದಲ್ಲಿ ಕೊರಗುತ್ತಾನೆ. ಗರುಡ ಮಂತ್ರಕೆ ವಿಷವಿಳಿದಂತೆ ಭರತನ ವಾಕ್ಯದಿಂದ ಕೋಪ ಶಮನವಾಗುತ್ತದೆ.

- ಪಾಪಿ ನಾನೆನ್ನಣ್ಣಗಿದಿರಾಗಿ ಕುಲಕೆ ಲೋ
ಕಾಪವಾದವ ತಂದೆನಕಟ
ಕೋಪ ಗರ್ವಗಳಾರ ಕೆಡಿಸವೆಂದಾ ಪುಷ್ಪ
ಚಾಪ ತನ್ನೊಳು ಮರುಗಿದನು. (ರಾಜೇಂದ್ರ ಗುಣವಾಕ್ಯ ಸಂಧಿ)

- ನೀಲವೇಳ್ಪಾಗ ನಿನ್ನಣ್ಣ ನಿನ್ನಣ್ಣನೆಂ
ದೋತೆಲ್ಲರೊರೆವಾಗ ನಾನು
ಆತನೀತನು ಚಕ್ರಿಯೆಂದೆನಗ್ರಜನೆಂಬ
ಮಾತನಾಡಿದನೆ ಹಾಯೆಂದ. (ರಾಜೇಂದ್ರ ಗುಣವಾಕ್ಯ ಸಂಧಿ)

- ಲೋಕದ ಮುಂದಣ್ಣ ಸೋಲವೆಂದನು ನೂಕು
ತಾಕಾಯ್ತು ಚಕ್ರಕೆನ್ನಿಂದ
ತೂಕವೆ ನನಗಿದು ಲಘುತೆಯೆಂದಾತ್ಮನಿ
ರಾಕರಣೆಯ ಮಾಡಿಕೊಂಡ. (ರಾಜೇಂದ್ರ ಗುಣವಾಕ್ಯ ಸಂಧಿ)

- ದೀಕ್ಷೆಗೆಯ್ದುವುದೆ ಲೇಸೆಂದೆದೆಯಾಳು ನೆನೆ
ದಿಕ್ಷುಕೋದಂಡನಣ್ಣನನು
ಈಕ್ಷಿಸದೆಡೆಬಲದತ್ತ ನೋಡಿವನು ಶಾಂ
ತಾಷೆಯೊಳೊಮ್ಮೆ ಪಾಯ್ದುಳವ. (ರಾಜೇಂದ್ರ ಗುಣವಾಕ್ಯ ಸಂಧಿ)

- ಹೀಗೆ ತಾನು ಮಾಡುತ್ತಿದ್ದ ಕೆಲಸಕ್ಕ ಪಶ್ಚಾತ್ತಾಪವಾಗಿ ದೀಕ್ಷೆ ಕೈಗೊಳ್ಳುತ್ತಾನೆ.

ಭರತನು ತನ್ನ ತಮ್ಮನಾದ ಬಾಹುಬಲಿಯನ್ನು ಕಾಣಲು ಪೌದನಾಪುರದ ಬಳಿ ಬೀಡುಬಿಟ್ಟಿರುತ್ತಾನೆ. ಆಗ ಆ ದಿನ ರಾತ್ರಿ ಅಲ್ಲಿರುವ ಸೈನಿಕರ ಮಧ್ಯ ನಡೆಯುವ ಸಂಭಾಷಣೆ.

- ಭರತೇಶ ಸಜ್ಜೆವನೆಯೊಳೊರಗಿದನಂದಿ
ನಿರುಳ ಮೂರನೆಯ ಜಾವದೊಳು
ಪರಮಾತ್ಮಯೋಗದೊಳಿದ್ದನಷ್ಟರೊಳೊಂದು
ಸರಸಾರ್ಥ ಹುಟ್ಟಿತೇನೆಂಬೆ. (ಕಟಕ ವಿನೋದ ಸಂಧಿ)

- ಮರನಲುಗದ ಮಾತುಗುಟ್ಟದ ಹೊತ್ತದು
ತೆರೆನಿಂದ ಕಡಲಂತೆ ಕಟಕ

ಪರವಶವಾಗಿದ್ದುದಿಬ್ಬರೆಚ್ಚತ್ತು ಭೂ
ವರನನಿಂತೆನುತಿದ್ದರಾಗ. (ಕಟಕ ವಿನೋದ ಸಂಧಿ)

- ಹನಿಗೂಡಿ ಹಳ್ಳಿ ನಾರೂಡಗೂಡಿ ಹಗ್ಗವೆಂ
ಬನುವಿನೊಳ್ಪೆಡೆಗೂಡಿ ಚಕ್ರಿ
ಘನತೆವೆತ್ತನು ಸೇನೆ ಹೊರತಾದವರಿವನೊಬ್ಬ
ಮನುಜನಲ್ಲವೆಯೆಂದರವರು. (ಕಟಕ ವಿನೋದ ಸಂಧಿ)

ವ್ಯಕ್ತಿ-ವ್ಯಕ್ತಿಗಳ ಮಧ್ಯದ ಮಾತುಗಳನ್ನು ನೋಡಬಹುದು.

ಬಾಹುಬಲಿ ದೀಕ್ಷೆಗೆ ಹೋಗುವೆ ಎಂದು ಹೇಳಿದಾಗ ಭರತ ಪರಿ ಪರಿಯಾಗಿ ಬೇಡಿಕೊಂಡರೂ ಬಾಹುಬಲಿ ಒಪ್ಪಲೊಲ್ಲ. ಆಗ ಅಲ್ಲಿ ನಡೆಯುವ ಸಂಭಾಷಣೆ :

- ದೀಕ್ಷೆಗೆಯ್ದಲದೇಕೆ ಭಂಗವೇನಾಯ್ತು ಕ
ಟಾಕ್ಷಿಸಿ ನುಡಿದೆನೆ ನಿನ್ನ
ಮೋಕ್ಷಕಾರ್ಯವ ಮುಂದೆ ಯೋಚಿಸಿಕೊಂಬವಿಂ
ದೀ ಕ್ಷೋಭೆ ಬೇಡಪ್ಪಯೆಂದ. (ಚಿತ್ತಜನಿರ್ವೇಗ ಸಂಧಿ)

- ಭಂಗವಿಲ್ಲೆನಗೆ ದೇವರಿಗೊಡ್ಡಿ ನಿಂದಾಜಿ
ರಂಗದಿ ಲಘುತೆದೋರಿದೆನು
ಭುಂಗುರಕರ್ಮತಂತ್ರದಿ ನೊಂದೆನೆನ್ನಂತ
ರಂಗ ಹೇಸಿತು ಪೊಪೆನೆಂದ. (ಚಿತ್ತಜನಿರ್ವೇಗ ಸಂಧಿ)

- ಮುನ್ನೆದ್ದರರುವರು ತೊಂಬತ್ತುಮೂವರು
ನಿನ್ನೆ ಹೋದರು ನೀನು ಹೋಗೆ
ಭಿನ್ನಗಾಗದೆಯೆನ್ನ ಭಾಗ್ಯ ಬೇಡಣ್ಣ ನೀ
ನನ್ನ ನುಡಿಯ ಮನ್ನಿಸೆಂದ. (ಚಿತ್ತಜನಿರ್ವೇಗ ಸಂಧಿ)

- ಪುರುನಾಥನಾಣೆ ದೇವರ ಪಾದದಾಣೆ ಶ್ರೀ
ಗುರು ಹಂಸನಾಥನೆ ಸಾಕ್ಷಿ
ಇರನು ದೀಕ್ಷೆಗೆ ನನ್ನ ಕಳುಹಚಿತ್ತೈಸೆಂದು
ಚರಣಾಬ್ಜದೊಳು ಮಂಡೆಯಿಟ್ಟ. (ಚಿತ್ತಜನಿರ್ವೇಗ ಸಂಧಿ)

- ಕಂಬನಿ ಗುಳಗುಳನೊಕ್ಕವೇಳೇಳಣ್ಣ
  ನೀಂ ಬಯಸಿದುದಾಗಲೆಂದ
  ಇಂಬಿನೊಳೆದ್ದಾಗಲೆಂದೊಡಂಬಟ್ಟು ಪಾ
  ದಾಂಬುಜಕಿತ್ತ ಹೆಮ್ಮಗನ. (ಚಿತ್ತಜನಿರ್ವೇಗ ಸಂಧಿ)

ತಪಸ್ಸಿಗೆ ಹೊರಟ ಬಾಹುಬಲಿಯನ್ನು ಕುರಿತು ಅಲ್ಲಿ ನೆರೆದಿದ್ದ ಜನರಾಡಿದ ಮಾತುಗಳು.

- ಒಡೆಯನಿಗನುಕೂಲವಾದರೀ ಸ್ಮರನು ನ
  ಮ್ಮೊಡೆಯನು ಮೀರಿದಾಗಿದನು
  ಒಡೆಯನೆ ಯೆಂದಲ್ಲದೂರವ ಹೋಗಿ ಬೆಂ
  ಗೆಡೆಯಳಿಂತೆಂದರು ನಿಂದು. (ಚಿತ್ತಜನಿರ್ವೇಗ ಸಂಧಿ)

- ಸಿರಿಯ ಹೋಗಾಡಿ ಹೋಹರಸ ಕೇಳ್ನೀನೆಮ್ಮ
  ಭರತ ಚಕ್ರೇಶ್ವರಗೆರಗಿ
  ಇರದಾದೆ ಹೋಗು ಹೋಗಿನ್ನು ಭಿಕ್ಷೆಗೆ ನೀನು
  ತಿರಿವೂಡಾತನ ನಾಡೆ ಬೇಕು. (ಚಿತ್ತಜನಿರ್ವೇಗ ಸಂಧಿ)

- ಜಪಶಾಂತಿಯೊಳು ಹೋಗುತಿರ್ದನಾ ನುಡಿಗಿಷ್ಟು
  ಕುಪಿತದಿ ತಿರುಗಿ ನೋಡಿದನು
  ತಪಸಿಗೆಯ್ದುವಗೆ ಸೈರಣೆ ಮುಖ್ಯವೆಂದು ನಿ
  ರ್ಲಿಪಿತದಿ ನಡೆದನಾ ಮದನ. (ಚಿತ್ತಜನಿರ್ವೇಗ ಸಂಧಿ)

ಹೀಗೆ ಹಿಂದೆ ಇದ್ದ ವ್ಯಕ್ತಿಗಳು ಆಡಿದ ಮಾತುನಿಂದ ಬಾಹುಬಲಿಯ ಮನಃಕಷಾಯದಲ್ಲಿ ಹಾಗೆ ಉಳಿದು ಅದು ಅವನ ಮೋಕ್ಷಕ್ಕೆ ಅಡ್ಡಿಯಾಗುತ್ತಿತ್ತು. ಇದನ್ನು ತಿಳಿದ ಭರತ ಬಾಹುಬಲಿಗೆ ಹೇಳಿದ ಮನಃಕಷಾಯದಲ್ಲಿ ಕೊರೆಯುತ್ತಿದ್ದ ವಿಷಯವನ್ನು ಹೋಗಲಾಡಿಸಿದ ಸಮಾಧಾನದ ಮಾತುಗಳು.

- ಗುರುವೆ ನಿನ್ನಂತರಂಗದ ನೆಲೆಯನು ನಾನು
  ಪುರುನಾಥನೊಳು ಕೇಳಿ ಬಂದೆ
  ಧರೆ ನನ್ನದೆಂದು ನೆನೆವರೆ ಮಹಾತ್ಮ ಸ
  ರ್ವರು ಮುನ್ನ ಪಿಡಿದಾಳ್ದುದಲ್ತೆ. (ಶ್ರೇಣ್ಯಾರೋಹ ಸಂಧಿ)

- ಹಲಬರು ಮುನ್ನಾಳ್ದರಿಂದು ನಾನಾಳ್ವೆನಿ
  ನ್ನೊಲಿದು ಮುಂದೆನಿಬರಾಳುವರೂ

ಬೆಲೆವೆಣ್ಣಿನೆಂತಿರ್ದ ಭೂಮಿಯ ನನ್ನದೆಂ
ದೆಲೆ ಸುಬೋಧಾತ್ಮ ಯೋಚಿಪರೆ. (ಶ್ರೇಣ್ಯಾರೋಹ ಸಂಧಿ)

- ನೀನಿಳೆಯನು ತೃಣವೆಂದು ಬಿಸುಟು ಬಂದೆ
ನಾನಿದ ಬಿಡಲಾರದಾದೆ
ನೀನೀಗ ಗುರುವಾದೆ ಲಘುವಾದೆ ನಾನೇನೆ
ಮಾನ ಜಾರಿತು ಕೇಳ್ದು ಮುನಿಗೆ. (ಶ್ರೇಣ್ಯಾರೋಹ ಸಂಧಿ)

- ಝಾಂಪಿಪ ಶಲ್ಯಭೂತವ ವಾಕ್ಯಮಂತ್ರದಿ
ತಾಂ ಪೊರಮಡಿಸೆ ಚಕ್ರೇಶ
ತಂಪಾಯ್ತು ಚಿತ್ತ ತಳ್ಳಂಕ ಜಾರಿತು ಧ್ಯಾನ
ಸಂಪತ್ತು ಫಲಿಸಿತಾ ಮುನಿಗೆ. (ಶ್ರೇಣ್ಯಾರೋಹ ಸಂಧಿ)

- ಮೈಯ್ಯ ಬತ್ತಲೆ ಮಾಡಿ ಮನವ ಕತ್ತಲೆ ಮಾಡಿ
ಕೈಯ್ಯಿಕ್ಕಿ ನಿಂದನಾ ಮದನ
ಹುಯ್ಯಲನಾ ರಾಯ ಬಡಿಸಿದನೆಂಬಾಗ
ಸಯ್ಯಮವಾರದಿಬ್ಬರೊಳು. (ಶ್ರೇಣ್ಯಾರೋಹ ಸಂಧಿ)

ಹೀಗೆ ಭರತನ ಮಾತುಗಳಿಂದ ಬಾಹುಬಲಿಗೆ ಮೋಕ್ಷಕ್ಕೆ ದಾರಿಯಾಗುತ್ತದೆ.

ಬಾಹುಬಲಿ ದೀಕ್ಷೆ ತೆಗೆದುಕೊಂಡ ವಿಷಯ ತಿಳಿದ ತಾಯಿ ಯಶಸ್ವತಿದೇವಿ ಮರುಗಿದ ರೀತಿ.

- ಚಿಕ್ಕಣ್ಣ ದೀಕ್ಷೆಗೆಯ್ದಿದನೆ ಹಾ ಹಾ ನನ್ನ
ಚಿಕ್ಕನೆ ಮದವೆದ್ದು ಹೋಯ್ತೆ
ಹೊಕ್ಕಡ್ಡಗಟ್ಟಿ ತಡೆವರಿಲ್ಲದಾದರೆ
ಅಕ್ಕಟಯೆಂದಳಲಿದಳು. (ಚಿತ್ತಜನಿರ್ವೇಗ ಸಂಧಿ)

- ಇರುಳಾದುದಪ್ಪಕಾ ಯಿರುಳೆಲ್ಲ ಶೋಕಜಾ
ಗರವಿದ್ದರುದಯವಾಯ್ತಾಡನೆ
ಇರುಳೆ ಝುಂಝಾನಿಲನೆಂಬ ನಂಬುಗೆವಂತ
ಸ್ಮರಪುರಕೆಯ್ದಿ ಹೇಳಿದನು. (ಚಿತ್ತಜನಿರ್ವೇಗ ಸಂಧಿ)

- ಮಕ್ಕಳ ನೆನೆಯದೆ ಪೆಂಡಿರ ನೋಡದೆ
  ಲೆಕ್ಕಕೆ ತಾರದೆ ನನ್ನ
  ಚಿಕ್ಕಪ್ರಾಯದೊಳಿಂತು ದೀಕ್ಷೆಗೆ ಲಂಘಿಸ
  ತಕ್ಕುದೆ ನಿನಗೆ ಕಂದರ್ಪ. (ಚಿತ್ತಜನಿರ್ವೇಗ ಸಂಧಿ)

- ಜನವ ಮೋಹಿಪ ನಿನ್ನ ಸಿರಿಯೆತ್ತ ನೀನೆತ್ತ
  ಮುನಿವೇಷವಡೆವುದಿದೆತ್ತ
  ಕನಸ ಕಂಡಂತಾಯ್ತೆ ನಿನ್ನ ಸಂಪದವೆಂದು
  ಜನನಿ ಮರುಗಿದವಳಂಗಜನ. (ಚಿತ್ತಜನಿರ್ವೇಗ ಸಂಧಿ)

ಹೀಗೆ ತಾಯಿ ಮಗನಲ್ಲಿಟ್ಟಿರುವ ಪ್ರೀತಿ, ಮಮತೆಯನ್ನು ಕವಿ ಮನಕಲಕುವಂತೆ ತಾಯಿಯ ಆಕ್ರಂದನವನ್ನು ತೋರಿಸಿದ್ದಾನೆ.

ಆತನ ರಾಣಿಯರು ನೆನೆದು ಕೊರಗುತ್ತಾರೆ, ಗೋಳಿಡುತ್ತಾರೆ.

- ಪರವಶ ತಿಳಿದೆದ್ದು ಸ್ಮರನ ರಾಣಿಯರೈದೆ
  ಜರಿವುತ ಮಳಲೇರಿಯಂತೆ
  ಸುರಿವ ಕಂಬನಿಯಿಂದ ಹಲುಬಿದರೊಡನೆ ನ
  ಲ್ಲರನಗಲ್ದಾರು ಸೈರಿಪರು. (ಚಿತ್ತಜನಿರ್ವೇಗ ಸಂಧಿ)

- ನಲ್ಲ ಹಾ ಹಾ ನಮ್ಮ ಬಿಟ್ಟು ಹೋದ್ಯೆ ಕಬ್ಬು
  ವಿಲ್ಲ ಹಾ ಹಾ ನಮ್ಮ ತೂರೆದ್ಯೆ
  ಕೊಲ್ಲದೆ ಕೊಂದೆ ನೀನೆಮ್ಮನೆಂದಬಲೆಯ
  ರೆಲ್ಲರು ಹಳವಳಿಸಿದರು. (ಚಿತ್ತಜನಿರ್ವೇಗ ಸಂಧಿ)

- ಅಂಗನೆಯರ ಕೂಟ ಸಾಕಾಯ್ತು ನಿನಗೆ ಮು
  ಕ್ತ್ಯಂಗನೆಯಾಟ ಬೇಕಾಯ್ತೆ
  ಸಂಗರವೆಂಬೊಂದು ನೆವದೋರಿ ವಿಧಿ ನಿನ್ನ
  ಮುಂಗಡೆಗೊಯ್ದುದೆ ನೀರ. (ಚಿತ್ತಜನಿರ್ವೇಗ ಸಂಧಿ)

- ಲತೆಯೆ ನಂದನವೆ ತಂಗೊಳಸಿ ತಾವರೆಯ ಮಾ
  ರುತನೆ ಮತ್ತಾಳಿ ಕೇಳೆಮ್ಮ

ಪತಿಪೋಪ ದೆಸೆಗೆ ಪೋಪೆವು ಸುಖವಿಹುದೆಂದು
ಸತಿಯರೆದ್ದರು ಗೃಹದಿಂದ. (ಚಿತ್ತಜನಿರ್ವೇಗ ಸಂಧಿ)

ಬಾಹುಬಲಿಯ ಹಿಂದೆ ಅವನ ಮಡದಿಯರು, ತಾಯಿ ಎಲ್ಲರೂ ದೀಕ್ಷೆಗೆ ಹೊರಡುತ್ತಾರೆ. ಕವಿಯು ಶೃಂಗಾರವನ್ನು ಹೇಗೆ ರಸವತ್ತಾಗಿ ವರ್ಣಿಸುತ್ತಾನೊ ಹಾಗೆ ಮನಕರಗುವ ಸಂಗತಿಗಳನ್ನು ಮನಕಲಕುವಂತೆ ಚಿತ್ರಿಸುತ್ತಾನೆ. ಕವಿಯ ಕವಿತ್ವ ಅದ್ಭುತವಾದುದು.

ತಾಯಿ ತನ್ನನ್ನು ನೋಡಲು ತಾನು ಇದ್ದ ಅರಮನೆಗೆ ಬರುತ್ತಿರುವುದನ್ನು ತಿಳಿದು ಬಂದ ತಾಯಿಯನ್ನು ಆಧರಿಸಿ, ಪುತ್ರ ವಾತ್ಸಲ್ಯವನ್ನು ತೋರಿಸುತ್ತಾನೆ.

- ತೂಗು ಮಂಚದೊಳೊರಗಿದ ತಾಯ ಭರತೇಶ
  ತೂಗಿದನಂದು ತೊಟ್ಟಿಲೊಳು
  ರಾಗದೊಳಿಟ್ಟಾಕೆ ತೂಗಿದ ಸಾಲವ
  ತೂಗಿ ತಿದ್ದುವನೊಯಂಬಂತೆ (ಪಾರಾಣ ಸಂಧಿ)

ತಾಯಿಯನ್ನು ತೂಗು ಮಂಚದಲ್ಲಿ ಕೂರಿಸಿ ತೂಗುತ್ತಾನೆ ಭರತ.

ಹಿಂದೆ ಕಾವ್ಯಗಳಲ್ಲಿ ಪ್ರಾಸವನ್ನು ಕಾವ್ಯದಲ್ಲಿ ಅನಿವಾರ್ಯವಾಗಿ ತೆರೆಬೇಕಿತ್ತು. ಕವಿ ಈ ಕಾವ್ಯದಲ್ಲಿ ಹೆಚ್ಚಾನು ಹೆಚ್ಚಾಗಿ 'ಪ್ರಾಸ'ವನ್ನು ತರುವುದರಲ್ಲಿ ಯಶಸ್ವಿಯಾಗಿದ್ದಾನೆ.

- ಮತ್ತೆ ಕಿರಿದು ದೂರ ನಡೆದರು ಮುನಿಗಳಿ
  ನ್ನಿತ್ತ ಬಾರದಿರೆಂಬರೊಡನೆ
  ಇತ್ತ ಬಾರೆಂದೆನ್ನನುದ್ದರಿಸದೆ ದೇವ
  ರೊತ್ತರಿಪರೆ ಎಂದು ನುಡಿವ. (ಮುನಿಭಕ್ತಿ ಸಂಧಿ)

- ಚಿನ್ಮಯ ತತ್ವವ ಮುಟ್ಟಿ ವೀಣೆಯೊಳು ಕಿಂ
  ಚಿನ್ಮಧ್ಯೆ ಸೊಗಸಿ ಹಾಡುತಿರೆ
  ಮನ್ಮಥ ರೂಪನಾಲಿಸುತಿದ್ದನಿಲ್ಲಿಗೆ
  ಸನ್ಮಾನ ಸಂಧಿ ಸುಗಂಧಿ. (ಸನ್ಮಾನ ಸಂಧಿ)

- ಕಂಡನು ಬಾಗಿಲ ಮರೆಗೊಂಡ ಸತಿಯ ಪ್ರ
  ಚಂಡೆ ಬಾರೆನುತೆದ್ದು ಕುಳಿತ
  ಕೆಂಡವನುಗುಳ್ವ ಕೆಂಪಿನ ತುಟಿ ನಸುನಗೆ
  ಮಿಂಡೆಯಾಡುತ ಬಂದಳವಳು. (ಸನ್ಮಾನ ಸಂಧಿ)

- ಪತಿ ಹೊಲ್ಲ ಸತಿ ಲೇಸು ಪತಿ ಹೊಲ್ಲ ಪತಿ ಲೇಸು
  ಬತಿ ವಿಕೃತಿಗಳುಂಟು ಪರರ್ಗೆ
  ಪತಿ ಲೇಸು ಸತಿಯಾರು ಲೇಸು ಲೇಸೆಂಬಂತೆ
  ನುತಿಮೆತ್ತರಾರು ನಿಮ್ಮಂತೆ. (ಅರಗಿಳಿಯಾಳಾಪ ಸಂಧಿ)

ಕವಿ ಪದ್ಯದಲ್ಲಿ ನುಡಿಗಳ ಪುನರಾವರ್ತನೆಯನ್ನು ಕೆಲವು ಕಡೆ ಕಂಡುಬರುತ್ತದೆ. ಇದು ಪದ್ಯವನ್ನು ಹಾಡಿದಾಗ ಕಿವಿಗೆ ಇಂಪೆನಿಸುತ್ತದೆ.

- ರಾಜರ ದೇವ ರಾಜಾದಿತ್ಯ ರಾಜಾಧಿ
  ರಾಜರ ರಾಜನಾ ಚಕ್ರಿ
  ರಾಜಮಂದಿರಕೋಜೆಯಿಂದಡಿಯಿಟ್ಟನು
  ರಾಜವಿಡಾಯ ಬಿಮ್ಮನಲು. (ಆರೋಗಣೆ ಸಂಧಿ)

- ಹಂಸಕಲಾಂಭೋಜ ಹಂಸನೆನಿಪ ನೃಪ
  ಹಂಸನ ಸಮ್ಮುಖದಲ್ಲಿ
  ಹಂಸ ಮಂಡಳಿಯೆಂಬ ನಾಟ್ಯವ ತೊಡಗಿದ
  ರೇಂ ಸೊಬಗಿಹುದೂಯಿನ್ನಲ್ಲಿ. (ಉತ್ತರನಾಟಕ ಸಂಧಿ)

- ಬೆಳಗಿನ ಬೊಂಬೆ ಬೆಳ್ದಿಂಗಳ ಬೊಂಬೆ ತಿಂ
  ಗಳ ಬೊಂಬೆ ಚಿನ್ನದ ಬೊಂಬೆ
  ತಿಳಿವಿನ ಬೊಂಬೆ ಬೋಧದ ಬೊಂಬೆಯೆಂದಾತ್ಮ
  ಕಲೆಯ ಕನ್ನಡಿಸಿ ಹಾಡಿದರು. (ಉತ್ತರನಾಟಕ ಸಂಧಿ)

- ನೆಯ್ದಿಲಂದದ ಕಂಪು ನೆಯ್ದಿಲುವಣ್ಣ ಕ
  ನ್ನೆಯ್ದಿಲುಗಣ್ಣ ಪೆಣ್ಣುಗಳು
  ನೆಯ್ದಿಲುಗೊಳನೆದ್ದು ಕುಣಿವಂತೆ ಕೆಲಬರು
  ಮೆಯ್ದೋರಿ ನೃತ್ಯವಾಡಿದರು. (ಉತ್ತರನಾಟಕ ಸಂಧಿ)

- ಬೇಡವೆಂದರು ಬೇಡ ಕಳುವುದು ಬಿಡುವನೆ
  ಬೇಡವಣ್ಣದ ತುಂಬಿವಿಂಡು
  ಬೇಡವೆಂದರು ಬರುತಿರ್ದುದು ತ್ಯಾಗಿಯ
  ಬೇಡವ ಯಾಚಕರಂತೆ. (ಮುನಿಭಕ್ತಿ ಸಂಧಿ)

ಹೀಗೆ ಕವಿ ಪುನರುಕ್ತಿಯನ್ನು ಬಳಸಿದ್ದನ್ನು ನೋಡಬಹುದು. ಯಾವುದೇ ಬಗೆಯ ಮಾತುಗಳನ್ನು, ಸನ್ನಿವೇಶಗಳನ್ನು ತೆಗೆದುಕೊಂಡು ನೋಡಿದರೆ ಅದರಲ್ಲಿ ಕವಿ ಬಳಸಿದ ಸುಂದರವಾದ ವಾಕ್ಯಗಳು ಮನಮುಟ್ಟುವಂತಿವೆ. ಅವನ ನುಡಿ ಜೋಡಣೆಯಲ್ಲಿ ಯಾವುದೇ ತವಕವಿಲ್ಲ, ಭಾವೋದ್ವೇಗವಿಲ್ಲ, ಗಲಿಬಿಲಿಯಿಲ್ಲ, ತಡಬಡಿಕೆಯಿಲ್ಲ, ಎಲ್ಲವನ್ನು ಹಾಡುಗಬ್ಬವೆನಿಸಿದ ಕಾವ್ಯವನ್ನು ಹಾಡುತ್ತಾ ಹಾಡುತ್ತಾ ಕವಿ ಮುಂದೆ ಸಾಗಿದ್ದಾನೆ. ಯಾವುದೇ ವಸ್ತುವನ್ನು ತೆಗೆದುಕೊಂಡರು ಅದನ್ನು ಒಟ್ಟಾಗಿ ಸೇರಿಸಿ ಸುಮಧುರ ಸಾಂಗತ್ಯವಾಗಿ ಮಾಡಿದ್ದಾನೆ. ಎಂಥ ಶಬ್ದಗಳನ್ನು ಪದ್ಯ ಸರಣಿಗೆ ಎಷ್ಟು ಚಮತ್ಕಾರವಾಗಿ ಅನುಗೊಳಿಸುತ್ತಾನೆ.

ಕಾವ್ಯದಲ್ಲಿ ಕವಿ ಶಿಶುಪ್ರಯೋಗಗಳನ್ನು ಬಳಸಿರುವುದನ್ನು ಗಮನಿಸಬಹುದು. ಭರತನ ಮಗ ಅರ್ಕಕೀರ್ತಿಯ ಮಾತುಗಳಲ್ಲಿ ಇದನ್ನು ಕಾಣಬಹುದು.

- ಆದಿತೀರ್ಥಕರ ಎನ್ನರ್ಕಕೀರ್ತಿಯಂ
  ದೋದಿಸುವನು ತನ್ನ ಮಗಗೆ
  ಆದಿಂಕರನೆಂಬನಾ ಬಾಲನೆದಕೆ ವಿ
  ನೋದದಿ ನಗುವನಾ ರಾಯ (ಆದಿರಾಜೋದಯ ಸಂಧಿ)

- ಅಣ್ಣಚಿದಂಬರಪುರುಷ ಎನ್ನೆಂದಾಗ
  ಬಣ್ಣಿಸಿ ಕಲಿಸಿಕೊಡುವನು
  ಚಿನ್ನ ಚಿಂಬರಪೂಸಯೆಂಬನದಕೆ ಹೊಟ್ಟೆ
  ಹುಣ್ಣಾಗೆ ನಗುವನಾ ಚಕ್ರಿ. (ಆದಿರಾಜೋದಯ ಸಂಧಿ)

ಇಲ್ಲಿ 'ಆದಿತೀರ್ಥಂಕರ' ಎಂಬುದನ್ನು ಮಗು ಉಚ್ಚರಿಸುವುದು 'ಆದಿಂಕರ'ವೆಂದು ಮತ್ತು 'ಚಿದಂಬರ ಪುರುಷ' ಎನ್ನುವುದಕ್ಕೆ 'ಚಿಂಬರಪೂಸ' ಎಂದು ಹೇಳುತ್ತದೆ.

ಸಂಸ್ಕೃತ ಪ್ರಯೋಗಗಳನ್ನು ಸಹ ಕವಿ ಸ್ವಲ್ಪಮಟ್ಟಿಗೆ ಕಾವ್ಯದಲ್ಲಿ ತಂದಿದ್ದಾನೆ. ಅಲಂಕಾರಗಳು, ಅಷ್ಟಾದಶ ವರ್ಣನೆಗಳು ಸಮಾಸಗಳನ್ನು ರತ್ನಾಕರನು ಕಾವ್ಯದಲ್ಲಿ ತರಲು ಇಷ್ಟಪಡುವುದಿಲ್ಲ. ಸಂಸ್ಕೃತ ಪದಗಳನ್ನು ಅಲ್ಲಿ, ಇಲ್ಲಿಯೋ ಎಂಬಂತೆ ತಂದಿದ್ದಾನೆ.

"ಡುಂಡುಭ ಮಂಡಲೋದ್ದಂಡ ಜಿಹ್ವಾಸ್ತುತಿ ಡಿಂಡಿಮ ಮಂಪಿತಾಸ್ಥಾನ.

"ತುಂಗ ತುರಂಗ ಗಂಗಾಂಗ ಶೈತ್ಯ ಭೂಗುರೀಕೃತ ವಾಕ್ಯಸಂಗಾ" ಎಂಬುವು ಪೂರ್ವ ಸಂಸ್ಕೃತದಲ್ಲಿಯೇ ಕವಿ ಹೇಳಿರುವುದು ವಂದನಾಷ್ಟಕದಲ್ಲಿ ಮಾತ್ರ. ಕವಿ ಭರತನನ್ನು "ಶೃಂಗಾರ ಸಿದ್ಧ"ನನ್ನಾಗಿಸಿ ತಾನು ಶೃಂಗಾರ ಕವಿಯಾಗಿದ್ದಾನೆ. ಸುಂದರವಾದ ವಸ್ತುಗಳನ್ನು ವರ್ಣಿಸಲು ಅನೇಕ ಉಪಮೆಗಳನ್ನು ಕವಿ ಇಲ್ಲಿ ತಂದಿದ್ದಾನೆ.

- ಉದಯಗಿರಿಯ ಮೇಲೆ ಮೆರವ ಭಾನುವಿಗೆ
  ಮತ್ತಿದಿರಾದ ಪ್ರತಿ ಸೂರ್ಯನಂತೆ.
- ಅಂಬುಜವೆಲ್ಲವು ರವಿಯ ನೋಳ್ಪಂತೆ ನೀ
  ಲಾಂಬುಜ ನೋಳ್ಪಂತೆ ಶಶಿಯಾ
- ರಾಯನಿದ್ದನು ರತ್ನಹಾರದ ನಡುವಣ
  ನಾಯಕರತ್ನದಂದದೊಳು
- ಗಜ ತನ್ನ ಕರಿಣಿಯ ಕರಪಿಡಿವಂತೆ ಭೂ
  ಭುಜ ಪಿಡಿದನು ಕೈಯನವಳ
- ತಾವರೆಯೇರಿದ್ದ ಕಳಹಂಸ ಮತ್ತೊಂದು
  ಹೂವಿನ ಬನಕೆ ಹೋಹಂತೆ.
- ಸಂಜೆಗೆಂಪೊಲೆವಂತೆ ತೆರೆ ತೊಲಗಿತು ಕಣ್ಗೆ
  ಕಾಂಜಾಕ್ಷಿಯರು ಕಾಣಿಸಿದರು.
- ಪಟಗಾರನುರೆ ಸೂತ್ರವಿಡಿದಿದ್ದರೂ ಗಾಳಿ
  ಪಟ ಗಗನದೂಳಾಡುವಂತೆ
- ಪಾದದಿಂದೂದೆನು ಸೋತು ಕಾಲ್ಗೆರಗಿದ
  ಪಾದರಿಯನು ನೂಕುವಂತೆ.
- ಕೆಡಲನೊತ್ತದೆ ಕೆಡಲದಕವ ತುಂಬುವ
  ಕೊಡನನೊತ್ತುವರಂತೆ.
- ಮದನನರ್ತಿಗೆ ಮೇರುಗಿರಿಯನೇರಲು ತನ್ನ
  ಸುದತಿಯರರಿಸ ಬಹಂತೆ
- ನೀಲದ ಪುತ್ತಳಿಯಂತೆ
- ಮಾಣಿಕ ಬೊಂಬೆಯೆಂಬಂತೆ

ಉಪಮೆಗಳನ್ನು ಹೆಚ್ಚು ಭಾಗ ಕವಿಯು ಕಥಾನಾಯಕನನ್ನು ವರ್ಣಿಸಲು ಉಪಯೋಗಿಸಿರುವುದನ್ನು ನೋಡಬಹುದು. ಉಪಮೆಗಳನ್ನು ಸಂದರ್ಭೋಚಿತವಾಗಿ ಕವಿ ಬಳಸಿರುವುದು ಕಂಡುಬರುತ್ತದೆ. ಕವಿ ಸುಂದರವಾದ ವಸ್ತುಗಳಿಗೆ ಹೋಲಿಸಿದ್ದಾನೆ. ಅಂದರೆ 'ಭಾನು' 'ಶಶಿ' 'ರವಿ' 'ರತ್ನಹಾರ' 'ಹಂಸ' 'ಸಂಜೆ ಕೆಂಪು' ಹೀಗೆ ಹೋಲಿಕೆ ಕೊಟ್ಟಿದ್ದಾನೆ.

ಕಾವ್ಯದಲ್ಲಿ ಗಾದೆಮಾತುಗಳನ್ನು ಕವಿ ಬಳಸಿದ್ದಾನೆ. ಗಾದೆಗಳನ್ನು ಹೆಚ್ಚಾಗಿ ಬಳಸಲು ಕಾರಣವೆಂದರೆ ಇವು ಜನಸಾಮಾನ್ಯರ ಮೇಲೆ ಶೀಘ್ರವಾಗಿ ಪರಿಣಾಮಬೀರುತ್ತವೆ. ಹಿರಿಯರು ಮಾಡಿದ (ಜಾನಪದರು) ಈ ಗಾದೆಗಳು ನೀತಿಯನ್ನು ಹೇಳುತ್ತವೆ. "ವೇದ ಸುಳ್ಳಾದರೂ ಗಾದೆ ಸುಳ್ಳಾಗದು" ಎಂಬುದನ್ನು ನಂಬಿದ್ದ ಒಂದು ಕಾಲದಲ್ಲಿ ಈ ಗಾದೆಗಳು ಹೆಚ್ಚು ಪ್ರಚಲಿತಕ್ಕೆ ಬಂದವು. ಹಳ್ಳಿಯ ಜಾನಪದದಲ್ಲಿ ಗಾದೆಗಳನ್ನು ಹೆಚ್ಚಾಗಿ ಬಳಸುತ್ತಿದ್ದರು. ರತ್ನಾಕರನು ಸಹ ನಡುಗನ್ನಡ ಸಾಹಿತ್ಯದ ಹಾಡುಗಬ್ಬವಾದ ತನ್ನ ಕಾವ್ಯದಲ್ಲಿ ಗಾದೆಗಳನ್ನು ಬಳಸಿದ್ದಾನೆ. ಮಹಿಳೆಯರಿಗೂ ತನ್ನ ಕಾವ್ಯ ಅರ್ಥವಾಗಬೇಕು ಎನ್ನುವುದು ಕವಿಯ ಅಭಿಲಾಷೆ.

- ಮೂಗರು ಕಂಡ ಕನಸಿನಂತೆ ಮೆರೆವಾತ್ಮ
  ಯೋಗವನಾರಾಡ ಬಹುದು.
- ಹನಿಗೂಡಿ ಹಳ್ಳ ನಾರೊಡಗೂಡಿ ಹಗ್ಗವೆಂ
  ಬನುವಿನೊಳ್ಪೆಡೆಗೂಡಿ ಚಕ್ರಿ.
- ಚಿಂತೆಯೆ ಮುಪ್ಪು ಸಂತೋಷ ಜವ್ವನವೆಂಬ
  ಸಂತಾನ ವಾಕ್ಯವುಂಟಣ್ಣ.
- ಇಲ್ಲದ ಬಡವಗೆ ಬಲುರಾಜ್ಯ ಬಂದಂತೆ
  ಸಲೀಲೆವೆತ್ತು ನೋಡಿದರು.
- ಹೆಣ್ಣಿಗೆ ಸಿಕ್ಕ ಬಾಳುವ ಬಾಳು ನೊಣ ಹಾರಿ
  ಯೆಣ್ಣೆಯೊಳಗೆ ಬಿದ್ದ ರೀತಿ|
- ಮಾತು ತಾನೇ ಮನದೊಳಗೆ ಸೂಚಿಸುವುದು.
- ಮಹಾತ್ಮನಲ್ಲ ಕೋಪಿಗನು
- ಅರ್ಕನೊತ್ತಿನೊಳಿದ್ದು ದೀಪವೇತಕೆ
- ಕಂಡಲ್ಲದಾವುದು ಸೂಗಸಲ್ಲ ಬಹು ಹೆಮ್ಮೆಗೊಂಡಿರ್ದರೆ.
- ಸ್ವಾಮಿಯಂತಂತೆ ಪರಿವಾರ
- ಹೆಣ್ಣು ಕೊಟ್ಟೆಯಾ ಚಿನ್ನಕೊಟ್ಟೆಯಾ ಎಂದುಂಟು
- ಮದನಗೆ ವಂಚನೆ ಸಹಜ.
- ಮಗಗಾದ ಲೀಲೆ ತಂದೆಗೆ ಬಂದ ಶೋಲೆ

- ಹುರಿದು ಬಿತ್ತಿದ ಬೀಜ ಮೊಳೆವುದೆ.
- ಕುವರರಿಲ್ಲದನ ಸಂಪತ್ತು ವಿಪತ್ತು.
- ಹರೆಗಳೆದರೆ ಸರ್ಪ ನಿರ್ವಿಷನೆ
- ಗರಡಿಯ ಗುರು ರಣರಂಗಕೆ ಬಪ್ಪನೆ
- ಬಿಲ್ಲು ಕೊಂಕಲು ನಿನ್ನ ನಡೆಡೊಂಕೆ
- ಗರುಡಮಂತ್ರಕೆ ವಿಷವಿಳಿವಂತೆ.

ಹೀಗೆ ಕವಿಯ ಶೈಲಿಯನ್ನು ಜನಪದ ಶೈಲಿಯಾಗಿಯೂ ನೋಡಬಹುದು. ಗಾದೆಗಳಿಂದ ನೀತಿ ಹೇಳುವುದು ಜನಪದರಲ್ಲಿ ಸಹಜ ಮತ್ತು ಹೆಚ್ಚು.

- ಹೆಣ್ಣು ಹೊನ್ನು ಮಣ್ಣು ವಿಡಿದಾತ್ಮರೆಲ್ಲರು
  ಮಣ್ಣುವಿಡಿದ ಲೋಹದಂತೆ
- ಬಡವ ಸೆರೆತು ನೋಡಿ ತಿವಿಯಿಸಿಕೊಂಡ ನಾ
  ಣ್ನುಡಿಗೆಡೆಯಾಗಲು ಬಹುದೆ.
- ಬೀಜಕೆ ಬಿಡುವುದೆ ಹೀಚಿನೂಳರಿಯೆಂಬು
  ದೀ ಜಗದೂಳಗುಳ್ಳ ಗಾದೆ.
- ಎಳೆಯೆಂಬ ರಾಯಗೆ ತುಳಿಯೆಂಬ ಮಂತ್ರಿಯೆಂ
  ದಿಳೆಯೊಳಾಡುತ ಗಾದೆಯಿಂದು.
- ರಾಜನ ಮುಂದೆ ಭೃತ್ಯಗೆ ಗುರುವಿನ ಮುಂದೆ
  ರಾಜಗೆ ಹಮ್ಮು ಸಲ್ಲೆಂಬ
- ರಾಜನೀತಿಯನರಿದಾ ರಾಜ ನಡೆದನು
  ರಾಜವಿಡಾಯವ ಬಿಟ್ಟು
- ಗೂಳಿ ನಡೆವ ಹೆಜ್ಜೆ ತೋರುವುದಲ್ಲದೆ
  ಗಾಳಿಯ ಹೆಜ್ಜೆ ತೋರುವುದೆ.
- ಗಿಳಿ ಬಿಳಿದಾದರೆ ಚೋದ್ಯವೆಂಬರು ಹಂಸ
  ಬಿಳಿದಾಗೆ ಚೋದ್ಯವೆ ಜಗಕೆ

- ಊರಿಗೆಯ್ದಿದ ಮಾರಿ ಬೀರಸೆಟ್ಟಿಯ ಹೊಯ್ದು
  ದಾರಿಕಾರರ ಗಾದೆಯಂತೆ.
- ಕವುದಿಗೆ ಹಲ್ಲು ಬಂದಂತಾಡಿಸುವುದು ಕಾ
  ಲವೂ ಕರ್ಮವೂ ಹಂಸನಾಥ
- ಬಿಲ್ಲು ಕೊಂಕಲು ನಿನ್ನ ನಡೆ ಡೊಂಕೆ.
- ಊರ ನೋಡುವೆನೆಂದು ಹೊರಗೇರಿಗೈತಂದು
  ಊರೆಂತುಟಿಹುದೂಯೆಂಬಂತೆ
- ಕೊಡುವ ಕೈ ಮೇಲು ಕೊಂಬುವ ಕೈ ಕೆಳಗೆ
- ಅರಸು ಪಿಡಿಯೆ ತೃಣ ಪರ್ವತವಹುದು.
- ಪುಣ್ಯವಂತರು ಮುಟ್ಟೆ ಮಣ್ಣು ಹೊನ್ನಹುದು.
- ಮುರಿದ ಚಿತ್ತವನಿನ್ನು ಮೊನೆ ಮಾಡಲಹುದೇ?
- ಮೊಲೆಯ ಮೇಲಿದ್ದೂ ಯೋಗಿಗಳುಂಟು
  ಶಿಲೆಯ ಮೇಲಿಹ ಮೋಹಿಯುಂಟು.

ಹೀಗೆ ಈ ಗಾದೆಗಳು ಒಂದು ಕಡೆ ನೀತಿ ನುಡಿಗಳು, ಅನುಭವದಿಂದ ಹಿರಿಯರು ಹೇಳಿದ ಮಾತುಗಳು ಆಗಿವೆ.

"ರತ್ನಾಕರನ ಕನ್ನಡಕ್ಕೆ ಖಂಡಿತವಾಗುಂಟು ಬಲ ಬಣ್ಣ ಒಪ್ಪು ನೆಪ್ಪು ವರ್ಚಸ್ಸು ತೇಜಸ್ಸು. ಆದರೆ ಕಣ್ಣು ಕೋರೈಸುವ ಒಲವು ವಯ್ಯಾರಗಳಿಲ್ಲ. ಕಿವಿ ಜಜ್ಜುವ ಆರ್ಭಟೆ ಹೂಂಕಾರಗಳಿಲ್ಲ, ಚಿತ್ತ ಕೆಡಿಸುವ ಠಕ್ಕುಟಾಳಿಗಳಿಲ್ಲ. ರಾಜಕೀಯ ಅಮೃತವಾಚಕ ಒಮ್ಮೆ ಹಳೆಯುತ್ತದೆ. ಹೀಗೆ ಸುಕವಿತ್ವಗಣಿಕೆಯ ಶೃಂಗಾರದಂತೆ, ಗಣಶಬ್ದ ರಚನೆಯ ಛಾಂದಸ ಬ್ರಾಹ್ಮಣತಿಯ ಅಂದ ಚೆಂದದ ಶೃಂಗಾರ ಮಾತ್ರ. ಒಂದು ಗೆರೆಯಷ್ಟಾದರೂ ಗಣಿಕಾ ಶೃಂಗಾರ ಅದನ್ನು ಸೋಂಕದಿದ್ದರೂ ಅವನ ಕವಿತ್ವ ನಿಶ್ಚಯವಾಗಿ ಸುಕವಿತ್ವ" (ಎಸ್.ವಿ. ರಂಗಣ್ಣ, ೧೯೫೮, ಪು.೪೫).

ಭರತೇಶ ವೈಭವದಲ್ಲಿ ಭರತನ ಸಂಸಾರ ದೊಡ್ಡದು. ಅವನು ಸಹಸ್ರ ಹೆಂಡತಿಯರನ್ನು, ಮಕ್ಕಳನ್ನು ಮತ್ತು ಅಪಾರ ಬಂಧು-ಮಿತ್ರರನ್ನು ಹೊಂದಿರುವಾತ. ಈ ಕಾವ್ಯದಲ್ಲಿ ಭರತನಿಗೆ ಪೂರಕವಾಗಿ ಬರುವ ಎಲ್ಲಾ ಪಾತ್ರಗಳಿಗೂ ಕವಿ ನಾಮಾಂಕಿತವನ್ನು ಕೊಡುವುದರಲ್ಲಿ ಯಶಸ್ವಿಯಾಗಿದ್ದಾನೆ

[illegible]

ಪುರಾಣ ಕೃತಿಗಳಲ್ಲಿ ಭರತನ ಹೆಂಡತಿಯರ ಬಗ್ಗೆ ಪ್ರಸ್ತಾಪ ಬಂದರೂ ಆ ಕವಿಗಳು ಯಾರ ಹೆಸರನ್ನು ಹೇಳುವುದಕ್ಕೆ ಹೋಗಿಲ್ಲ. ಆದರೆ ರತ್ನಾಕರನು ಹೆಸರಿಸಿದ್ದಾನೆ. ಭರತನ ೯೬,೦೦೦ ಹೆಂಡತಿಯರಲ್ಲಿ ಕೆಲವು ಹೆಸರುಗಳು - ಕನ್ನಾಜಿ, ಕಮಲಾಜಿ, ವಿಮಲಾಜಿ, ಸುಮನಾಜಿ, ಹೊನ್ನಾಜಿ, ಚೆನ್ನುಗಿ, ಚಿನ್ನಾಜಿ, ಕಾಂತಾಜಿ, ಮಕರಂದಾಜಿ, ಕುಸುಮಗಂಧಾಜಿ, ವಸಂತಾಜಿ, ಮಧುಮಾಧವಾಜಿ, ಅಂತರಂಗಾಜಿ, ಸುಖಾಜಿ, ಸುಖಾವತಿ, ಶಾಂತಾಜಿ, ಭೃಂಗಲೋಚನೆ, ನೀಲಲೋಚನೆ, ಕುರಂಗಲೋಚನೆ, ಪುಷ್ಪಿಮಾಲೆ, ಶೃಂಗಾರವತಿ, ಗುಣವತಿ, ಚಂದ್ರವತಿ, ಸಾರಂಗ, ಲೋಚನೆ, ವೀಣಾದೇವಿ, ವಿದ್ಯಾದೇವಿ, ಸುರದೇವಿ, ವಾಣಿದೇವಿ, ಶ್ರೀದೇವಿ, ಬಾಣಾದೇವಿ, ಭದ್ರಾದೇವಿ, ಕಲ್ಯಾಣದೇವಿ, ಅಂಜನಾದೇವಿ, ಕುಂಕುಮದೇವಿ, ಮಲ್ಲಿಕಾದೇವಿ, ಸುದೇವಿ, ಉತ್ಸಾಹದೇವಿ, ಚಿತ್ರಾವತಿ, ಚಿತ್ರಲೇಖೆ, ಪದ್ಮಾವತಿ, ನೇತ್ರಾವತಿ, ಚಂದ್ರಲೇಖೆ, ಮಿತ್ರಾವತಿ, ಪದ್ಮಲತೆ, ಲಲಿತಾಂಗಿ, ವಿಚಿತ್ರಾಂಗಿ, ರತ್ನಮಾಲೆ, ಮಣಿಮಾಲೆ, ಕಾಂತಿಮಾಲೆ, ನೇತ್ರಮೋಹಿನಿ, ಚಿತ್ತಮೋಹಿನಿ, ಪದ್ಮಿನಿ. ಹೀಗೆ ಕವಿ ಭರತನ ಪತ್ನಿಯರಿಗೆ ಕೊಟ್ಟ ಶೃಂಗಾರಭರಿತವಾದ ಹೆಸರುಗಳು.

ಭರತ ತನ್ನ ಪತ್ನಿಯರನ್ನು ಕರೆಯುವುದು ಸಂಭೋದಿಸುವುದು ಹೀಗೆ ಉದಾ. ಕುಸುಮಾಜಿಗೆ ಕುಸುಮಿ, ಕುಸುಮು, ಕುಸುಮೆ, ಕುಸುಮಾಂಗಿ, ಕುಸುಮಕೋಮಲೆ, ಇನ್ನು ಕೆಲವು ಕಡೆ 'ಬಾಲೆ' 'ನಲ್ಲೆ' ಎಂದು ಮತ್ತು ಅವರವರ ಹೆಸರುಗಳನ್ನು ಇಟ್ಟು ಕರೆಯುವುದುಂಟು. ಹಿಂದಿನಿಂದ ನಾವು ನೋಡುತ್ತಾ ಬಂದಿರುವ ಪ್ರಕಾರ ಹೆಂಡತಿಗೆ 'ಎನೆ' 'ಲೇ' ಎಂದು ಕರೆಯುವ ಪದ್ಧತಿ ರೂಢಿಯಲ್ಲಿದೆ. ಈಗ ಕೆಲವರು ತಮ್ಮ ಹೆಂಡತಿಯರನ್ನು ಹೆಸರಿಟ್ಟು ಕರೆದರೂ ಅವರ ಪ್ರಮಾಣ ಕಡಿಮೆ. ಆದರೆ ರತ್ನಾಕರ ಆ ವೇಳೆಗೆ ಭರತನ ಮೂಲಕ ಮಡದಿಯರಿಗೆ ಕಾವ್ಯದಲ್ಲಿ ಹೆಸರಿಟ್ಟು ಕರೆಸಿದ್ದಾನೆ. ಇಂದಿನ ದಿನಗಳಲ್ಲಿ ಹೆಚ್ಚಾಗಿ ಈ ರೀತಿಯಾಗಿ ಹೆಸರಿಡಿದು ಸಂಭೋದಿಸುವುದು ನೋಡಬಹುದು. ಕವಿಯೂ ಆ ಸಮಯದಲ್ಲೇ ಹೇಳಿದ್ದಾನೆ.

ಭರತನ ಹೆಂಡತಿಯರು ಅವನನ್ನು ಸಂಭೋದಿಸುವುದು 'ನಲ್ಲ', 'ಸ್ವಾಮಿ', 'ರಾಯ' ಈ ರೀತಿ ನೋಡಬಹುದು. ಈ ಕಾವ್ಯದಲ್ಲಿ ಅರಗಿಳಿಯೊಂದನ್ನು ಸಹ ಕವಿ ಮಾತನಾಡಿಸಿದ್ದಾನೆ. ಅದಕ್ಕೆ 'ಅಮೃತ ವಾಚಕ'ವೆಂಬ ಹೆಸರನ್ನು ಕೊಟ್ಟಿದ್ದಾನೆ. ಇದೂ ಸಹ ಭರತನಿಗೆ 'ಭಾವಾಜಿ'ಯೆಂದೂ, ಅವನ ಹೆಂಡತಿಯರಿಗೆ 'ಅಕ್ಕಾಜಿ' ಎಂದೂ ಸಂಭೋದಿಸುತ್ತದೆ.

ಭರತನ ಹೆಂಡತಿಯರ ಮಧ್ಯ 'ಅಕ್ಕಾಜಿ' 'ತಂಗಿ' ಎಂದು ಒಬ್ಬರನ್ನೊಬ್ಬರು ಕರೆದುಕೊಳ್ಳುವುದನ್ನು ಗಮನಿಸಬಹುದು. ತಾಯಿ ಯಶಸ್ವತೀ ಮಗನನ್ನು 'ಭರತಣ್ಣಾ' ಎಂದೂ, ಅಣ್ಣ-ತಮ್ಮರ ನಡುವೆ 'ಅಣ್ಣಾಜಿ' 'ತಮ್ಮಾಜಿ' ಎಂದೂ, ದೊರೆ-ಮಂತ್ರಿ ಮತ್ತು ಜನಸಾಮಾನ್ಯರ ಮಧ್ಯ 'ಸ್ವಾಮಿ', 'ದೊರೆ', 'ದೊಡ್ಡಡೆಯಾ', 'ಚಿಕ್ಕೊಡೆಯಾ' ಎಂದು ಕರೆಯುತ್ತಾರೆ.

ಕವಿ ಕಾವ್ಯದಲ್ಲಿ ನಾಟಕಶಾಲೆಗೆ 'ವರ್ದನಾವತಿ', ಸಜ್ಜೆಮನೆಗೆ 'ಪುಷ್ಕರಾವತಿ', ಅಂತಃಪುರಕ್ಕೆ 'ಭಂಡಾರವತಿ', ರಾಜ ಅಶ್ವಕ್ಕೆ 'ಪವನಂಜಯ' ಹೀಗೆ ಹಲವು ವಿಶೇಷನಾಮಾಂಕಿತವನ್ನು ಕವಿ ಕೊಟ್ಟಿದ್ದಾನೆ.

[illegible]

[illegible]

[illegible]

- ನೀಲಾಂಗಿಯೊರ್ವಳು ಬಂದು ಕಾಣಿಕೆಗೊಂದು
  ನೀಲಾಂಬುಜವ ತಂದಿತ್ತು
  ಮೇಲೆ ಕೈಮುಗಿದು ನಿಂದಳು ಕೆಲದೊಳಗಿಂದ್ರ
  ನೀಲದ ಪುತ್ತಳಿಯಂತೆ. (ಉಪ್ಪರಿಗೆ ಸಂಧಿ)

- ರಾಣಿಯೋರ್ವಳು ಬಂದು ಹೊಂದಾವರೆಯ ಕೈ
  ಗಾಣಿಕೆಯಿತ್ತು ಕೈಮುಗಿದು
  ಕ್ಷೋಣಿಶನೆಡದ ಭಾಗವ ಸಾರಿ ನಿಂದಳು
  ಮಾಣಿಕಬೊಂಬೆಯೆಂಬಂತೆ. (ಉಪ್ಪರಿಗೆ ಸಂಧಿ)

- ಕೆಂಪಿಯೊರ್ವಳು ಬಂದು ರಾಯನ ಹಸ್ತಕೆ
  ಸಂಪಗೆ ಹೂಗಳ ನೀಡಿ
  ಪೆಂಪಿಂದ ಕೈಮುಗಿದ ಬಲೆಯೆರೆಲ್ಲರ
  ಗುಂಗಿನೊಳಗೆ ನಿಂದಳೊಡನೆ. (ಉಪ್ಪರಿಗೆ ಸಂಧಿ)

- ಕರಿಯಳೊಬ್ಬಳು ಬಂದು ಚಕ್ರವರ್ತಿಗೆ ತನ್ನ
  ಕರಕುಶಲದೊಳು ರಚಿಸಿದ
  ಸುರಗಿಯ ಮಾಲೆಯನಿತ್ತಳು ರತಿದೇವಿ
  ಸುರಗಿಯ ಮದನಗೀವಂತೆ. (ಉಪ್ಪರಿಗೆ ಸಂಧಿ)

ಹೀಗೆ ಅವರವರ ಹೆಸರಿಗೆ ತಕ್ಕಂತೆ ತಮ್ಮ ಅರಸನಿಗೆ ಕಾಣಿಕೆ ಕೊಡುವುದನ್ನು ಕವಿ ಸುಂದರವಾಗಿ ವರ್ಣಿಸಿದ್ದಾನೆ.

ನೀಲಾಂಗಿನಿ	-	ನಿಲಾಂಬುಜವನ್ನು
ರಾಣಿ	-	ಹೊಂದಾವರೆ
ಕೆಂಪಿಯು	-	ಸಂಪಗೆಯನ್ನು
ಕರಿಯಳು	-	ಕರಕುಶಲವನ್ನು
ಲತಾಂಗಿಯು	-	ಕಠಾರಿಯನ್ನು
ಮುಗ್ದೆಯು	-	ಮಲ್ಲಿಗೆಯನ್ನು

ಕವಿಯ ಶಬ್ದಭಂಡಾರ ಅಪಾರವಾದುದು. ಅವರನ್ನು ವರ್ಣಿಸಲು ಪುತ್ತಳಿ, ಮಾಣಿಕದ ಗೊಂಬೆ, ಅಬಲೆ ಎಂದೆಲ್ಲಾ ಹೇಳುತ್ತಾನೆ. ಕವಿ ಬಳಸಿದ ಪದಗಳು, ನುಡಿಗಳು, ಅವನಲ್ಲಿರುವ ಶಬ್ದಸಂಪತ್ತು, ಕವಿ

ಮಾಡುವ ಶೃಂಗಾರಪೂರಿತ ರಸವತ್ತಾದ ವರ್ಣನೆಗಳು ಇವೆಲ್ಲವೂ ಅವನ ಗಹನ ಪ್ರತಿಭೆ, ಕಾವ್ಯಾಭಿಲಾಷೆ ತಿಳಿಯುತ್ತದೆ. ಸರಸ ಸಲ್ಲಾಪ, ಪ್ರಣಯ ಪ್ರವೃತ್ತಿಗಳನ್ನು ಚಿತ್ರಿಸುವಲ್ಲಿ ಕವಿಯು ರಸಿಕ ಬರಹಗಾರನಾಗಿದ್ದಾನೆ. ಇದಷ್ಟೇ ಅಲ್ಲದೆ ಮನಕರಗುವ ಸಂಗತಿಗಳನ್ನು ಚಿತ್ರಿಸುವಲ್ಲಿಯೂ ಮುಂದಾಗಿದ್ದಾನೆ. ಕನ್ನಡದಲ್ಲಿ ಇಂಥ ಬರಹಗಾರರು ಅಪರೂಪ. ಆದರೂ ರನ್ನ, ಪಂಪರಲ್ಲಿಯೂ ಇದು ಪಳಗಿದೆ.

ಪಂಪನ 'ಆದಿಪುರಾಣ'ದ ನವಮಾಶ್ವಾಸದ ಅಮರ ನರ್ತಕಿ 'ನಿಲಾಂಜನೆಯ ನೃತ್ಯ'ದಿಂದ ಆದಿದೇವನೆ ತುಂಬಿದ ಒಡ್ಡೋಲಗವನ್ನು ಬೆರಗುಗೊಳಿಸಿದ ಹಾಗೆ. ರತ್ನಾಕರನ 'ಭರತೇಶವೈಭವ'ದ 'ಭೋಗವಿಜಯ'ದಲ್ಲಿ ಉತ್ತರ ನಾಟಕ, ಪೂರ್ವ ನಾಟಕದಲ್ಲಿ ಅದರಲ್ಲೂ ಪೂರ್ವನಾಟಕದ ಚಿತ್ತಮೋಹಿನಿ, ನೇತ್ರಮೋಹನಿಯರು ಭರತನ ಒಡ್ಡೋಲಗವನ್ನು ಬೆರಗುಗೊಳಿಸುತ್ತಾರೆ. ಅವರು ಭರತನನ್ನು ಬಯಸುವುದು, ಇದನ್ನು ತಿಳಿದ ಭರತ ಅವರ ಆಸೆಯನ್ನು ಪೂರೈಸುವುದು ಎಲ್ಲವೂ ರಸವತ್ತಾಗಿ ಬಂದಿವೆ.

ಕಾವ್ಯದಲ್ಲಿ ಪುನರುಕ್ತಿಗಳು, ಅನುಕರಣವಾಚಕಗಳು, ಜೋಡುನುಡಿಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ಅನುಕರಣ ವಾಚಕಗಳು ಅಭಿವ್ಯಕ್ತಿಯನ್ನು ನಾಟ್ಯೀಕರಿಸಲು ನೆರವಾಗುತ್ತವೆ. ಕವಿ ಈ ಅನುಕರಣವಾಚಕಗಳನ್ನು, ಜೋಡುನುಡಿಗಳನ್ನು ಸಾಕಷ್ಟು ದುಡಿಸಿಕೊಂಡಿದ್ದಾನೆ.

ಅನುಕರಣ ಪದಗಳು	ಜೋಡಿನುಡಿಗಳು
ತಳತಳಿಸು	ಭಿನ್ನಾಭಿನ್ನ
ದಿಗಿದಿಗಿ	ಅತ್ತ ಇತ್ತ
ಕಣಕಣ	ತಪ್ಪಿಲ್ಲ ತಾಗಿಲ್ಲ
ಕಿಂಕಿಣಿ	ತಳ್ಳಿಬಳ್ಳಿ
ಝುಣಝುಣ	ಹೊಳೆ ಹೊಳೆದು
ಮಳೆಯ ಜೋರೋ	ಗಡಬಡೆ
ಝುಲಿ ಝುಲಿ	ಕಿಣಿಮಿಣಿ
ರಿಕ್ಕರಿಕ್ಕಟ	ಹಿಂಚುಮುಂಚು
ಜೆಜೆಜೆಂಜೆ	ಕಂಚುಮಿಂಚು
ಝಿಂಝಿಂ	ಪಂತಿ ಪಂತಿ
ಜುಂ ಜುಂ	
ಸರಲ ಸರಲ	
ವಿರಲ ವಿರಲ	
ಮಿಂಚು ಮಿಂಚು	

[illegible]

[illegible]

[illegible]

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
	[illegible]
	[illegible]
	[illegible]
	[illegible]

ಚುಮ್ಮು ಚುಮ್ಮು
ಜವ್ವನ ಜವ್ವನ
ಚಳ ಚಳ
ದೂಪ್ಪದೂಪ್ಪನೆ
ಸೂಪ್ಪಸೂಪ್ಪನೆ
ಘಳಘಳಿಸು
ಭಿನ್ನ ಭಿನ್ನ
ಚೆನ್ನ ಚೆನ್ನ
ಕಟ್ಟಿ ಕಟ್ಟಿ
ಪಂತಿ ಪಂತಿ
ಮನೆ ಮನೆ
ಧುಳ ಧುಳ
ಗರಿ ಗರಿ
ವದನ ವದನ
ದಿಕ್ಕು ದಿಕ್ಕು
ಕಿನ್ನರಿ ಕಿನ್ನರಿ
ಗರ ಗರ
ದಿನ ದಿನ
ಮೊಗೆದು ಮೊಗೆದು
ಕೊರೆ ಕೊರೆದು
ರತ್ನ ರತ್ನವ
ತಳ ತಳಿಸು
ಪರಿ ಪರಿ
ಹೊಸ ಹೊಸ
ತರ ತರ
ದಿಗಿ ದಿಗಿ
ನಗುತ ನಗುತ
ತಮು ತಮು
ಕಡಿ ಕಡಿ

ಹೀಗೆ ಇನ್ನು ಅನೇಕ ಅನುಕರಣ ವಾಚಕಗಳು ಮತ್ತು ಜೋಡು ನುಡಿಗಳನ್ನು ಹೇಳಿದ್ದಾನೆ. ಮಳೆಯ ಜೋರ್ರೋ ಎಂಬ ಸದ್ದು, ಕಾಲಂದುಗೆಯ ಝುಲಿಝುಲಿ, ಝುಣ ಝುಣ, ನದಿಯ ಗುಳಗಳ ಗುಳುಗುಳು, ಬೆಂಕಿಯ ಘಟ ಪಟ ಸುರ್ ಸೂರ್ ಛಿಟಿ ಛಿಟಿಲ್, ಮದ್ದಳೆಯ ಕದಿಕಿಟ ಧಿಮಿದಿಮಿ ರಿಕ್ಕಟ ಧುಂಧುಂ, ಕಿರುಗೆಜ್ಜೆಯ ಕಿಂಕಿಣಿ ಕಿಣಿಮಿಣಿ, ಗುಡುಗಿನ ಧಡಭಡ ಭೂರ್ಭರಂ ಧಾಂಧಣ, ಕುಣಿತದ ತತ್ತುಧೈತಕ ಧಿಮ್ ಧಿಮ್ ತಕಥೈ, ಧವಳ ಶಂಕಧ್ವನಿ, ಭುಂಭುವ ಭುವೆಂನೆ, ಹೊಸಹೊನ್ನ ಮಳೆ ಚುಮು ಚುಂಮೆನೆ ಕರೆದು ರಂಜಿಸಿತು, ಂೀವಿ ಂೀವಿಳಿ ಜೆಜೆಜೆಂಜೆ ಝಿಂಝಿ ಮಿರುಕು ಚಾವು ಚಾವುಲು ಜಂಜಮ್ಮಂದು ಆವುಜಕಾರ ಕೇಳಿಸಿದನು, ಕಡಗವನುರುಳಿಸಲು ಗುಡುಗುಡು ಘುಮುಘುಮು ಗಣಿಗಣಿಯೆನು ತವರ ಕಡೆಗೆ ಹೋದುವು ಗಾಳಿಯಂತೆ, ಪಾರಿವಾಳ ಗೂರುಳು ಗುಕುಗುಕು ಗುಟು ಗುಟು ಗುರುಗುರು ಚಾರಿಟೆಯೆಂದು ವಲ್ಲಲ್ಲಿ, ಹೀಗೆ ಪ್ರಕೃತಿ ಸಹಜವಾಗಿ ಕೇಳಿಬರುವ ಶಬ್ದಕ್ಕೆ ಕವಿಯು ವಿನೂತನವಾಗಿ ಪದಗಳನ್ನು ಕೊಟ್ಟು ಜೋಡಿಸಿ ವಾಕ್ಯಗಳನ್ನು ಸುಂದರಗೊಳಿಸಿದ್ದಾನೆ.

"ತಬ್ಬಿಬ್ಬು, ಬಾಕುಳಿ, ಮಂದ್ಯಾಳ, ಗುದಿಗೆ, ಕಬಾಯಿ, ಗುಸುಟು, ದೂಕ್ಕು, ದುರಂಗಿ, ಒಪ್ಪಚ್ಚಿ, ಗಂಡೆ, ಹೆಬಗ, ಗುಯ್ಯಲು, ನಿಗರಣೆ, ಹೂಯ್ಲು, ತುರಿಸು, ಹೆರಿಗೆ - ಮುಂತಾದ ಶಬ್ದಗಳು ಇದ್ದರೂ ರತ್ನಾಕರನ ಶೈಲಿಯು ನಯಮರ್ಯಾದೆಗೆ ಕುಂದಿಲ್ಲ" (ಅದೇ ಪು.೫೭).

"ಲಲಿತಕಲೆಗಳ ಅಪಾರ ತಿಳವಳಿಕೆ, ಅಮೋಘ ರಸಜ್ಞತೆ, ತತ್ವಶಾಸ್ತ್ರಗಳಲ್ಲಿ ಖಚಿತಜ್ಞಾನ, ತರ್ಕ ಪಾಂಡಿತ್ಯ, ವಿಶಾಲ ಲೋಕಾನುಭವ, ನಿರರ್ಗಳ ಪದ್ಯ ರಚನೆ, ಬೇಕು ಬೇಕಾದಾಗ ವರ್ಣಿಸುವ ಮಾಧುರ್ಯ, ಶಬ್ದ ಸಂಪತ್ತು, ವರ್ಣನಾ ಚಮತ್ಕಾರ, ಕಥನಾ ಚಮತ್ಕಾರವೆಲ್ಲವೂ ಬೀಡು ಬಿಟ್ಟಿವೆ ರತ್ನಾಕರನಲ್ಲಿ" (ಅದೇ ಪು.೫೯).

ಪದಾದಿಯಲ್ಲಿ ಕೆಲವೊಮ್ಮೆ 'ಪ' ಕಾರ 'ಹ' ಕಾರವಾದರೂ ಇನ್ನೂ ಕೆಲವೊಮ್ಮೆ 'ಪ' ಕಾರ 'ಹ' ಕಾರವಾಗಿಯೇ ಇದೆ.

ಉದಾ :	ಪೊಸ ಕೃತಿ	ಹೊಸ ಕೃತಿ
	ಪೇಳಿಸಿದ	ಹೋಗುತಿರ್ದನು
	ಪೋಪೆ	ಹಕ್ಕಿ
	ಪತ್ತಿದ	ಹಣ್ಣು
	ಪಕ್ಕಿ	ಹೇಳು
	ಪೇಳು	ಹೊಸ ಬಗೆ
	ಪಾಡಿದ	ಹೊಸ ಹೊಸ
	ಪೇಳಿದ	

[illegible]

[illegible]

[illegible]

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
	[illegible]

ಪೇಳ್ದೆ

ಪೆಂಗಳನಡೆ

ಪೆಣ್ಣು

ಪೊನ್ನುಡಿ

ಅವೇ ಪದಗಳೇ ಒಂದು ಕಡೆ 'ಪ' ಕಾರದಿಂದ ಹೇಳಿದರೆ ಮತ್ತೊಂದು ಕಡೆ 'ಹ' ಕಾರ ಹಚ್ಚಿ ಹೇಳಿದ್ದು ನೋಡಬಹುದು. 'ಪೊಸಕೃತಿ' 'ಹೊಸಕೃತಿ' ಈ ಎರಡರ ಪ್ರಯೋಗವನ್ನು ಕವಿ ಬಳಸಿಕೊಂಡಿದ್ದನ್ನು ಗಮನಿಸಬಹುದು.

'ಭರತೇಶವೈಭವ'ದ ಕವಿ ರತ್ನಾಕರ ತನ್ನ ಕಥಾನಾಯಕ ಭರತನಿಗೆ ಅನೇಕ ವಿಶೇಷ ಹೆಸರುಗಳನ್ನು ಕೊಟ್ಟಿದ್ದಾನೆ. ಈತನು ಒಟ್ಟು ಕಾವ್ಯದಲ್ಲಿ ಬಳಸಿದ ಹೆಸರುಗಳು ಮಗುವಿಗೆ ನಾಮಕರಣದ ಸಂದರ್ಭದಲ್ಲಿ ಹೆಸರಿಡುವ ಒಂದು ಪುಸ್ತಕವೇ ಆಗಿಬಿಡುತ್ತದೆ. ಭರತನಿಗೆ ಕವಿ ತನ್ನ ಮೂಲಕ ಹೇಳಿದ, ಅವನ ಪತ್ನಿಯರ ಮೂಲಕ ಇತರ ವ್ಯಕ್ತಿಗಳ ಮೂಲಕ ಈ ಹೆಸರುಗಳನ್ನು ಹೇಳಿಸುತ್ತಾನೆ.

ಉದಾ :	ಮೇದಿನೀ ಪತಿ	ರಾಜೇಂದ್ರ
	ರಾಯ	ಪ್ರಾಣನಾಥ
	ನರಪತಿ	ಕ್ಷೋಣಿಶ
	ನರನಾಥ	ನೃಪತಿ
	ಜನಪತಿ	ಭೂತಳಪತಿ
	ಮಾನವಪತಿ	ಭೂಪಾಲ
	ಅವನೀಶ	ಚಕ್ರೇಶ
	ರಾಜಯೋಗಿಂದ್ರ	ಕುಸುಮ ಕೋದಂಡ
	ಪೃಥ್ವಿಪತಿ	ಧಾತ್ರೀಶ
	ಭೂವಲ್ಲಭ	ಅಂಗಜವೀರ
	ಚಕ್ರಧರ	ಭ್ರಾಜಿಪ.

ಹೀಗೆ ಹಲವಾರು ಹೆಸರುಗಳಿಂದ ಭರತನನ್ನು ಕರೆದಿದ್ದಾರೆ. ಕವಿ ಭರತನಿಗೆ ಅಷ್ಟೇ ಅಲ್ಲದೆ ಅವನ ಹೆಂಡತಿಯರಿಗೂ ನಾನಾ ಹೆಸರುಗಳಿಂದ ಕರೆದಿದ್ದಾನೆ.

ಮಂದಗಮನೆ	ಚಾಟಕಾಂತಿ
ಭಾಮೆ	ಅಂಗನೆಯರು
ಅಬಲೆಯರು	ವಾರಜಿಮುಖಿ

[illegible]

[illegible]

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible]

[illegible]	[illegible]
[illegible]	[illegible]
[illegible]	[illegible]

ವಾರಿಜಾಕ್ಷಿ	ಕಮಲದಳಾಕ್ಷಿ
ಅಂಬುಜಾಕ್ಷಿ	ಮಾನಿನಿ
ಕಾಂತೆ	ಕುಟಿಲೆ
ನೀಲಾಂಗಿ	ತರುಣಿ
ರಮಣಿ	ಮತಿವಂತೆಯರು
ಕಾಂತೆಯರು	ಚಂಚಲಾಕ್ಷಿಯರು
ದೇವಾಂಗನೆಯರು	ಪುತ್ತಳಿ, ಮಾಣಿಕದ ಗೊಂಬೆ

ಈ ರೀತಿ ಸುಂದರ ಹೆಸರುಗಳನ್ನು ಭರತನ ಹೆಂಡತಿಯರಿಗೆ ಹೋಲಿಸಿ ಹೇಳಿದ್ದಾನೆ. ಇನ್ನು ಹಲವಾರು ವಿಶೇಷವಾದ ಹೆಸರುಗಳನ್ನು ಕಾವ್ಯ ಉದ್ದಕ್ಕೂ ನೋಡಬಹುದು.

ಗಿಳಿ	-	ಅಮೃತವಾಚಕ
ನಾಟಕಶಾಲೆ	-	ವರ್ದನಾವತಿ
ಅಂತಪುರ	-	ಭಂಡಾರವತಿ
ರಾಜಅಶ್ವ	-	ಪವನಂಜಯ
ದಂಡಕ	-	ರತ್ನದಂಡ
ನದಿಗಳು	-	ಉನ್ಮಗ್ನ, ನಿಮಗ್ನ

ಈ ಕಾವ್ಯದಲ್ಲಿ ಹಿಂದೆ ಎಂದೂ ಕೇಳದ ಹೆಸರುಗಳನ್ನು ಕವಿ ಬಳಸಿದ್ದಾನೆ. ಇದರಿಂದ ಅವನಲ್ಲಿರುವ ಶಬ್ದಭಂಡಾರ ಎಷ್ಟಿತ್ತು ಎಂದು ತಿಳಿಯುತ್ತದೆ.

ಕವಿಗೆ ವೀರಶೈವ ಧರ್ಮದ ಪ್ರಭಾವದಿಂದಾಗಿ ಆ ಧರ್ಮದ ನುಡಿಗಟ್ಟನ್ನು ಬಳಸಿದ್ದಾನೆ. "ಬಳಸಿ ಬ್ರಹ್ಮಚಾರಿ, ಉಂಡುಪವಾಸಿ, ಮಂಡೆ ಬೆಲೆದು ಮನಬೋಳಾದ ತಪಸಿ, ಮೊಲೆ ಮೇಲಿದ್ದು ಯೋಗಿಗಳುಂಟು, ಮೈಯೆ ಬೆತ್ತಲೆ ಮಾಡಿ ಮನವ ಕತ್ತಲೆ ಮಾಡಿ" ಇವುಗಳನ್ನು ಕವಿ ಬಳಸಿದ್ದಾನೆ.

ಒಟ್ಟಿನಲ್ಲಿ ರತ್ನಾಕರನ ಕಾವ್ಯ ದೇಸೀ ಶೈಲಿಯಲ್ಲಿ ಮೂಡಿ ಬಂದಿರುವ ಒಂದು ಮೇರುಕೃತಿಯಾಗಿದೆ. ಕವಿ ತನ್ನದೇ ಆದ ಭಾಷಾ ಶೈಲಿಯಲ್ಲಿ ತನ್ನ ಭಾವವನ್ನು ಸೃಜನಾತ್ಮಕವಾಗಿ ಅಭಿವ್ಯಕ್ತಪಡಿಸಿದ್ದಾನೆ. "ಒಂದು ಭಾಷೆಯನ್ನು ಸೃಜನಾತ್ಮಕವಾಗಿ ಬಳಸಿದಾಗ ಮಾತ್ರ ಅಂತಹ ಶೈಲಿ ವಿಧಾನ ಮೂಡಿಬರುತ್ತದೆ. ಭಾಷೆಯನ್ನು ಸೃಜನಾತ್ಮಕವಾಗಿ ಬಳಸುವುದೆಂದರೆ ಚಿಂತನಶೀಲ ಮನಸ್ಸೊಂದು ಭಾಷೆಯ ರೂಢಿ ಜಡವಾದ ವ್ಯಾವಹಾರಿಕ ಸ್ವರೂಪವನ್ನು ಮುರಿದು ತನ್ನ ಸಮೃದ್ಧವೂ ತೀವ್ರವೂ ಆದ ಅನುಭವಗಳಿಗೆ ತಕ್ಕ ಭಾಷಿಕ ಮಾಧ್ಯಮವನ್ನು ಕಟ್ಟುವ ಕ್ರಿಯೆಯಲ್ಲಿ ತೊಡಗುವುದು ಎಂದರ್ಥ" (ಎಸ್.ಎಸ್. ಅಂಗಡಿ, ೨೦೦೭, ಪು.೧೦೭-೧೦೮).

ಇದೇ ರೀತಿ ಭಾಷೆಯನ್ನು ಅತ್ಯಂತ ಸೃಜನಾತ್ಮಕವಾಗಿ ಬಳಸುವುದರ ಮೂಲಕ ಕಾವ್ಯಕ್ಕೆ ಒಂದು ವಿಶಿಷ್ಟತೆಯನ್ನು ತನ್ನದೇ ಆದ ಅಭಿವ್ಯಕ್ತಿ ಶೈಲಿಯನ್ನು ರತ್ನಾಕರನು ತಂದುಕೊಟ್ಟನು.

ಒಟ್ಟಿನಲ್ಲಿ ಇಷ್ಟೆಲ್ಲಾ ನೋಡಿದ ಮೇಲೆ ರತ್ನಾಕರ ಕೆಲವು ಕಡೆ ಮಹೋನ್ನತಿಗೆ ಏರಿದರೆ ಇನ್ನೊಂದು ಕಡೆ ಬೀಳುತ್ತಾನೆ. ರತ್ನಾಕರನು ಬಳಸಿದ ವ್ಯಕ್ತಿ-ವ್ಯಕ್ತಿಗಳ ಮಧ್ಯೆ ಸಂವಾದವಾಗಲಿ, ಗಂಡ-ಹೆಂಡತಿಯ ಮಧ್ಯೆಯಾಗಲಿ, ಅಕ್ಕ-ತಂಗಿಯರ ಮಧ್ಯೆಯಾಗಲಿ, ಭರತ-ಬಾಹುಬಲಿ ನಡುವೆ ನಡೆದ ಮಾತುಗಳಾಗಲಿ ಎಲ್ಲದರಲ್ಲಿಯೂ ಒಂದೇ ಶೈಲಿಯಲ್ಲಿ ಹೇಳುತ್ತಾ, ವರ್ಣಿಸುತ್ತಾ ಹೋಗಿದ್ದಾನೇನೋ ಅನ್ನಿಸುತ್ತದೆ. ಎಲ್ಲಿಯೂ ಅವನು ಪರಿವರ್ತನೆಯನ್ನು ತಂದಿಲ್ಲ. ಎಂಥ ಸನ್ನಿವೇಶವಾದರೂ ಅದನ್ನು ಸರಳವಾಗಿ, ಸುಂದರವಾಗಿ, ಸಾಂಗತ್ಯ ದಾಟಿಯಲ್ಲಿ ಹೇಳುತ್ತಾ ಹಾಡುತ್ತಾ ಹೋಗುತ್ತಾನೆ. ಇದೆಲ್ಲ ನೋಡಿದರೆ ಅವನ ಕಾವ್ಯದಲ್ಲಿ ಏನೂ ಒಂದು ಸತ್ವ ಕಡಿಮೆಯಾದಂತೆ ತೋರುತ್ತದೆ ಮತ್ತು ಅದರಲ್ಲಿ ಕವಿ ಇತರರಿಗಿಂತ ಹಿಂದೆ ಉಳಿಯುತ್ತಾನೆ. ಈ ಒಂದು ವಿಷಯದಲ್ಲಿ ಅವನು ಎಲ್ಲಿಯೂ ಭಾವೋದ್ವೇಗ, ತಳಮಳ, ತವಕ, ಉದ್ವೇಗ, ರಕ್ತಪಾತ, ಉಗ್ರಭಾವ, ಆವೇಗ ಹೀಗೆ ಮುಂತಾದ ಮನ ಉದ್ವೇಗಗೊಳ್ಳುವ ಯಾವ ಭಾವಾವೇಗಗಳು ಬರಲು ಆಸ್ವಾದವನ್ನು ಕವಿ ಕೊಟ್ಟಿಲ್ಲ. ಇದರಿಂದ ಈತನ ಶೈಲಿಯಲ್ಲಿ ಒಂದು ಸತ್ವ ಕಡಿಮೆಯಾದಂತೆ ಅನ್ನಿಸುತ್ತದೆ.

ಭಾವಕ್ಕನುಗುಣವಾದ, ಸಂದರ್ಭಕ್ಕನುಗುಣವಾದ ಪದ ಸಮೂಹ ಕಂಡುಬರುವುದಿಲ್ಲ. ಎಂಥಾ ಯುದ್ಧದ ಸನ್ನಿವೇಶ ಬಂದರೂ ಅದನ್ನು ಸರಳಗೊಳಿಸಿ ಬಿಡುತ್ತಾನೆ. ಉಗ್ರಭಾವ ಅವನಲ್ಲಿ ಕಡಿಮೆ. ಕವಿಯ ಶೈಲಿ ಅವನ ಮನೋಧರ್ಮವನ್ನು ಹೇಳುತ್ತದೆ ಎಂಬ ಮಾತು ಇದರಿಂದ ತಿಳಿಯುತ್ತದೆ. ಕವಿಯ ಮನಸ್ಸಿನಲ್ಲಿ ಯಾವುದೇ ಉದ್ವೇಗ, ಉಗ್ರಭಾವಕ್ಕೆ ಅವನ ದೃಷ್ಟಿಯಿಲ್ಲ. ಕವಿಯ ಮನಸ್ಸು ಇರುವುದು ಶೃಂಗಾರವಾದ, ಸುಂದರವಾದ, ಲಲಿತಕಲೆ, ಸಂಗೀತ, ನೃತ್ಯ, ಕೋಮಲವಾದುದನ್ನು ರಸಮಯವಾದ ಸುಮಧುರವಾಗಿ, ಸರಳ ರೀತಿಯಲ್ಲೇ ಹೇಳುವುದಕ್ಕೆ ಅವನು ಹೆಚ್ಚು ದೃಷ್ಟಿ ಹರಿಸಿದ್ದಾನೆ. ಅವನು ಬಳಸಿದ ಉಪಮೆಗಳು ಸ್ವಲ್ಪ ಕಡಿಮೆ. ಮನಸ್ಸನ್ನು ಉದ್ವೇಗಗೊಳಿಸುವಷ್ಟು ಕಾವಿಲ್ಲ. ಹೇಳಿದ್ದನ್ನು ಹಲವಾರು ಸಾರಿ ಒಂದೇ ರೀತಿಯಲ್ಲಿ ಹೇಳುತ್ತಾನೆ. ಒಟ್ಟಿನಲ್ಲಿ ಅವನ ಮೂಲ ಉದ್ದೇಶ ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗಲೆಂದು ಸಾಂಗತ್ಯ ಧಾಟಿಯಲ್ಲಿ ಹೇಳಿದ್ದಾನೆ.

ಕವಿ ಬಳಸಿದ ಸಂಸ್ಕೃತ ಪ್ರಯೋಗಗಳು, ಪುನರುಕ್ತಿಗಳು, ಅನುಕರಣ ಪದಗಳು, ಗಾದೆಗಳು, ಉಪಮೆಗಳು, ಶಿಶುಪ್ರಯೋಗಗಳು ಎಲ್ಲವೂ ರತ್ನಾಕರನ ಶೈಲಿಯನ್ನು ಎತ್ತಿಹಿಡಿಯುತ್ತವೆ. ಈತನ ಶೈಲಿಯಲ್ಲಿ ಹೆಚ್ಚು ಆಡಂಬರವಿಲ್ಲ. ಏನನ್ನು ಹೇಳಬೇಕಾದರೂ ಮಿತಿಯಲ್ಲಿಯೇ ಹೇಳುತ್ತಾನೆ. ''ಉಚಿತಕ್ಕ ತಕ್ಕಷ್ಟು ಪೇಳ್ವ''ನೆಂದೇ ಹೇಳಿಕೊಂಡಿದ್ದಾನೆ. ಒಟ್ಟಿನಲ್ಲಿ ರತ್ನಾಕರವರ್ಣಿ ತನ್ನದೇ ಆದ ಭಾವಾಭಿವ್ಯಕ್ತಿಯಿಂದ ತನ್ನದೇ ಆದ ಶೈಲಿಯಲ್ಲಿ ಮೆರೆದ ಕವಿ ಎಂದು ಹೇಳಬಹುದು.

*****

ಅಧ್ಯಾಯ ೫

ಉಪಸಂಹಾರ

ಅಧ್ಯಾಯ ೫

ಉಪಸಂಹಾರ

ಮಧ್ಯಕಾಲೀನ ಸಾಹಿತ್ಯದಲ್ಲಿ ರತ್ನಾಕರವರ್ಣಿಯ ಹೆಸರು ಉನ್ನತ ಮಟ್ಟದಲ್ಲಿ ಕಾಣಿಸಿಕೊಂಡಿದೆ. ಇವನ 'ಭರತೇಶವೈಭವ' ಸಾಂಗತ್ಯ ಕೃತಿಗಳಲ್ಲೆಲ್ಲ ಮೇರುಕೃತಿಯಾಗಿದೆ. ಈ ಕಾವ್ಯವನ್ನು ಬರೆಯುವಾಗ ವೈಷ್ಣವ, ವೀರಶೈವ ಧರ್ಮಗಳ ಮುಖ್ಯ ಅಂಶಗಳಿಂದ ಪ್ರಭಾವಿತನಾಗಿ ಕಾವ್ಯ ರಚಿಸಿದರೂ ಕೂಡ ಕಾವ್ಯದ ವಸ್ತು, ಭಾಷೆ, ಉದ್ದೇಶ, ಛಂದಸ್ಸು ಶೈಲಿಯಲ್ಲಿ ತನ್ನದೇ ಆದ ಸ್ವಂತಿಕೆಯಲ್ಲಿ ಮೆರೆದಿದ್ದಾನೆ. ಪುರಾಣದ ಕಥಾವಸ್ತುವನ್ನು ತೆಗೆದುಕೊಂಡು ಕಾವ್ಯವನ್ನು ರಚಿಸಿದರೂ ಕೂಡ ಹಿಂದಿನ ಪುರಾಣ ಕೃತಿಗಳಿಗೆ ಸಂಪೂರ್ಣವಾಗಿ ಋಣಿಯಾಗದೆ ರತ್ನಾಕರವರ್ಣಿಯು ತನ್ನದೇ ಆದ ಸ್ವತಂತ್ರ ದೃಷ್ಟಿಯನ್ನು ಕಾವ್ಯದಲ್ಲಿ ತೋರಿಸಿದ್ದಾನೆ. ಕಥಾವಸ್ತುವಿನಲ್ಲಿ ಕೆಲವು ಪ್ರಸಂಗಗಳನ್ನು ನೂತನವಾಗಿ ಸೃಷ್ಟಿಸಿದ್ದಾನೆ. ಇನ್ನು ಕೆಲವು ಪ್ರಸಂಗಗಳನ್ನು ಯಥಾ ಮೂಲವಾಗಿ ತಂದಿದ್ದಾನೆ. ತನ್ನ ಕಥಾನಾಯಕನಾದ ಭರತನಿಗೆ ಚ್ಯುತಿ ಕಾಣಿಸಿದ ಭಾಗದಲ್ಲಿ ಕವಿ ಮೂಲ ಕಥೆಯನ್ನು ಮಾರ್ಪಾಟು ಮಾಡಿ ತನ್ನ ನಾಯಕನನ್ನು ಎತ್ತಿಹಿಡಿದಿದ್ದಾನೆ.

ಕವಿಯು ತನ್ನ ಕಾವ್ಯ ಎಲ್ಲರಿಗೂ ಪ್ರಿಯವಾಗಲೆಂದು ಜನಸಾಮಾನ್ಯರನ್ನು ಕೇಂದ್ರವಾಗಿಟ್ಟುಕೊಂಡು ಅವರು ದಿನನಿತ್ಯ ಮತ್ತೆ ಮತ್ತೆ ಬಳಸುವ ಮಾತುಗಳಿಗೆ ನೂತನ ಹೊಳಪನ್ನು ತಂದು ಕಾವ್ಯವನ್ನು ರಚಿಸಿದ್ದಾನೆ. ಜನಸಾಮಾನ್ಯರು ಆಡುಮಾತಿನಲ್ಲಿ ಬಳಸುವ ಗಾದೆಮಾತುಗಳನ್ನು, ಅನುಕರಣ ಪದಗಳು, ಪುನರುಕ್ತಿಗಳನ್ನು, ವಿಶೇಷ ಪದಗಳನ್ನು ಬಳಸಿರುವುದು ಕವಿ ಶೈಲಿಯ ವಿಶೇಷತೆಯನ್ನು ಎತ್ತಿ ಹಿಡಿಯುತ್ತದೆ. ಈ ಎಲ್ಲಾ ಅಂಶಗಳನ್ನು ಕಾವ್ಯದಲ್ಲಿ ತರುವುದರ ಮೂಲಕ ಕನ್ನಡದ ಕಂಪನ್ನು ಹೆಚ್ಚಿಸಿರುವುದು ಅಲ್ಲದೆ ಪದಪುಂಜವನ್ನು ಪರಿಣಾಮಕಾರಿಯಾಗಿ ಬಳಸಿ ಕನ್ನಡ ಸಿರಿಯನ್ನು ಬೆಳೆಸಿದನು. ಅಚ್ಚಗನ್ನಡ ನುಡಿಗಳನ್ನು ಬಳಸುವುದರ ಮೂಲಕ ದೇಸೀ ಗೌರವವನ್ನು ಉನ್ನತ ಮಟ್ಟಕ್ಕೇರಿಸಿದನು. "ಮಾತು ತಾನೆ ಮನದೊಳಗೆ ಸೂಚಿಸುವುದು ಪತಿಗುತ್ತರವ ಕೂಡಬಾರದು ಕೈಕೊಂಡ ವ್ರತವ ಕೆಡಿಸಬಾರದು" ಈ ರೀತಿಯ ದಿನನಿತ್ಯದ ಮಾತುಗಳನ್ನು, ನುಡಿಮುತ್ತುಗಳನ್ನು ಕಾವ್ಯದಲ್ಲಿ ಬಣ್ಣಿಸಿ ಮಹಾಕಾವ್ಯವನ್ನು ರಚಿಸಿದ್ದಾನೆ. ಕನ್ನಡ ನುಡಿ ಬೆಳವಣಿಗೆಗೆ ಮಹದುಪಕಾರ ಮಾಡಿದ್ದಾನೆ. ಕವಿಯ ಶೈಲಿ ದೇಸಿ ದಾಟಿಯಲ್ಲಿ ಮೂಡಿಬಂದಿದೆ. ಕವಿಯ ಶೈಲಿಯಲ್ಲಿ ಇನ್ನೊಂದು ಅಂಶ ಕಡಿಮೆಯಾದಂತೆ ಕಾಣುತ್ತದೆ.

ಕವಿ ಆಯ್ದುಕೊಂಡಿರುವ ಕಥಾವಸ್ತುವಿನಲ್ಲಿ ಯಾವುದೇ ರೀತಿಯ ಭಾವೋದ್ವೇಗ, ಉಗ್ರಭಾವಗಳು, ತೀವ್ರ ಭಾವನೆಗಳನ್ನು ತರಿಸುವ ಸನ್ನಿವೇಶಗಳು ಬರುವುದಕ್ಕೆ ಎಲ್ಲಿಯೂ ಎಡೆಮಾಡಿಕೊಟ್ಟಿಲ್ಲ. ವೀರ, ಕೌರ್ಯ, ಭಯಂಕರ, ಭೀಭತ್ಸ, ರಸಗಳು ಕಾವ್ಯದಲ್ಲಿ ಬರುವುದಿಲ್ಲ. ಇಂಥ ಭಾವಗಳು ಬರುವ ಸಂದರ್ಭ ಬಂದಲ್ಲಿ ಅದನ್ನು ಸರಳಗೊಳಿಸಿ ಬಿಡುತ್ತಾನೆ. ಪಂಪ, ರನ್ನರ ಕಾವ್ಯಗಳನ್ನು ಹೋಲಿಸಿದರೆ ಈ ಒಂದು ಅಂಶದಲ್ಲಿ ಹಿಂದೆ ಉಳಿಯುವಂತೆ ಕಾಣುತ್ತಾನೆ. ಕವಿಯ ಶೈಲಿ ಎಷ್ಟು ಸಹಜವೋ, ಅಷ್ಟೇ ಸರಳ ಸುಂದರವಾಗಿದೆ.

ಸುಕೋಮಲ ಭಾವನೆಗಳನ್ನು ಹೇಳಲು ಸಾಂಗತ್ಯ ಹೇಳಿ ಮಾಡಿಸಿದ ಅಚ್ಚಗನ್ನಡ ದೇಸಿ ಮಟ್ಟಾಗಿದೆ. ಶೃಂಗಾರ, ಶಾಂತ, ಪ್ರೀತಿ, ವಾತ್ಸಲ್ಯ, ಮೃದುಹಾಸ್ಯ, ಮೃದು ಸ್ವಭಾವ ತಿಳಿಸಲು ಸಾಂಗತ್ಯದಲ್ಲಿ ಸಂಪೂರ್ಣ ಕಾವ್ಯವನ್ನು ಬರೆದಿದ್ದಾನೆ. ಇದೇ ಒಂದೇ ಛಂದ ಪ್ರಕಾರವನ್ನು ಬಳಸಿಕೊಂಡು ಕೃತಿ ರಚಿಸಿದ್ದಾನೆ. ಪದ್ಯಗಳ ಮಧ್ಯ ಬೇರೆ ಪ್ರಕಾರಗಳನ್ನು ತಂದಿಲ್ಲ. ಜನಪದ ದಾಟಿಯಲ್ಲಿ ದಿನಬಳಕೆಯ ಮಾತುಗಳನ್ನು, ದಿನ ಬದುಕಿನ ಚಿತ್ರಣವನ್ನು ರತ್ನಾಕರ ಕೃತಿಯಲ್ಲಿ ಬಣ್ಣಿಸಿ, ವರ್ಣಿಸಿ ಒಂದು ಬೃಹತ್ ಕಾವ್ಯವನ್ನಾಗಿ ಮಾಡಿದ್ದಾನೆ.

ಸಾಂಗತ್ಯದ ಸಾಮಾನ್ಯ ಲಕ್ಷಣಕ್ಕಿಂತ ಭಿನ್ನವಾಗಿ ಕೆಲವೊಮ್ಮೆ ವಿಷ್ಣುಗಣ ಸ್ಥಾನದಲ್ಲಿ ಪರ್ಯಾಯವಾಗಿ ಬ್ರಹ್ಮಗಣ ಬರುತ್ತದೆ. ಕವಿ ಸಮರ್ಥವಾಗಿ ಇದನ್ನು ಬಳಸಿರುವುದು ಕಂಡುಬರುತ್ತದೆ. ಛಂದಸ್ಸಿಗೆ ಸಂಬಂಧಿಸಿದ ಅಧ್ಯಯನದಲ್ಲಿ ಉದಾಹರಣೆ ಸಹಿತವಾಗಿ ನೋಡಬಹುದು. ಈ ರೀತಿ ರತ್ನಾಕರವರ್ಣಿಯು ಬಳಸಿದ ಛಂದಸ್ಸಿನಲ್ಲಿ ಅನನ್ಯತೆಯನ್ನು ಗುರುತಿಸಬಹುದು. ಇದು ಇವನ ವೈಶಿಷ್ಟ್ಯತೆಯೂ ಆಗಿದೆ.

ಸಂಭಾಷಣೆ, ನಿರೂಪಣಾ ವಿಧಾನವನ್ನು ತಾನು ಹೇಳುವುದಕ್ಕಿಂತ ಪಾತ್ರಗಳ ಸಂಭಾಷಣೆಯ ಮೂಲಕ ಹೇಳಿಸಿಕೊಂಡು ಸಾಗುತ್ತಾನೆ. ಕವಿಯು ತಂದ ಕೌಟುಂಬಿಕ ಸನ್ನಿವೇಶಗಳು, ಗಂಡ ಹೆಂಡತಿಯರ ಮಧ್ಯೆ ನಡೆದ ಸರಸ ಸಂಭಾಷಣೆಗಳು ಚೆಲುವು ಚೆಕ್ಕಂದಗಳು ಶೃಂಗಾರ ರಸವನ್ನು ಎತ್ತಿಹಿಡಿಯುತ್ತವೆ. ಅಲ್ಲದೆ ಮನೆ ಪರಿಸರದ ನೆಮ್ಮದಿಯ ಬದುಕನ್ನು ಹೇಳುತ್ತದೆ. ಇಂಥ ಸನ್ನಿವೇಶದಲ್ಲಿ ಮೂಡಿ ಬಂದ ಪಾತ್ರಗಳು ಕೃತಿ ಬೆಳೆಯುವುದಕ್ಕೆ ಕಾರಣವಾಗಿದೆ. ಇಲ್ಲಿ ಬರುವ ಸಂಗೀತ, ನೃತ್ಯ ವರ್ಣನೆಗಳು ಎಲ್ಲವೂ ಕವಿ ಓದುಗರ ಮನಸ್ಸಿನ ದಣಿವನ್ನು ಇಂಗಿಸಲು ಕೊಟ್ಟ ಮನರಂಜನೆಯಂತಿವೆ.

ಒಟ್ಟಾರೆಯಾಗಿ ರತ್ನಾಕರನ 'ಭರತೇಶವೈಭವ' ಕನ್ನಡ ಸಾಂಗತ್ಯದಲ್ಲಿ ಭರತನನ್ನು ಕುರಿತಾದ ಸಮಗ್ರವಾಗಿ ಮೂಡಿಬಂದ ಮೊದಲನೆಯ ಕೃತಿ ಎಂಬ ಹೆಗ್ಗಳಿಕೆಯನ್ನು ಪಡೆದಿದೆ. ಛಂದಸ್ಸು, ಕಾವ್ಯದ ವಸ್ತು, ರೀತಿ, ರಸ ನಿರೂಪಣೆ, ನಾಟಕೀಯತೆ, ನೂತನ ವಸ್ತು ನಿರ್ಮಾಣ, ಪಾತ್ರ ಸೃಷ್ಟಿ ಮೊದಲಾದವುಗಳ ಮೂಲಕ ಕನ್ನಡ ಸಾಹಿತ್ಯದಲ್ಲಿಯೇ ಅಪೂರ್ವ ಕಾವ್ಯವಾಗಿಸಿದ್ದಾನೆ. ರತ್ನಾಕರ ಕನ್ನಡ ಮಹಾಕವಿಗಳಲ್ಲಿ ಒಬ್ಬನಾಗಿದ್ದಾನೆ. ಕನ್ನಡ ಸಾಹಿತ್ಯದಲ್ಲಿ ಇವನ ಹೆಸರು ಶಾಶ್ವತವಾಗಿ ನಿಲ್ಲುತ್ತದೆ. ಆತನ ಕಾವ್ಯವು ಇಂದಿನ ಸಾಮಾಜಿಕ ಸಂದರ್ಭದಲ್ಲಿ ಅರ್ಥಪೂರ್ಣವಾಗಿದೆ, ಅಗತ್ಯವಾಗಿದೆ. ಎಲ್ಲ ಜನಮನದಲ್ಲಿ ಕವಿ ಅಜರಾಮರನಾಗಿ ಉಳಿಯುತ್ತಾನೆ. ನಿಜಕ್ಕೂ ಈ ಕೃತಿ ಕನ್ನಡದ ಒಂದು ಅಪರೂಪ ಕೃತಿ ಎನಿಸಿದೆ.

*****

ಅನುಬಂಧ

ಗ್ರಂಥಋಣ

ಅನುಬಂಧ

ಗ್ರಂಥಋಣ

೧. ಅಂಗಡಿ ಎಸ್.ಎಸ್., ದಾಸ ಸಾಹಿತ್ಯ ಶಬ್ದ ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೨. ಅಂಗಡಿ ಎಸ್.ಎಸ್., ವಚನ ಸಾಹಿತ್ಯ ಭಾಷೆ, ಲಿಂಗಾಯಿತ ಅಧ್ಯಯನ ಅಕಾಡೆಮಿ, ಬೆಳಗಾವಿ, ೨೦೦೭.

೩. ಉಗ್ರಾಣ ಮಂಗೇಶರಾವ್ (ಸಂ.), ಭರತೇಶವೈಭವ (ಭೋಗವಿಜಯ), ವಿವೇಕಾಭ್ಯುದಯ ಕಾರ್ಯಾಲಯ, ಮಂಗಳೂರು, ೧೯೬೧.

೪. ಕರ್ಕಿ ಡಿ.ಎಸ್., ಕನ್ನಡ ಛಂದೋವಿಕಾಸ, ಭಾರತೀಯ ಬುಕ್ ಡಿಪೋ ಮತ್ತು ಪ್ರಕಾಶನ, ಧಾರವಾಡ, ೧೯೫೫.

೫. ಕಮಲಾ ಹಂಪನಾ, ಬೊಗಸೆ, ಸಿ.ವಿ.ಜಿ. ಪಬ್ಲಿಕೇಶನ್, ಬೆಂಗಳೂರು, ೨೦೦೩.

೬. ಕೃಷ್ಣಕುಮಾರ ಸಿ.ಪಿ. (ಸಂ.), ಕನ್ನಡ ಛಂದಸ್ಸು ಚರಿತ್ರೆ, ಸಂ.೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೦.

೭. ಕೃಷ್ಣಕುಮಾರ ಸಿ.ಪಿ. (ಸಂ.), ಕನ್ನಡ ಛಂದಸ್ಸು ಚರಿತ್ರೆ, ಸಂ.೨, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೮. ಕೇಶವಶರ್ಮ ಕೆ., (ಸಂ.), ಸಾಹಿತ್ಯ ವಿಮರ್ಶೆ ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೭.

೯. ಚಂದ್ರಶೇಖರ ವಸ್ತ್ರದ, ರತ್ನಾಕರವರ್ಣಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮.

೧೦. ನಾರಾಯಣ ಸಿ.ಕೆ., ಭರತೇಶನ ದಿನಚರಿ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೨.

೧೧. ನಾರಾಯಣ ಕೆ.ವಿ., ಶೈಲಿಶಾಸ್ತ್ರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮.

೧೨. ನಾಗಭೂಷಣಸ್ವಾಮಿ ಓ.ಎಲ್., ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ, ೧೯೯೮.

೧೩. ನಾಗರಾಜಯ್ಯ (ಸಂ.) ದಿವ್ಯಧ್ವನಿ.

[illegible]

೧೪. ಬ್ರಹ್ಮಪ್ಪ ಜಿ., (ಅನು.) **ರತ್ನಾಕರ ವೈಭವ (ತಿಳಿಗನ್ನಡ)**, ರತ್ನತ್ರಯ ಪ್ರಕಾಶನ, ಮೈಸೂರು, ೧೯೯೭.

೧೫. ಬರಗೂರು ರಾಮಚಂದ್ರಪ್ಪ (ಪ್ರ.ಸಂ.), **ಕರ್ನಾಟಕ ಸಂಗಾತಿ**, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೦೨.

೧೬. ಬ್ರಹ್ಮಪ್ಪ ಜಿ., **ಭರತೇಶವೈಭವ ರತ್ನಾಕರವರ್ಣಿ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೨೦೦೩.

೧೭. ಮುರುಳಿಧರ ಎಚ್.ಎಸ್., **ತಂಬೂರಿ ಮೀಟಿದವ**, ಅಂಕಿತ ಪುಸ್ತಕ, ಬೆಂಗಳೂರು, ೨೦೦೫.

೧೮. ರಂಗಣ್ಣ ಎಸ್.ವಿ., **ಶೈಲಿ-೧**, ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೪೪.

೧೯. ರಂಗಣ್ಣ ಎಸ್.ವಿ., **ಶೈಲಿ-೨**, ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೫೮.

೨೦. ರವಿ ಎಂ., **ಛಂದಃಸ್ವಾದ**, ಅಖಿಲಾ ಏಜೆನ್ಸಿಸ್, ಮೈಸೂರು, ೧೯೯೯.

೨೧. ರಾಘವೇಂದ್ರರಾವ್ ಎಚ್.ಎಸ್., **ಶತಮಾನದ ಸಾಹಿತ್ಯ ವಿಮರ್ಶೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧.

೨೨. ರಂ.ಶ್ರೀ. ಮುಗಳಿ, **ಕನ್ನಡ ಸಾಹಿತ್ಯ ಚರಿತ್ರೆ**, ಗೀತಾ ಬುಕ್ ಹೌಸ್, ಮೈಸೂರು, ೨೦೦೨.

೨೩. ರಂ.ಶ್ರೀ. ಮುಗಳಿ, **ಕನ್ನಡ ಸಾಹಿತ್ಯ ಚರಿತ್ರೆ, ಆಧುನಿಕ ಕನ್ನಡ ಸಾಹಿತ್ಯ ಸಹಿತ**, ಸಮಾಜ ಪುಸ್ತಕಾಲಯ, ಧಾರವಾಡ, ೨೦೦೪.

೨೪. ರಂ.ಶ್ರೀ ಮುಗಳಿ, **ವಿಮರ್ಶೆ ವ್ರತ**, ಉಷಾ ಪ್ರೆಸ್, ಮೈಸೂರು, ೧೯೭೦.

೨೫. ವಸಿಷ್ಠ, **ರತ್ನಾಕರವರ್ಣಿ ಭರತೇಶವೈಭವ**, ಚೇತನ ಬುಕ್ ಹೌಸ್, ಮೈಸೂರು, ೧೯೯೯.

೨೬. ವಿಠಲರಾವ್ ಗಾಯಕವಾಡ್, **ರೂಪ ಸ್ವರೂಪ**, ಶಾಲಿನಿ ಪಬ್ಲಿಕೇಶನ್ಸ್, ಹೊಸಪೇಟೆ.

೨೭. ವಾಮನಬೇಂದ್ರೆ (ಸಂ.), **ಸಾಹಿತ್ಯಯೋಗ**, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೬೫.

೨೮. ವೆಂಕಟಾಚಲಶಾಸ್ತ್ರೀ ಟಿ.ವಿ., **ಕನ್ನಡ ಛಂದಸ್ಸು**, ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೭೦.

೨೯. ವೆಂಕಟಾಚಲಶಾಸ್ತ್ರೀ ಟಿ.ವಿ., **ಕನ್ನಡ ಛಂದ ಸ್ವರೂಪ**, ಕನ್ನಡ ಅಧ್ಯಯನ ಸಂಸ್ಥೆ, ೧೯೭೮.

೩೦. ವೆಂಕಟಾಚಲಶಾಸ್ತ್ರೀ ಟಿ.ವಿ., **ಕನ್ನಡ ಸಾಹಿತ್ಯ ಚರಿತ್ರೆ**, ಸಂ.೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೮೧.

೩೧. ವೆಂಕಟಾಚಲಶಾಸ್ತ್ರೀ ಟಿ.ವಿ., **ಶಾಸ್ತ್ರೀಯ-೨**, ಸಪ್ನ ಬುಕ್ ಹೌಸ್, ಬೆಂಗಳೂರು, ೧೯೯೯.

೩೨. ವೆಂಕಟಾಚಲಶಾಸ್ತ್ರೀ ಟಿ.ವಿ., **ಶಾಸ್ತ್ರೀಯ-೪**, ಸಪ್ನ ಬುಕ್ ಹೌಸ್, ಬೆಂಗಳೂರು, ೧೯೯೯.

೩೩. ಶಾಮರಾಯ ತ.ಸು. (ಸಂ.) ಭರತೇಶವೈಭವ ಸಂಗ್ರಹ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೬.

೩೪. ಸತ್ಯನಾರಾಯಣ ಬಿ.ಆರ್., ಕನ್ನಡ ಛಂದಸ್ಸು ಸಂಕ್ಷಿಪ್ತ ಪರಿಚಯ, ಸುಮುಖ ಪಬ್ಲಿಕೇಶನ್ಸ್, ಬೆಂಗಳೂರು, ೨೦೦೩.

೩೫. ಸೀತಾರಾಮಯ್ಯ ವಿ. (ಸಂ.), ಕವಿ ಕಾವ್ಯ ಪರಂಪರೆ-೧೯ ರತ್ನಾಕರವರ್ಣಿ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೪.

೩೬. ಸೀತಾರಾಮಯ್ಯ ವಿ., ವಿಮರ್ಶೆ ಸಂ.೩, ಕವಿ ಕಾವ್ಯ ಪರಂಪರೆ, ವಿ.ಸೀ.ಸ್ಮರಣ ವೇದಿಕೆ.

೩೭. ಹಂಪ ನಾಗರಾಜಯ್ಯ, ಬಾಹುಬಲಿ ರೂಪ ಸ್ವರೂಪ ವಿಶ್ವರೂಪ, ಸಿ.ವಿ.ಜಿ. ಪಬ್ಲಿಕೇಶನ್ಸ್, ಬೆಂಗಳೂರು, ೨೦೦೫.

೩೮. ಹಿಪ್ಪರಗಿ ಎ.ಎಸ್., ಛಂದೋವಾಹಿನಿ, ಪ್ರೌಢಶಾಲಾ ಕನ್ನಡ ವಿಷಯ ಭೋದಕ, ಬಿಜಾಪುರ, ೨೦೦೨.

೩೯. ಹಿರೇಮಠ ಎಸ್.ವಿ., ಛಂದೋ ವಿಹಾರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೫.

*****

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

AKSHARA GRANTHALAYA
ACC.NO. 130087